## ೬. ವೀರಸೇನಸ್ವಾಮಿ ಮತ್ತು ಜಿನಸೇನಸ್ವಾಮಿ ಅವರುಗಳ ಟೀಕೆಗಳು

"ಬಪ್ಪದೇವಗುರುವಿನ ಬಳಿಕ ಸ್ವಲ್ಪಕಾಲ ಕಳೆಯಲು ಚಿತ್ರಕೂಟ ಪುರವಾಸಿಯಾದ ಶ್ರೀಮಾನ್ ಏಲಾಚಾರ್ಯನು ಸಿದ್ಧಾಂತ ತತ್ತ್ವಜ್ಞನಾದನು. ಅವನ ಬಳಿಯಲ್ಲಿ ವೀರ ಸೇನಗುರುವು ಸಕಲ ಸಿದ್ಧಾಂತದ ಅಧ್ಯಯನ ಮಾಡಿ ಉಪರಿತಮ ನಿಬಂಧನ ಮೊದ ಲಾದ ಎಂಟು ಅಧಿಕಾರಗಳನ್ನು ಬರೆದನು. ಆ ಭಗವಂತನು ಅನಂತರ ಗುರುವಿನ ಅನುಜ್ಞೆಪಡೆದು ಚಿತ್ರಕೂಟದಿಂದ ವಾಟಗ್ರಾಮಕ್ಕೆ ಬಂದನು. ಇಲ್ಲಿ ಆನತೇಂದ್ರನಿಂದ ನಿರ್ಮಿತವಾಗಿದ್ದ ಜಿನಗೃಹ(ಬಸದಿ)ದಲ್ಲಿದ್ದ ವ್ಯಾಖ್ಯಾಪ್ರಜ್ಞಪ್ತಿಯು ಇವರಿಗೆ ದೊರೆಯಿತು. ಪೂರ್ವಷಟ್ ಖಂಡದಿಂದ (ಹಿಂದಿನ ಷಟ್ ಖಂಡಗಳಿಂದ ?) ಬಳಿಕ ಅದರಲ್ಲಿಹದಿನೆಂಟು ವಿಕಲ್ಪಗಳ ಉಪರಿತಮ ಬಂಧನಾದಿ ಅಧಿಕಾರಗಳಿಂದ 'ಸತ್ಕರ್ಮ' ಎಂಬ ಹೆಸರಿನ ಆರನೇ ಖಂಡವನ್ನು ಸಂಕ್ಷೇಪಿಸಿ ರಚಿಸಿ ಈ ರೀತಿಯದಾದ ಆರು ಖಂಡಗಳಿಗೆ ಎಪ್ಪತ್ತೆರಡು ಸಹಸ್ರ ಗ್ರಂಥ ಪ್ರಮಾಣದ ಸಂಸ್ಕೃತ–ಪ್ರಾಕೃತ ಭಾಷಾ ಮಿಶ್ರವಾದ ಧವಲಾ ಎಂಬ ಟೀಕೆಯನ್ನು ಬರೆದನು. ಬಳಿಕ ಕಷಾಯಪ್ರಾಭೃತದ ನಾಲ್ಕು ವಿಭಕ್ತಿಗಳಿಗೆ ಉತ್ತಮವಾದ ಇಪ್ಪತ್ತು ಸಹಸ್ರ ಗ್ರಂಥ ಪ್ರಮಾಣದ ಜಯಧವಲಾ ಟೀಕೆಯನ್ನುರಚಿಸಿ ದಿವಂಗತನಾದನು. ಅನಂತರ ಅವನ ಶಿಷ್ಯನಾದ ಪ್ರಸಿದ್ಧ ಜಯಸೇನ (ಜಿನಸೇನ) ಗುರುವು ಅದರ ಮಿಕ್ಕ ಭಾಗವನ್ನು ನಲವತ್ತುಸಹಸ್ರ ಗ್ರಂಥ ಪ್ರಮಾಣದ ಟೀಕೆಯೊಡನೆ ಪೂರ್ಣಗೋಳಿಸಿದನು. ಈ ರೀತಿಯಿಂದ (ಈ) ಜಯಧವಲಾಟೀಕೆಯು ಅರವತ್ತು ಸಹಸ್ರ ಗ್ರಂಥ ಪ್ರಮಾಣವುಳ್ಳದ್ದಾಯಿತು."

ಈ ಸಂಗತಿಯನ್ನು ಹೇಳುವ ಧವಲಾ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುವ (ಪು.೩೮) ಇಂದ್ರನಂದಿ ಶ್ರುತಾವತಾರದ ಶ್ಲೋಕಗಳನ್ನು ಇಲ್ಲಿ ಮುಂದೆ ಕೊಡಲಾಗಿದೆ.

ಕಾಲೇ ಗತೇ ಕಿಯತ್ಯಪಿ ತತಃ ಪುನಶ್ಚಿತ್ರಕೂಟಪುರವಾಸೀ ।

ಶ್ರೀಮಾನೇಲಾಚಾರ್ಯೋ ಬಭೂವ ಸಿದ್ಧಾಂತತತ್ತ್ವಜ್ಞಃ ॥ ೧೭೭ ॥

ತಸ್ಯ ಸಮೀಪೇ ಸಕಲಂ ಸಿದ್ಧಾಂತಮಧೀತ್ಯ ವೀರಸೇನ ಗುರುಃ ।
ಉಪರಿತಮ ನಿಬಂಧನಾದ್ಯಧಿಕಾರಾನಷ್ಟ ಚ ಲಿಲೇಖ । ॥ ೧೭೮ ॥

ಅಗತ್ಯ ಚಿತ್ರಕೂಟಾತ್ತತಃ ಸ ಭಗವಾನ್ ಗುರೋರನುಜ್ಞಾನಾತ್ ॥
ವಾಟಗ್ರಾಮೇ ಚಾತ್ರಾನತೇಂದ್ರ ಕೃತಜಿನಗೃಹೇ ಸ್ಥಿತ್ವಾ ॥ ೧೭೯ ॥

ವ್ಯಾಖ್ಯಾಪ್ರಜ್ಞಪ್ತಿಮವಾಪ್ಯ ಪೂರ್ವಷಟ್ ಖಂಡತಸ್ತತಸ್ಮಿನ್ ।
ಉಪರಿತಮ ಬಂಧನಾದ್ಯಧಿಕಾರೈರಷ್ಟಾದಶ ವಿಕಲ್ಪೈಃ ॥ ೧೮೦ ॥

ಸತ್ಕರ್ಮನಾಮಧೇಯಂ ಷಷ್ಠಂ ಖಂಡಂ ವಿಧಾಯ ಸಂಕ್ಷಿಪ್ಯ ।
ಇತಿ ಷಣಾಂ ಖಂಡಾನಾಂ ಗ್ರಂಥ ಸಹಸ್ರೈರ್ದ್ವಿ ಸಪ್ತತ್ಯಾ ॥ ೧೮೧ ॥

ಪ್ರಾಕೃತ–ಸಂಸ್ಕೃತ–ಭಾಷಾಮಿಶ್ರಾಂ ಟೀಕಾಂ ವಿಲಿಖ್ಯ ಧವಲಾಖ್ಯಾಂ ।
ಜಯಧವಲಾಂಚ ಕಷಾಯ ಪ್ರಾಭೃತಕೇ ಚತಸೃಣಾಂ ವಿಭಕ್ತೀನಾಂ ॥ ೧೮೨ ॥

ವಿಂಶತಿ ಸಹಸ್ರಸದ್ ಗ್ರಂಥ ರಚನಯಾ ಸಂಯುತಾಂ ವಿರಚ್ಯ ದಿವಂ ॥
ಯಾತಸ್ತತಃ ಪುನಸ್ತಚ್ಛಿಷ್ಯೋ ಜಯಸೇನ (ಜಿನಸೇನ ?) ಗುರು ನಾಮಾ ॥ ೧೮೩ ॥

ತಚ್ಛೇಷಂ ಚತ್ವಾರಿಂಶತಾ ಸಹಸ್ರೈಃ ಸಮಾಪಿತವಾನ್ ।
ಜಯಧವಲೇತವಂ ಷಷ್ಠಿ ಸಹಸ್ರಗ್ರಂಥೋ ಭವಟ್ಟೀಕಾ ॥ ೧೮೪ ॥

ಈ ಶ್ರುತಾವತಾರದ ಬೇರೋಂದು ಪ್ರತಿಯಲ್ಲಿ[೧] ರುವ ಮುಂದಿನ ಪಾಠಭೇದಗಳು ಶೋಧನೆ–ದೃಷ್ಟಿಯಿಂದ ಗಮನಾರ್ಹವಾಗಿವೆ.

ಪ್ರಸ್ತಾವನೆಯ ಪಾಠ ಬೇರೊಂದು ಪ್ರತಿಯ ಪಾಠ

೧. ಉಪರಿತಮ ನಿಬಂಧನಾದ್ಯಧಿಕಾರಾನಷ್ಟ
ಉಪಲಿಖಿತಮನಿಬಂಧನಾದ್ಯಧಿಕಾರಾನಷ್ಟಾದಶ
ಚ ಲಿಲೇಖ (೧೭೮) ಲಿಲೇಖ್ ಅ(೧೭೮)

೨. ವಾಟಗ್ರಾಮೇ ಚಾತ್ರಾನತೇಂದ್ರ ಕೃತ ಜಿನ ವಾಟಗ್ರಾಮೇಚಾತ್ರಾನತೇನ ಕೃತ ಜಿನಗೃಹೇ
ಗೃಹೇ ಸ್ಥಿತ್ವಾ (೧೭೯) ಸ್ಥಿತ್ವಾ (೧೭೯)

೩. ಉಪರಿತಮಬಂಧನಾದ್ಯಧಿಕಾರ್ಯೆ
ಪರಮಬಂಧನಾದ್ಯಧಿಕಾರ್ಯೈರಷ್ಟಾದಶವಿಕಲ್ಪ್ಯೈಃ
ರಷ್ಟಾದಶವಿಕಲ್ಪ್ಯೈಃ(೧೮೦) (೧೮೦)

೪. ಸತ್ಕರ್ಮನಾಮಧೇಯಂ ಷಷ್ಠಂ ಖಂಡಂ ಸತ್ಕರ್ಮನಾಮಧೇಯ ಷಷ್ಠಂ ಖಂಡಂ
ವಿಧಾಯ (೧೮೧) ನಿಧಾಯ (೧೮೧)

೫. ಜಯಸೇನ ಗುರುನಾಮಾ (೧೮೩) ಜಿನಸೇನ ಗುರುನಾಮಾ (೧೮೩)

ಪೂಜ್ಯ ಪಾದಚರಿತೆಯ ಕಥನದಲ್ಲಿ, : ಹಿಂದೆ ಹೇಳಿರುವಂತೆ, ಸಂಧಿಗ್ಧತೆಯ, ಅಸ್ಪಷ್ಟತೆಯ ಕೆಲವು ಲೋಪದೋಷಗಳಿದ್ದರೂ ಶೋಧನೆಯ ದೃಷ್ಟಿಯಿಂದ ಗಮನಿಸಬೇಕಾದ ಕೆಲವು ಅಂಶಗಳಿವೆ. ಆದ್ದರಿಂದ ಇದರ ಕಥನವನ್ನು ಇಲ್ಲಿ ಮುಂದೆ ಕೊಡಲಾಗಿದೆ.

ಸೋಮುನಂದದ ಚಿತ್ರಕೂಟ, ಆ ಮಹಾಪುರದಲ್ಲಿ ತತ್ತ್ವಜ್ಞನಾದ ಎಲ್ಲಾಚಾರ್ಯ ಮುನಿಪತಿ ಇದ್ದನು. ಕಮಲಶ್ರೀಗೆ ಸೋಂಕಿದ್ದ ಗ್ರಹವನ್ನು ವಿಮಲ ಜ್ವಾಲಿನಿದೇವಿ ವರದಿಂದ ಬಿಡಿಸಿದನು. ಜ್ವಾಲಿನೀದೇವಿಯು ಸುಮನಲೋಕದಿಂದ ಬಂದು ಏಳುದಿವಸ ಉಪವಾಸವಿದ್ದ ಮುನಿಪನಿಗೆ

ಸುಮನದಿಂದ ಪ್ರತ್ಯಕ್ಷಳಾದಳು, ಬೀಜಾಕ್ಷರಗಳನ್ನು ಹೇಳಿದಳು, ಲೋಹತಗಡದಿಂದ ಹೂಳಿಟ್ಟು ಹೋಮವ ಮಾಡೆ ಯಂತ್ರತಂತ್ರಾದಿ ಸಾಮರ್ಥ್ಯನಾದ ಆ ಯತಿಯು ತಂತ್ರವ ಬಲ್ಲ ಸುಜಾಣನಾದನು (?) ಸಂತ್ರಾಸಿ ಬೀಜಾಕ್ಷರದಿಂದ ಬಸದಿಯನ್ನು ಮಂತ್ರಿಯ(?) ಎಂಟನೆಯ ತೀರ್ಥಂಕರ ಚಂದ್ರಪ್ರಭಜಿನನ ನಿಲಯವನು ಯತೀಂದ್ರನು ಉತ್ಸಾಹದಿಂದ ಕಟ್ಟಿಸಿದನು. ತಂದ್ರ ರಹಿತವಾದ ಜಿನಚಂದ್ರನು ಉದ್ಯೋಗಪುರದಲ್ಲಿ ಅಂದದಿಂದ ಒಪ್ಪಿದನು. ಅವರ (ಎಲ್ಲಾಚಾರ್ಯರ?) ಸಮೀಪದಲ್ಲಿ ಸಕಲ ಸಿದ್ಧಾಂತವನ್ನು ಸುವಿನಯದಿಂದ ಓದಿ ಕೇಳ್ದು ಆ ನವ ವೀರಸೇನ ಮಹಾಗುರುವು ಕವಿ ಸಂಹಿತಾದಿ ಸಕಲವನ್ನು ಹೇಳಿದನು. ಉಪರಿಮುನಿಯು(?) ಮೆಂ ಬಂಧನಾದ್ಯಧಿಕಾರಕುಪಚರಿಯಾದಷ್ಟಾದಶವ ಚಪಲ ಚಿತ್ತವನಿರಿಸುವ ಪರಿ ಮೊದಲಾದುಪದೇಶವೆಲ್ಲದ ಬರೆದ. ವಾಟಾಖ್ಯಗ್ರಾಮದ ಜಿನ ಗೃಹದೊಳು ನಿಂದು ಮೀಟಸೆ ಪೇಳ್ದನು ಶ್ರುತವಾ. ಪಾಟಿಸಿ ವ್ಯಾಖ್ಯಾಪ್ರಜ್ಞಪ್ತಿ ಷಟ್ಕರ್ಮಕವಾಟವ ದೊರೆದವೊಲೆಂದ. ಸಾವಿರ ಸಂಖ್ಯೆಯಿಂದ ಗ್ರಂಥ ಪ್ರಾಕೃತವಾದಿಕೋವಿದ ನೊರೆದ ಸಂಸ್ಕೃತವಾ. ಪಾವನವೆನೆ ಧವಲಾಖ್ಯವನೊರೆದನು. ಧವಲ ಮಹಾಧವಲದ ಪೇಳಿದನು, ಜಯಧವಲ ಕಷಾಯಪ್ರಾಭೃತವಾ ವಿವರಿಸಿದನು. ಗ್ರಂಥ ಮಿಪ್ಪತ್ತಸಾಸಿರ ಹವಣಿಸೆ ವೊರೆದನಾ ಮುನಿಪ, ಏನೆಂಬೆನು ಅವನ ಸಮೀಪದೊಳಿರುವ ಸುಭಾನು ಭಾವನು ತತ್ತ್ವಯುತನು ಮೌನಧ್ಯಾನವನಾಂತ ವಿಜಯಧವಲ ಜಯಸೇನ ಬರೆದ ಖುತುಸಂಖ್ಯೆ. ಮತ್ತೆ ಉತ್ತಮಗುಣಭೂಷಣ ಜಿನಸೇನಾಚಾರ್ಯನು ಹುಟ್ಟಿದನು. ಮಹಾಪುರಾಣ ರಚಿಸಲುದ್ದೇಶಿಸಿ ಮೊದಲ ಶ್ಲೋಕ ರಚನೆ ಮಾಡಿದಾಗ ಅಗ್ನಿಗಣವು ಬಂದಿತು. ಅದನ್ನು ಕಂಡು ತನಗೆ ತಾನೇ ತಿಳಿದು ಜ್ಞಾನಿಗಳಾದ ಐನೂರು ಶಿಷ್ಯರನ್ನು ಕರೆಯಿಸಿದನು. ಅವರಲ್ಲಿ ಉತ್ಕೃಷ್ಟಮತಿಗಳಾದ ಇರ್ವರನ್ನು ಇದಿರಲ್ಲಿರ್ದುದನ್ನು ವಿವರಿಸಲು ಹೇಳಿದನು. ಅವರಲ್ಲೊಬ್ಬನು 'ಅಗ್ರೇ ತಿಷ್ಠತಿ ಶುಷ್ಕೋವೃಕ್ಷಃ' ಎಂದು ಹೇಳಿದುದನ್ನು ಕೇಳಿ ಕಠಿಣವಾಯ್ತೆಂದು ಕೊಂಡು 'ನೀನು ಹೇಳು' ಎಂದು ಗುಣಭದ್ರರಿಗೆ ಹೇಳಿದನು. ಗುಣಭದ್ರರು ಮೃದುವಾಗಿ 'ನೀರಸತರುರಿವಪುರತೋಭಾತಿ'ಎಂದು ಹೇಳಿದರು. ಜೀನಸೇನರು ಎಂಟು ಸಾವಿರ ಗ್ರಂಥ ಪ್ರಮಾಣದಿಂದ ತ್ರೈವರ್ಣಿಕ ನಾಮ ಪ್ರತಿಷ್ಠಾದಿಯಾಗಿ ಶೌಚಾಚಾರ ಮುಂತಾಗಿ

ಗರ್ಭಾನ್ವಯ ಸೂಚನೆ ತತ್ವಾನ್ವಯದ ಆಚಾರವಾದಿ ದೀಕ್ಷಾನ್ವಯ ಸಕಲವನು ಯೋಚನೆಯಿಲ್ಲದೊರೆದನು. ಬಳಿಕ ಗುಣಭದ್ರರು ಉಳಿದ ಹನ್ನೆರಡು ಸಾವಿರವನ್ನು ಹೇಳಿದರು.

ಈ ಮೇಲಿನ ಹೇಳಿಕೆಗಳಲ್ಲಿ ಕೆಲವಂಶಗಳು ಪರಿಷ್ಕಾರಾರ್ಹವಾಗಿವೆ : ವೀರಸೇನಾ ಚಾರ್ಯರು ಚಿತ್ರಕೂಟದ ಪುರದಲ್ಲಿ ತಮ್ಮ ಸಿದ್ಧಾಂತದ ಅಧ್ಯಯನವನ್ನು ಪೂರಯಿಸಿದ ಅನಂತರ ಉಪರಿತಮ ನಿಬಂಧನಾದಿ ಅಧಿಕಾರಗಳನ್ನು ಬರೆದರೆಂದು ಹೇಳಿದೆ. ಇದನ್ನು ಶ್ರುತಾವತಾರದಲ್ಲಿ ಯಾಗಲಿ. ಪೂಜ್ಯಪಾದಚರಿತೆಯಲ್ಲಾಗಲಿ 'ಟೀಕೆ'ಯೆಂದಾಗಲಿ, 'ವ್ಯಾಖ್ಯಾನ'ವೆಂದಾಗಲಿ ಹೇಳಿರುವುದಿಲ್ಲ. ಈ ಅಧಿಕಾರ ಸಂಖ್ಯೆಯನ್ನು ಮಾನ್ಯ ಹೀರಾಲಾಲ್ ಜೈನ್ ಅವರು ಉಲ್ಲೇಖಿಸಿರುವ ಶ್ರುತಾವತಾರದಲ್ಲಿ (ಶ್ಲೋ. ೧೭೮) 'ಅಷ್ಟ' (ಎಂಟು) ಎಂದಿದೆ. ಆದರೆ ಹಿಂದೆ ಹೇಳಿರುವ ಮತ್ತೊಂದು ಪ್ರತಿಯಲ್ಲಿ ಈ ಸಂಖ್ಯೆ 'ಅಷ್ಟದಶ' ಹದಿನೆಂಟು ಎಂದಿದೆ.[೧] ಹೀಗೆಯೇ ಪೂ.ಪಾದ ಚರಿತೆಯಲ್ಲಿಯೂ ಅಷ್ಟದಶ ಎಂದೇ ಇದೆ. ಇದರಿಂದ ವೀರಸೇನಾಚಾರ್ಯರು ವಾಟಗ್ರಾಮಕ್ಕೆ ಹೋಗುವ ಮುನ್ನ ಚಿತ್ರಕೂಟ ಗ್ರಾಮದಲ್ಲಿಯೇ ಹದಿನೆಂಟು ಅಧಿಕಾರಗಳನ್ನು ರಚಿಸಿರುವರೆಂಬುದು ಸಂಭಾವ್ಯವೆನಿಸುವುದು. ವೀರಸೇನಾಚಾರ್ಯರು ವಾಟಗ್ರಾಮಕ್ಕೆ ಹೋದ ಬಳಿಕ ಅಲ್ಲಿ "ಅವರಿಗೆ (ಬಪ್ಪದೇವ ಗುರು ರಚಿಸಿದ್ದ ಟೀಕೆ ?) ವ್ಯಾಖ್ಯಾಪ್ರಜ್ಞಪ್ತಿ ದೊರೆಯಿತು. ಮತ್ತೆ ಅವರು ಮೇಲಿನ ಬಂಧನಾದಿ ಹದಿನೆಂಟು ಅಧಿಕಾರವನ್ನು ಪೂರ್ಣಗೊಳಿಸಿ 'ಸತ್ಕರ್ಮ' ಎಂಬ ಹೆಸರಿನ ಆರನೇ ಖಂಡವನ್ನು ಎಪ್ಪತೆರಡು ಸಾವಿರ ಶ್ಲೋಕ ಪ್ರಮಾಣದ ಪ್ರಾಕೃತ ಮಿಶ್ರಿತವಾದ ಧವಲಾ ಟೀಕೆಯನ್ನು ಬರೆದರು"ಎಂದು ಮಾನ್ಯ ಹೀರಾಲಾಲ್ ಜೈನ್ ಅವರು ಹೇಳಿದ್ದಾರೆ.[೨] ಆದರೆ ಶ್ರುತಾವತಾರದ (೧೮೦ನೇ) ಶ್ಲೋಕದಿಂದ ಈ ಅರ್ಥ ಮೂಡುವುದೇ ಇಲ್ಲ. ಈ ಮೇಲೆ ಹೇಳಿರುವ 'ಬಂಧನಾದಿ' ಎಂಬುದು ವಾಸ್ತವವಾಗಿ 'ನಿಬಂಧನಾದಿ' ಎಂದಿರಬೇಕು. ಇಲ್ಲಿ 'ಪೂರ್ಣಗೊಳಿಸಿ' ಎಂದು ಅರ್ಥೈಸಲು ಅಗತ್ಯವಾದ ಪದ ಪ್ರಯೋಗವು ಮೂಲ (೧೮೦ನೇ) ಶ್ಲೋಕದಲ್ಲಿ ಇಲ್ಲವೇ ಇಲ್ಲ. ಪ್ರಾಯಶಃ ಹಿಂದಿನ ಶ್ಲೋಕದಲ್ಲಿ (೧೭೮ ರಲ್ಲಿ) 'ಅಷ್ಟ' ಎಂದಿದ್ದುದರಿಂದ ಅದನ್ನು 'ಅಷ್ಟಾದಶ'ಕ್ಕೆ ಅನ್ವಿತವಾಗುವಂತೆ 'ಪೂರ್ಣಗೊಳಿಸಿದರು' ಎಂಬ ಅರ್ಥವನ್ನು ಹೇಳಿರುವಂತೆ ಕಂಡುಬರುತ್ತದೆ. ಹಿಂದಿನ (೧೭೮ನೇ) ಶ್ಲೋಕದಲ್ಲಿಯೇ 'ಅಷ್ಟಾದಶ' ಪದಪ್ರಯೋಗವಿರುವುದರ ವಾಸ್ತವಿಕತೆಯ

ಸಂಭಾವ್ಯತೆಯನ್ನು ಈ ಹಿಂದೆ ಹೇಳಿದೆ. ಆದ್ದರಿಂದ ಇಲ್ಲಿ 'ಪೂರ್ಣಗೊಳಿಸಿ' ಎಂದು ಅರ್ಥೈಸಲು ಅವಕಾಶವೇ ಇಲ್ಲ. ಇದೂ ಅಲ್ಲದೆ ಈ (೧೮೦ನೇ) ಶ್ಲೋಕದಲ್ಲಿರುವ 'ಪೂರ್ವಷಟ್ ಖಂಡಂತಃ' ಎಂಬುದರ ಬಗ್ಗೆ ಮಾನ್ಯ ಹೀರಾಲಾಲ್ ಜೈನ್ ಅವರು ಗಮನ ಹರಿಸಿದಂತೆ ಕಂಡುಬರುವುದಿಲ್ಲ. ಈ ಶ್ಲೋಕದಲ್ಲಿ 'ವ್ಯಾಖ್ಯಾಪ್ರಜ್ಞಪ್ತಿ' ವಾಪ್ಯ ಎಂಬ ಪಾಠವಿದೆ. ಆದರೆ ಪೂ.ಪಾದ ಚರಿತೆಯಲ್ಲಿ 'ಪಾಟಿಸಿ ವ್ಯಾಖ್ಯಾಪ್ರಜ್ಞಪ್ತಿ' ಎಂದಿದೆ. ಪುನಃ ಧವಲಾ ಪ್ರಸ್ತಾವನೆಯ ಉಲ್ಲೇಖದ (೧೮೧ನೇ) ಶ್ಲೋಕದಲ್ಲಿ 'ಸತ್ಕರ್ಮ ನಾಮಧೇಯಂ ಷಷ್ಠಂ ಖಂಡಂ ವಿಧಾಯ' ಎಂದಿದೆಯಾದರೆ ಮತ್ತೊಂದು ಪ್ರತಿಯ ಇದೇ ಶ್ಲೋಕದಲ್ಲಿ 'ವಿಧಾಯ' ಎಂಬುದರ ಬದಲಾಗಿ 'ನಿಧಾಯ' ಎಂದಿದೆ. ಈ ಎಲ್ಲ ಅಂಶಗಳನ್ನು ಹಾಗೂ ಹಿಂದೆ, ಬಪ್ಪದೇವಗುರುವು ಷಟ್‌ಖಂಡಾಗಮದ ಆರನೇ ಖಂಡವನ್ನು ಪ್ರತ್ಯೇಕಿಸಿ ಅದರ ಸ್ಥಾನದಲ್ಲಿ ವ್ಯಾಖ್ಯಾ ಪ್ರಜ್ಞಪ್ತಿಯನ್ನಿರಿಸಿದರೆಂಬ ಸಂಗತಿಯನ್ನು ಗಮನಕ್ಕೆ ತಂದುಕೊಂಡು ಪ್ರಸ್ತುತ ಸಂದ ಭರ್ದ ತಾತ್ಪರ್ಯಾರ್ಥವನ್ನು ಮುಂದಿನಂತೆ ಹೇಳಬಹುದಾಗಿದೆ. '(ಬಪ್ಪದೇವಗುರುವು ಷಟ್‌ಖಂಡಾಗಮದಿಂದ ಆರನೆಯ ಖಂಡವನ್ನು ಬೇರ್ಪಡಿಸಿ ಅದರ ಸ್ಥಾನದಲ್ಲಿ ಆರನೇ ಖಂಡವಾಗಿ ಇರಿಸಿದ್ದ) ವ್ಯಾಖ್ಯಾಪ್ರಜ್ಞಪ್ತಿಯನ್ನು 'ಪೂರ್ವಷಟ್‌ಖಂಡತಃ' ಎಂದರೆ ಬಪ್ಪದೇವಗುರುವಿನಿಂದ ನಿಷ್ಪನ್ನವಾಗಿದ್ದ ಹಿಂದಿನ ಷಟ್‌ಖಂಡದಿಂದ ಪಾಟಿಸಿ ಎಂದರೆ ತೆಗೆದುಹಾಕಿ ತತಃ ತಸ್ಮಿನ್–ಬಳಿಕ ಅದರಲ್ಲಿ ಉಪರಿತಮ ನಿಬಂಧ ನಾದಿ ಅಷ್ಟಾದಶವಿಕಲ್ಪಗಳ ಅಧಿಕಾರಗಳಿಂದ ಸತ್ಕರ್ಮ ಎಂಬ ಹೆಸರಿನ ಆರನೆಯ ಖಂಡವನ್ನು (ವಿಧಾಯ) ನಿಧಾಯ–ಇರಿಸಿ ಸಂಗ್ರಹಿಸಿ ಈ ರೀತಿಯಿಂದ ರೂಪಿತವಾದ ಆರು ಖಂಡಗಳಿಗೆ ಎಪ್ಪತ್ತೆರಡು ಸಹಸ್ರ ಗ್ರಂಥ ಪ್ರಮಾಣದ ಪ್ರಾಕೃತ–ಸಂಸ್ಕೃತ ಮಿಶ್ರವಾದ ಧವಲಾಟೀಕೆಯನ್ನು ಬರೆದು . . .' ಇದರಂತೆ, ಪೂರ್ವ ಪರಂಪರೆಯಿಂದ ಬಂದಿದ್ದ ಷಟ್ಖಂಡಾಗಮದ ಆರನೆಯ ಖಂಡವಾದ ಮಹಾಬಂಧವನ್ನು ಬೇರ್ಪಡಿಸಿ ಅದರ ಸ್ಥಾನದಲ್ಲಿ ಬಪ್ಪದೇವ ಗುರುವು ವ್ಯಾಖ್ಯಾಪ್ರಜ್ಞಪ್ತಿಯನ್ನಿರಿಸಿ ಆ ಮೂಲಕ ಷಟ್ಖಂಡಗಳನ್ನು ನಿಷ್ಪನ್ನಗೊಳಿಸಿದ್ದರು. ವೀರಸೇನಾಚಾರ್ಯರು ಈ ವ್ಯಾಖ್ಯಾಪ್ರಜ್ಞಪ್ತಿಯನ್ನು ತೆಗೆದುಹಾಕಿ ಅದರ ಸ್ಥಾನದಲ್ಲಿ ನಿಬಂಧನಾದಿ ಹದಿನೆಂಟು ವಿಕಲ್ಪಗಳ ಅಧಿಕಾರಗಳಿಂದ ಕುಡಿದ 'ಸತ್ಕರ್ಮ'ವನ್ನಿರಿಸಿ ಆ ರೀತಿಯಿಂದ ಏರ್ಪಟ್ಟ ಷಟ್‌ಖಂಡಗಳಿಗೆ ಎಪ್ಪತ್ತೆರಡು ಸಹಸ್ರ ಗ್ರಂಥ ಪ್ರಮಾಣದ ಪ್ರಾಕೃತ–ಸಂಸ್ಕೃತ ಮಿಶ್ರಧವಲಾ

ಟೀಕೆಯನ್ನು ರಚಿಸಿದರೆಂದು ತಿಳಿಯಬಹುದು. ಈ ತಾತ್ಪರ್ಯಾರ್ಥವನ್ನು ಸಮರ್ಥಿ ಸುವ ಅಂಶವೂ ಇದೆ. ಈ ಬಗ್ಗೆ ಮಾನ್ಯ ಹೀರಾಲಾಲ್ ಜೈನ್ ರವರ ಮುಂದಿನ ಹೇಳಿಕೆಯನ್ನು ಗಮನಿಸಬೇಕಾಗಿದೆ.

"(ಆದರೆ) ಇಂದ್ರನಂದಿಯವರು ಮುಂದುವರಿದು ಹೇಳಿದ್ದಾರೆ, ಏನೆಂದರೆ, ವೀರ ಸೇನಾಚಾರ್ಯರು ಏಲಾಚಾರ್ಯರಿಂದ ಸಿದ್ಧಾಂತದ ಮಾಡಿದ ಅನಂತರ ನಿಬಂಧನಾದಿ ಹದಿನೆಂಟು (ಅಷ್ಟಾದಶ) ಅಧಿಕಾರಗಳೊಡನೆ 'ಸತ್ ಕರ್ಮ' ಎಂಬ ಹೆಸರಿನ ಆರನೇ ಖಂಡವನ್ನು ಸಂಕ್ಷೇಪದಿಂದ ವಿಧಾನ ಮಾಡಿದರು, ಮತ್ತು ಈ ಪ್ರಕಾರದಿಂದ ಆರೂ ಖಂಡಗಳಿಗೆ ಎಪ್ಪತ್ತೆರಡು ಸಾವಿರ ಗ್ರಂಥ ಪ್ರಮಾಣದ ಧವಲಾಟೀಕೆ ರಚಿಸಿದರು."

ಮುಂದುವರಿದು ಮಾನ್ಯ ಹೀರಾಲಾಲ್ ಜೈನ್ ಅವರು ಹೇಳಿರುವ ಈ ಮುಂದಿನ ಸಂಗತಿಯೂ ಪ್ರಸ್ತುತ ಪ್ರಸಂಗ ದಲ್ಲಿ ಅವಧಾರಣಾರ್ಹವಾಗಿದೆ.

"ಧವಲಾದಲ್ಲಿ ವರ್ಗಣಾಖಂಡದ ಸಮಾಪ್ತಿ ಹಾಗೂ ಭೂತಬಲಿಕೃತ ಮಹಾ ಬಂಧದ ಸೂಚನೆಯ ಬಳಿಕ, ನಿಬಂಧನ, ಪ್ರಕಮ, ಉಪಕ್ರಮ, ಉದಯ, ಮೋಕ್ಷ, ಸಂಕ್ರಮ, ಲೇಶ್ಯಾ, ಲೇಶ್ಯಾಕರ್ಂ, ಲೀಶ್ಯಾಪರಿಣಾಮ, ಸಾತಾಪಾತ, ದೀರ್ಘ ಹ್ರಸ್ವ, ಭವಧಾರಣೀಯ, ಪುದ್ಗಲಾತ್ಮ ನಿಧತ್ತ–ಅನಿಧತ್ತ, ನಿಕಾಚಿತ–ಅನಿಕಾಚಿತ, ಕರ್ಮಸ್ಥಿತಿ, ಪಶ್ಚಿಮ ಸ್ಕಂಧ, ಮತ್ತು ಅಲ್ಪ ಬಹುತ್ವ ಎಂಬ ಹದಿನೆಂಟು (ಅಷ್ಟಾದಶ) ಅನುಯೋಗ ದ್ವಾರಗಳ ಕಥನ ಮಾಡಿದೆ. ಮತ್ತು ಈ ಸಮಸ್ತ ಭಾಗವನ್ನು ಚೂಲಿಕಾ ೯'ಎತ್ತೋ ಉವರಿಮಗಂಥೋ ಚೂಲಿಯಾ') ಎಂದು ಹೇಳಿದೆ.

ಇಂದ್ರನಂದಿಯವರು ಪ್ರಕಾರ ಈ ಚೂಲಿಕೆಯೇ ಸಂಕ್ಷೇಪದಿಂದ ಆರನೇ ಖಂಡವಾಗಿದೆ ಮತ್ತು ಇದರ ಹೆಸರು ಅಸ್ಕರ್ಮ, ಹಾಗೂ ಇದರೊಡಗೂಡಿ ಧವಲಾಷಟ್ ಖಂಡಾಗಮವು (?) ಎಪ್ಪತ್ತೆರಡುಸಾವಿರ ಗ್ರಂಥಪ್ರಮಾಣವಾಗುವುದು."

ಮಾನ್ಯ ಹೀರಾಲಾಲ್ ಜೈನ್ ಅವರು ಈ ಮೇಲೆ ಹೇಳಿರುವ ಪ್ರಕಾರ ವೀರಸೇನ ಸ್ವಾಮಿಯವರಿಂದ ರಚಿತವಾದ ನಿಬಂಧನದಿ ಹದಿನೆಂಟು ಅಧಿಕಾರಗಳ ರಚನೆಯು 'ಸಕ್ರರ್ಮ' ಎಂಬ ಹೆಸರಿನದಾಗಿದ್ದು ಅದನ್ನು ಆರನೇಖಂಡವಾಗಿ ವಿಧಾನಮಾಡಿರುವರೆಂದು ಸ್ಪಷ್ಟವಾಗುವುದು. ಇದನ್ನು ಚೂಲಿಕಾ ಎಂದೂ ಹೆಸರಿಸಿದೆ.

ಬಪ್ಪದೇವಗುರುವು, ಹಿಂದೆ ಹೇಳಿರುವಂತೆ, ಷಟ್ಖಂಡಾಗಮದಲ್ಲಿ ಕೊನೆಯದಾಗಿದ್ದ ಆರನೇಖಂಡ ಮಹಾಬಂಧವನ್ನು ಬೇರ್ಪಡಿಸಿ, ಅದರ ಸ್ಥಾನದಲ್ಲಿ ವ್ಯಾಖ್ಯಾ ಪ್ರಜ್ಞಪ್ತಿಯನ್ನು ಇರಿಸಿ ಅದರೊಡನೆ ಷಟ್ ಖಂಡವನ್ನು ನಿಷನ್ನಗೊಳಿಸಿದ್ದರು. ಪೂರ್ವಾ ಚಾರ್ಯರೊಬ್ಬರಿಂದ ಮಾಡಲಾದ ಈ ಯೋಜನೆಯನ್ನು ವಿನಾಕಾರಣ ವೀರಸೇನಾ ಚಾರ್ಯರು ವ್ಯತ್ಯಯ ಮಾಡಿರಲಾರರು. ಪ್ರಾಯಶಃ ಹಿಂದಿನ ಐದುಖಂಡಗಳಿಗೆ ಮತ್ತು ಆರನೆಯದಾದ ಮಹಾಬಂಧಕ್ಕೆ ಅರ್ಥವತ್ತಾಗಿ ಸಂಬಂದ ಕಲ್ಪಿಸುವುದಕ್ಕಾಗಿ ವೀರಸೇನರು ಬಪ್ಪದೇವರಿಂದ ಸಂಯೋಜಿತವಾಗಿದ್ದ ವ್ಯಾಖ್ಯಾಪ್ರಜ್ಞಪ್ತಿಯನ್ನು ತೆಗೆದುಹಾಕಿ ಅದರ ಸ್ಥಾನದಲ್ಲಿ 'ಸತ್ ಕಾರ್ಮ'ವನ್ನು ಚೂಲಿಕೆಯ ರೂಪದಲ್ಲಿರಿಸಿದ್ದಾರೆ. ಬಪ್ಪ ದೇವಗುರುವಿನಿಂದಾದ ವ್ಯಸ್ಥೆಯಲ್ಲಿ ವ್ಯಾಖ್ಯಾಪ್ರಜ್ಞಪ್ತಿಯು ಆರನೇ ಖಂಡವೆನಿಸಿ ಕೊಂಡಿದ್ದಿತಾಗಿ ಅದರ ಸ್ಥಾನದಲ್ಲಿ ವೀರಸೇನರಿಂದ ಯೋಜಿತವಾದ ಸತ್‌ಕರ್ಮವೂ ಆರನೆಯ ಖಂಡವೆನಿಸಿಕೊಂಡಿರಬಹುದಾದ ಸಂಭವವಿದೆ.

ವೀರಸೇನಾಚಾರ್ಯರು, ತಮ್ಮಿಂದ ರಚಿತವಾಗಿದ್ದು ಆರನೇ ಖಂಡವೆನೆಸಿ ಸಂಯೋಜಿಸಲಾದ ಸತ್ಕರ್ಮಸಹಿತವಾದ ಪೂರ್ವಪರಂಪರೆಯಿಂದ ಬಂದಿದ್ದ ಮೊದಲ ಐದುಖಂಡಗಳಿಗೆ ಎಪ್ಪತ್ತೆರಡು ಸಹಸ್ರ ಗ್ರಂಥಪ್ರಮಾಣದ ಧವಲಾ ಎಂಬ ಹೆಸರಿನ ಟೀಕೆಯನ್ನು ಬರೆದರೆಂದು ಇಂದ್ರನಂದಿಯವರು ಹೇಳಿರುವುದು ಈಗ ತಿಳಿದ ಸಂಗತಿಯಾಗಿದೆ. ಇದಲ್ಲದೆ, ಇಂದ್ರನಂದಿಯವರು ಹೇಳಿರುವಂತೆ, ಕಷಾಯ ಪ್ರಾಭೃತದ ನಾಲ್ಕು ವಿಬಕ್ತಿಗಳಿಗೆ ಇವರು ಇಪ್ಪತ್ತು ಸಹಸ್ರ ಗ್ರಂಥಪ್ರಮಾಣದ ಜಯಧವಲಾ ಎಂಬ ಟೀಕೆಯನ್ನು ಬರೆದರೆಂಬುದೂ ತಿಳಿದ ಸಂಗತಿಯಾಗಿದೆ.

ಈ ಜಯಧವಲಾಟೀಕೆಯ ಗ್ರಂಥಪ್ರಮಾಣದ ಬಗ್ಗೆ ಕಷಾಯಪಾಹುಡ ಪ್ರಸ್ತಾವನಾಕಾರರು ಹೇಳಿರುವ ಸಂಗತಿಯನ್ನು (ಪು. ೭೧) ಪ್ರಸ್ತುತ ಪ್ರಸಂಗದಲ್ಲಿ ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಜಯಧವಲಾದ ಅಂತ್ಯದಲ್ಲಿ ಜಿನಸೇನರಿಂದ ರಚಿತವಾಗಿರುವ ೩೬ ಪದ್ಯಗಳ ಒಂದು ಪ್ರಶಸ್ತಿ ಇದೆ. "ಇದರ ೩೫ನೇ ಪದ್ಯದಲ್ಲಿ ಹೇಳಿರುವಂತೆ, 'ಅನತಿ ಪ್ರೌಢಮತಿಯಾದ ಜಿನಸೇನರು ಗುರುವಿನ ಆಜ್ಞೆಯ ಪ್ರಕಾರ ಈ ಪುಣ್ಯ ಶಾಸನ ಪವಿತ್ರ ಬರೆದನು'.

ಪ್ರಶಸ್ತಿಯ ೩೬ನೇ ಪದ್ಯದಲ್ಲಿ 'ಗ್ರಂಥದ ಪೂರ್ವಾರ್ಧದಲ್ಲಿ (ಭೂರಿ) ಹೆಚ್ಚಿನದಾದ ವಕ್ತವ್ಯವು ಪ್ರಕಾಶಿತವಾಗಿರಲು, ಅದನ್ನು ಚೆನ್ನಾಗಿ ನೋಡಿ ಅಲ್ಪವಕ್ತವ್ಯವು ಪಶ್ಚಿಮಾರ್ಧದಲ್ಲಿ ಅವನಿಂದ (ಜಿನಸೇನನಿಂದ) ಪೂರಯಿಸಲ್ಪಟ್ಟಿತು' ಎಂದು ಹೇಳಿದೆ. ಇಲ್ಲಿ ಹೇಳಿರುವ ಪೂರ್ವಾರ್ಧವು ಎಲ್ಲಿಯವರೆಗೆ ಎಂಬುದನ್ನು ನಿರ್ಣಯಿಸಲು ಅಗತ್ಯವಾದ ಉಲ್ಲೇಖ ದೊರೆಯುವುದಿಲ್ಲ. ಜಿನಸೇನಸ್ವಾಮಿಯವರು, ತಾವು ರಚಿಸಿರುವ ಜಯಧವಲಾ ಭಾಗವನ್ನು 'ಪದ್ಧತಿ' ಎಂದು ಮತ್ತು ವೀರಸೇನರಿಂದ ರಚಿತ ಭಾಗವನ್ನು 'ಟೀಕಾ' ಎಂದೂ ಹೇಳಿರುವರಾದರೂ ಇವೆರಡರ ಶೈಲಿಯಲ್ಲಿ ಯಾವ ಭೇಧವೂ ಗೋಚರಿಸುವುದಿಲ್ಲವಾದ್ದರಿಂದ ಯಾರ ಯಾರ ರಚನೆ ಎಷ್ಟೆಷ್ಟುಎಂಬುದನ್ನು ನಿರ್ಣಯಿಸಲು ಸಾಧ್ಯವಾಗುವುದಿಲ್ಲ. ಈ ಬಗ್ಗೆ ಶ್ರುತಾವತಾರದಲ್ಲಿ ಆಚಾರ್ಯ ಇಂದ್ರನಂದಿಯವರು ಕಷಾಯಪಾಹುಡದ ನಾಲ್ಕು ವಿಬಕ್ತಿಗಲ ಮೇಲೆ ವೀರಸೇನರು ಇಪ್ಪತ್ತು ಸಾವಿರ ಗ್ರಂಥ ಪ್ರಮಾಣದ ಟೀಕೆ ರಚಿಸಿ ಸ್ವರ್ಗಸ್ಥರಾದರೆಂದು ಮತ್ತು ಆ ಬಳಿಕ ಅವರ ಶಿಷ್ಯ ಜಿನಸೇನ ಗುರುವು ನಲ್ವತ್ತು ಸಹಸ್ರ ಗ್ರಂಥಪ್ರಮಾಣದ ಟೀಕೆ ರಚಿಸಿ ಅದನ್ನು ಸಮಾಪ್ತಿಗೊಳಿಸಿದರೆಂದೂ ಮತ್ತು ಈ ರೀತಿಯಿಂದ ಆ ಟೀಕೆಯು ಅರವತ್ತು ಸಾವಿರ ಗ್ರಂಥ ಪ್ರಮಾಣದ್ದಾಗಿದೆಯೆಂದು ಹೇಳಿದ್ದಾರೆ.

(ಇವರ ಈ ಹೇಳಿಕೆಯು ಸ್ಥೂಲದೃಷ್ಟಿಯದಾಗಿದೆಯೆಂದು ಕಂಡು ಬರುತ್ತದೆ): ಪ್ರಶಸ್ತಿಯ ಒಂದು ಶ್ಲೋಕ ಮುಂದಿನಂತಿದೆ :

ವಿಭಕ್ತಿಃ ಪ್ರಥಮಸ್ಕಂಧೋ ದ್ವಿತೀಯಃ ಸಂಕ್ರಮೋದಯಃ ।

ಉಪಯೋಗಶ್ಚ ಶೇಷಸ್ತು ತೃತೀಯಃ ಸ್ಕಂಧ ಇಷ್ಯತೇ ॥ ೧೦ ॥

ಅರ್ಥಾತ್–ಈ ಗ್ರಂಥದಲ್ಲಿ ಮೂರು ಸ್ಕಂಧಗಳಿವೆ. ಅವುಗಳಲ್ಲಿ ವಿಬಕ್ತಿಯವರೆಗೆ ಮೊದಲನೆಯ ಸ್ಕಂಧವು ಸಂಕ್ರಮ, ಉದಯ ಮತ್ತು ಉದಯಾಧಿಕಾರಗಳವರೆಗೆ ಎರಡನೇ ಸ್ಕಂಧವು ಮತ್ತು ಉಳಿದ ಭಾಗವು ಮುರನೆಯ ಸ್ಕಂಧವೆಂದು ತಿಳಿಯಲಾಗಿದೆ.

ಇದರ ಪ್ರಕಾರ ಪೆಜ್ಜದೋಷವಿಭಕ್ತಿ, ಪ್ರಕೃತಿ, ವಿಭಕ್ತಿ ಅನುಭಾಗ ವಿಭಕ್ತಿ ಮತ್ತು ಪ್ರದೇಶ ವಿಭಕ್ತಿಗಳ ಪರ್ಯಂತ ಮೊದಲನೆ ಸ್ಕಂಧವಾಗುವುದು.ಇಲ್ಲಿ ಗಮನಿಸ ಬೇಕಾದ ವಿಶೇಷವೆಂದರೆ ಝಿಣಾಝಿಣ ಮತ್ತು ಸ್ಥಿತ್ಯಂತಿಕ ಅಧಿಕಾರಗಳು ಪ್ರದೇಶ ವಿಭಕ್ತಿಯ ಅಧಿಕಾರದ ಚೂಲಿಕಾ

ರೂಪದಿಂದ ಹೇಳಲ್ಪಟ್ಟಿವೆ. ಇವಲ್ಲದೆ, ಎರಡನೆಯ ಸ್ಕಂಧವನ್ನು ಸಂಕ್ರಮ ಅಧಿಕಾರದಿಂದ ಗಣನೆ ಮಾಡಿದೆಯಾಗಿ (ಝಿಣಾಝಿಣ ಮತ್ತು ಸ್ಥಿತ್ಯಂತಿಕ) ಇವೆರಡೂ ವಿಭಕ್ತಿ ಸ್ಕಂಧದಲ್ಲಿಯೇ ಸಂಮಿಲಿತವಾಗಿವೆಯೆಂದು ತಿಳಿಯಬೇಕು.

ಇಂದ್ರನಂದಿಯವರ ಹೇಳಿಕೆಯಂತೆ ಮೊದಲ ಸ್ಕಂಧದ ಟೀಕೆಯು ವೀರಸೇನ ಸ್ವಾಮಿಯವರಿಂದ ರಚಿತವಾಗಿದೆ. ಅವರು, (ಇಂದ್ರನಂದಿಯವರು) ನಾಲ್ಕು ವಿಬಕ್ತಿಗಳ ಮೇಲೆ ಟೀಕೆ ಬರೆದಿರುವರೆಂಬ ಉಲ್ಲೇಖ ಮಾಡಿರುವರಾದರೂ, ಪೆಜ್ಜದೋಷ ವಿಬಕ್ತಿ, ಸ್ಥಿತಿ ವಿಭಕ್ತಿ, ಅನುಭಾಗ ವಿಭಕ್ತಿ, ಮತ್ತು ಪ್ರದೇಶ ವಿಭಕ್ತಿಗಳಲ್ಲಿ ಹೇಳಿದ ಎಲ್ಲ ಅಧಿಕಾರಗಳೂ ಗರ್ಭಿತವಾಗಿವೆಯೆಂದು ತಿಳಿಯಲಾಗಿದೆ. ಆದ್ದರಿಂದ 'ನಾಲ್ಕು ವಿಭಕ್ತಿ' ಎಂಬ ಅವರ ಉಲ್ಲೇಖದಿಂದ 'ಪ್ರಥಮ ಸ್ಕಂಧ' ಎಂಬುದಾದ ಅವರ ಆಶಯವು ತಿಳಿದು ಬರುವುದು. ಆದರೆ ಜಯಧವಲಾ ಪ್ರತಿಯ ಆಧಾರದಿಂದ ಗಣನೆ ಮಾಡುವಲ್ಲಿ ವಿಭಕ್ತಿ ಅಧಿಕಾರ ಪರ್ಯಂತದ ಗ್ರಂಥಪ್ರಮಾಣವು ಸುಮಾರು ಇಪ್ಪತ್ತಾರುವರೆ ಸಾವಿರ ಶ್ಲೋಕ ಪ್ರಮಾಣವುಳ್ಳದ್ದಾಗಿ ನಿಲ್ಲುತ್ತದೆ. ಇದರ ಪರ್ಯಂತ ಗ್ರಂಥದ ವಿವೇಚನೆಯು ವಿಸ್ತೃತವಾದುದಾಗಿ ಹಾಗೂ ಸ್ಪಷ್ಟರೂಪದ್ದಾಗಿಯೂ ಗೋಚರಿಸುತ್ತದೆ. ಇದಲ್ಲದೆ ಇಲ್ಲಿಂದ ಮುಂದೆ ಅಷ್ಟೊಂದು ವಿಸ್ತೃತ ವರ್ಣನೆಯುಳ್ಳದ್ದಾಗಿಯೂ ಇಲ್ಲ. ಆದ್ದರಿಂದ ಸಂಭವನೀಯವಾಗಿ ಮೊದಲ ಸ್ಕಂದದ ಪರ್ಯಾಂತ ವೀರಸೇನರ ರಚನೆಯಾಗಿದೆಯೆಂದು ತಿಳಿಯಬಹುದು. ಇಂದ್ರನಂದಿಯವರು ಪ್ರತ್ಯೇಕ ಸ್ಕಂಧವನ್ನು ಒಂದೊಂದು ಭಾಗವೆಂದು ತಿಳಿದು ಸ್ಥೂಲರೂಪದಿಂದ ಅದರ ಪರಿ ಮಾಣವನ್ನು ೨೦ ಸಾವಿರವೆಂಬುದಾಗಿ ಹೇಳಿರುವರೆಂದು ಕಂಡುಬರುತ್ತದೆ. ಈ ರೀತಿಯಲ್ಲದೆ, ಇಂದ್ರನಂದಿಯವರು, 'ನಾಲ್ಕು ವಿಭಕ್ತಿ' ಎಂಬುದನ್ನು ಪೂರ್ಣ ಪ್ರಥಮ ಸ್ಕಂಧವೆಂದು ಗ್ರಹಣ ಮಾಡದೆ, ಕೇವಲ ನಾಲ್ಕು ವಿಭಕ್ತಿಮಾತ್ರದ್ದಾನ್ನಾಗಿ ಗ್ರಹಣೆ ಮಾಡಿರಬಹುದಾದ ಸಂಭವವೂ ಇದೆ. ಏನೇ ಇರಲಿ, ಇಂದ್ರನಂದಿಯವರ ಕಥನಾನುಸಾರ, ವೀರಸೇನರು ಮೂರರಲ್ಲಿ ಒಂದು ಭಾಗದ ರಚನಕಾರರಾಗಿದ್ದಾರೆ ಮತ್ತು ಮಿಕ್ಕ ಎರಡು ಭಾಗ ಪ್ರಮಾಣದ ಗ್ರಂಥವನ್ನು ಜಿನಸೇನರು ರಚನೆಮಾಡಿ ಪೂರೈಸಿದ್ದಾರೆ. ಈ ಬಗ್ಗೆ ಸ್ವಯಂ ಜಿನಸೇನರು ಬಹುವಕ್ತವ್ಯದ ಪೂರ್ವಾರ್ಧವು ತಮ್ಮ ಗುರುವಿನ ರಚನೆಯಾಗಿದೆಂದೂ

ಅಲ್ಪವಕ್ತವ್ಯದ ಮುಂದಿನ ಭಾಗವು ತಮ್ಮ ರಚನೆಯಾಗಿದೆಯೆಂದೂ ಹೇಳಿದ್ದಾರೆ. ಇಲ್ಲಿ ಹೇಳಿರುವ 'ಬಹುವಕ್ತವ್ಯ ಪೂರ್ವಾರ್ಧ'ವು ವಿಭಕ್ತಿ ಅಧಿಕಾರ ಪರ್ಯಂತವಾದುದಾಗಿದೆಯೆಂದು ಕಂಡುಬರುತ್ತದೆ. ಈ ರೀತಿಯಾಗಿ ಇಂದ್ರನಂದಿಯವರ ಹೇಳಿಕೆಯಂತೆ ವೀರರಸೇನಾಚಾರ್ಯರು ರಚಿಸಿರುವ ಧವಲಾ ಮತ್ತು ಜಯಧವಲಾ ಟೀಕೆಗಳ ಒಟ್ಟು ಗ್ರಂಥಪ್ರಮಾಣವು ೯೨ ಸಹಸ್ರ ಗ್ರಂಥ ಪ್ರಮಾಣವುಳ್ಳದ್ದಾಗಿದೆ. ಆದರೆ ಕ. ಪಾ. ಪ್ರಸ್ತಾವನಾಕಾರರ ಪರಿಷ್ಕರಣದಂತೆ ಇದು ತೊಂಭತ್ತೆಂಟುವರೆ ಸಹಸ್ರ ಗ್ರಂಥಪ್ರಮಾಣವುಳ್ಳದ್ದಾಗುವುದು. ಇಷ್ಟಾದರೂ ಇವರು ರಚಿಸಿದ ಸತ್ಕರ್ಮದ ಗ್ರಂಥ ಪ್ರಮಾಣ ತಿಳಿಯದಾಗಿದೆ. ಕಷಾಯಪ್ರಾಭೃತದ ಮಿಕ್ಕ ಭಾಗಕ್ಕೆ ಜಯಧವಲಾ ಟೀಕೆ ಮುಂದುವರಿಸಿ ಜಿನಸೇನಾಚಾರ್ಯರು ನಲವತ್ತು ಸಹಸ್ರ ಗ್ರಂಥ ಪ್ರಮಾಣದ ಟಿಕೆ ರಚನೆ ಮಾಡಿದ್ದಾರೆ.. ಷಟ್ ಖಂಡಾಗಮದ ಆರನೇ ಭಾಗವಾದ ಮಹಾಬಂಧಕ್ಕೆ ಇವರಿಂದ ಟೀಕೆ ರಚನೆಯಾಗಲಿಲ್ಲವೆಂದೇ ತಿಳಿಯ ಬೇಕಾಗಿದೆ. ಈ ರೀತಿಯಾಗಿ ಷಟ್ ಖಂಡಾಗಮ ಮತ್ತು ಕಷಾಯಪ್ರಾಭೃತಗಳಿಗೆ ವೀರಸೇನರಿಂದ ಮತ್ತು ಜಿನಸೇನರಿಂದ ಧವಲಾ ಮತ್ತು ಜಯಧವಲಾ ಎಂಬ ಹೆಸರಿನ ಟೀಕೆಗಳು ರಚಿತವಾಗಿವೆಯೆಂದು ಇಂದ್ರನಂದಿಯವರ ಹೇಳಿಕೆಯಿಂದ ಸ್ಪಷ್ಟವಾಗುವುದು. ಆದರೆ ಈ ಹೆಸರಿನ ಟೀಕೆಗಳಲ್ಲದೆ ಮಹಾಧವಾಲಾ ಮತ್ತು ವಿಜಯಧವಲಾ ಎಂಬ ಹೆಸರಿನ ಟೀಕೆಗಳಿದ್ದುವೆಂಬ ಅಭಿಮತವು ಪ್ರಚಾರದಲ್ಲಿದೆ. ಕಾರಂಜಾದ ಪ್ರಾಚೀನ ಶಾಸ್ತ್ರ ಭಂಡಾರದಲ್ಲಿರುವ ಪ್ರತಿಕ್ರಮಣ ಗ್ರಂಥದಲ್ಲಿ ಮುಂದಿನಂತೆ ಹೇಳಿದೆ.[೪]

ಧವಲೋಹಿ ಮಹಾಧವಲೋ ಜಯಧವಲೋ ವಿಜಯಧವಲಶ್ಚ ।
ಗ್ರಂಥಾಃ ಶ್ರೀಮದ್ಭಿರಮೀ ಪ್ರೋಕ್ತಾಃ ಕವಿಧಾತರಸ್ತಸ್ಮಾತ್ ॥

ಮೂಲತಃ ಷಟ್‌ಖಂಡಾಗಮದ ಆರನೇ ಖಂಡವಾದ ಮಹಾಬಂಧವನ್ನೇ 'ಮಹಾಧವಲಾ' ಎಂದು ಹೆಸರಿಸುವ ರೂಢಿಯುಂಟಾಗಿರಬೇಕೆಂಬ ಅಭಿಪ್ರಾಯವೇರ್ಪಟ್ಟಿದೆ.[೫] ಇದಲ್ಲದೆ ಸತ್ಕರ್ಮಕ್ಕೂ ಮಹಾಧವಲಾ ಎಂಬ ಹೆಸರು ಆರೂಢವಾಗಿರಬೇಕೆಂಬ ವಿಚಾರವೂ ಇದೆ.[೬] ವಿಜಯಧವಲದ ಬಗ್ಗೆ ಪೂಜ್ಯಪಾದಚರಿತೆಯಲ್ಲಿ ಹೇಳಿರುವಂತೆ, ವೀರಸೇನಾಚಾರ್ಯರೇ ಧವಲ, ಮಹಾಧವಲ ಮತ್ತು ಜಯಧವಲಗಳನ್ನು ರಚನೆ ಮಾಡಿದ್ದಾರೆ. ಪ್ರಾಯಿಕವಾಗಿ ಇಲ್ಲಿ ಹೇಳಿರುವ ಮಹಾಧವಳವು

ವೀರಸೇನರಿಂದ ರಚಿತವಾದ ಸತ್ಕರ್ಮದ ಸೂಚಕವಾಗಿರಬಹುದು. ಮುಂದೆ ಈ ಚರಿತೆಯಲ್ಲಿ ಹೇಳಿರುವಂತೆ, ವೀರಸೇನರ ಬಳಿಯಿದ್ದ ಜಯಸೇನರು (ಋತು) ಆರುಸಾವಿರ ಗ್ರಂಥ ಪ್ರಮಾಣದ (?) ವಿಜಯಧವಲವನ್ನು ರಚನೆ ಮಾಡಿದ್ದಾರೆ. ಆದರೆ ಜಿನಸೇನಾ ಚಾರ್ಯರು ಕಷಾಯಪ್ರಾಭೃತಕ್ಕೆ ರಚಿಸಿದ ನಲ್ವತ್ತುಸಾವಿರ ಗ್ರಂಥ ಪ್ರಮಾಣದ ಜಯ ಧವಲಾ ಟೀಕೆಯ ಬಗ್ಗೆ ಈ ಚರಿತೆಯಲ್ಲಿ ಹೇಳಿಕೆಯಿಲ್ಲವಾಗಿರುವುದು ಈ ಕೃತಿಯ ಲೋಪದೋಷಗಳಲ್ಲಿ ಒಂದೆನಿಸಿ ಪರಿಗಣನೆ ಮಾಡಬೇಕಾಗಿದೆ.

ವೀರಸೇನಾಚಾರ್ಯರು ತಮ್ಮ ಗುರು ಏಲಾಚಾರ್ಯರ ಬಳಿ ಸಿದ್ಧಾಂತದ ಅಧ್ಯಯ ನವನ್ನು ಪೂರ್ಣಗೊಳಿಸಿ ಸತ್‌ಕರ್ಮದ ರಚನೆಯನ್ನು ಮಾಡಿದ ಸ್ಥಳವನ್ನು 'ಚಿತ್ರ ಕೂಟ' ಎಂದು ಶ್ರುತಾವತಾರದಲ್ಲಿ ಹೆಸರಿಸಿದೆಯಾದರೆ ಪೂ. ಪಾ. ಚರಿತೆಯಲ್ಲಿ 'ಸೋಮನಂದದ ಚಿತ್ರಕೂಟ' ಎಂದು ಹೆಸರಿಸಿದೆ. ಬಳಿಕ ಗುರುವಿನ ಅನುಜ್ಞೆ ಪಡೆದು ಚಿತ್ರಕೂಟದಿಂದ ಪಯಣಿಸಿ ವಾಟಗ್ರಾಮವನ್ನು ಸೇರಿ ಅಲ್ಲಿ ಆನತೇಂದ್ರ (ಚಕ್ರಾನತ?) ಕಟ್ಟಿಸಿದ್ದ ಜಿನಮಂದಿರದಲ್ಲಿ 'ವ್ಯಾಖ್ಯಾಪ್ರಜ್ಞಪ್ತಿ' ದೊರೆತುದಾಗಿ ಸಿದ್ಧಾಂತದ ಟೀಕೆ ಯನ್ನು ರಚಿಸಿದರೆಂದು ಹೇಳಿದೆ. ವೀರಸೇನರು ಮತ್ತು ಜಿನಸೇನರ ವಿಹಾರಕ್ಷೇತ್ರ ಪ್ರಧಾನವಾಗಿ ಕರ್ನಾಟಕ, ಇದಲ್ಲದೆ ಸಿದ್ಧಾಂತದ ವ್ಯಾಖ್ಯಾನ ರಚನೆ ಕುಂದಕುಂದರಿಂದ ಮೊದಲ್ಗೊಂಡು ಬಪ್ಪದೇವಗುರುಗಳವರೆಗೆ ಕರ್ನಾಟಕದಲ್ಲಿ ನಡೆದಿದೆ. ಆದ್ದ ರಿಂದ ವೀರಸೇನರ ಸಿದ್ಧಾಂತದ ಅಧ್ಯಯನ ನಡೆಸಿದ ಮತ್ತು ವ್ಯಾಖ್ಯಾನ ರಚನೆ ಮಾಡಿದ ಸ್ಥಳಗಳು ಕರ್ನಾಟಕದ ನೆಲದವುಗಳೇ ಆಗಿರಬೇಕೆಂದು ತಿಳಿಯುವುದು ಸಹಜ. ಇದಲ್ಲದೆ, ವೀರಸೇನಾಚಾರ್ಯರಿಂದ ಹಿಂದಿನ ವ್ಯಾಖ್ಯಾನಕಾರರಾದ ಬಪ್ಪ ದೇವಗುರುವು ಸಿದ್ಧಾಂತದ ಅಧ್ಯಯನ ಮತ್ತು ವ್ಯಾಖ್ಯಾನ ರಚನೆ ಮಾಡಿದ ಸ್ಥಳವು ಭೀಮರಥಿ ಮತ್ತು ಕೃಷ್ಣವೇಣಾ ನದಿಗಳ ಮಧ್ಯಪ್ರದೇಶದ ಉತ್ಕಲಿಕಾ ಗ್ರಾಮ ಹಾಗೂ ಮಣುವಕವಳ್ಳಿಗಳಾಗಿದ್ದು ಇವೂ ಕೂಡ ಕರ್ನಾಟಕದ, ಅದರಲ್ಲಿಯೂ ಬೆಳಗಾಮಿನ ನಿಕಟವರ್ತಿಯಾದ, ಸ್ಥಳಗಳಾಗಿವೆ. ಆದ್ದರಿಂದ ವೀರಸೇನಾಚಾರ್ಯರಿಗೆ ಬಪ್ಪದೇವ ಗುರುವಿಂದ ರಚಿತವಾದ ವ್ಯಾಖ್ಯಾಪ್ರಜ್ಞಪ್ತಿ ದೊರೆತ ವಾಟಗ್ರಾಮವು ಬೆಳಗಾಮಿನ ಸುತ್ತುಮುತ್ತಿನ ಅನತಿದೂರದ ಗ್ರಾಮವಾಗಿರಬೇಕೆಂದು ತಿಳಿಯಬೇಕಾಗಿದೆ. ಹೀಗೆಯೇ ಇವರ ಗುರು ಏಲಾಚಾರ್ಯರಿದ್ದ

ಚಿತ್ರಕೂಟಪುರವೂ ಕರ್ನಾಟಕದ್ದೇ ಆದ ಒಂದು ಸ್ಥಳವಾಗಿರಬೇಕೆಂದೂ ತಿಳಿಯಬಹುದಾಗಿದೆ. ಈ ಬಗ್ಗೆ ಮಾನ್ಯ ನಾಥೂರಾಮೊಪ್ರಿಮಿ ಯವರ ಅಭಿಪ್ರಾಯವನ್ನು ತಿಳಿಯುವುದು ಸೂಕ್ತವಿದೆ. ಈ ಮಾನ್ಯರು, ಶ್ವೇತಾಂಬರ ಪಂಥ ತಪಾಗಚ್ಛದವರಾದ ಶೀಲವಿಜಯಜೀಯವರು ವಿ. ಸಂ. ೧೭೪೦ರ ಸುಮಾರಿ ನಲ್ಲಿ ತಮ್ಮ ತೀರ್ಥಯಾತ್ರೆಯ ಅನುಭವವನ್ನು ಗುಜರಾಥೀ ಭಾಷೆಯಲ್ಲಿ ಬರೆದಿದ್ದ ಕವಿತೆಯಾಧಾರದಿಂದ ಕೆಲವು ಸ್ಥಳಗಳನ್ನು ಉಲ್ಲೇಖಿಸಿದ್ದಾರೆ. ಶೀಲವಿಜಯಜಿಯವರು ದಕ್ಷಿಣ ದೇಶದಲ್ಲಿ ತಮಿಳುನಾಡಿನ ಯಾತ್ರೆಯ ಬಳಿಕ ಕರ್ನಾಟಕದ ಯಾತ್ರೆ ಮಾಡಿದ್ದಾರೆ. ಇವರು ಶ್ರೀರಂಗಪಟ್ಟಣದಿಂದ ಕೆಲ್ಲೂರು, ಕಾಲಿಕಟ್, ಸುಬ್ರಹ್ಮಣ್ಯ, ವೇಣೂರು, ಮೂಡಬಿದ್ರೀ, ಕಾರ್ಕಳ, ವರಾಂಗ, ಸಾಗರ (ಸಮುದ್ರ) ಮತ್ತು ಮಲಯಾ ಚಾಲಗಳ ಮಧ್ಯದ ಸ್ಥಳಗಳಲ್ಲಿ ಸಂಚರಿಸಿ ಅಲ್ಲಿಂದ ಹಿಂದಿರುಗಿ ಕರ್ನಾಟಕಕ್ಕೆ ಬಂದು ಘಾಟಿಯನ್ನು ಹತ್ತಿ ವಿನುರಿಗೆ ಬಂದರು. ಅಲ್ಲಿ ಒಬ್ಬರಾಣಿಯ ರಾಜ್ಯಭಾರ ನಡೆದಿತ್ತು. ವಿನುರಿಯಲ್ಲಿ ಎರಡು ಸುಂದರ ಬಸದಿಗಳ ದರ್ಶನಮಾಡಿ ಅಲ್ಲಿಂದ ಹುಂಬುಜಕ್ಕೆ ಬಂದರು. ಅನಂತರ ಚಿತ್ರಗಢ ಬನವಾಸಿ ಮತ್ತು ಪವಿತ್ರ ಸ್ಥಾನ ಬಂಕಾಪುರಗಳ ದರ್ಶನ ಮಾಡಿದರು. 'ಚಿತ್ರಗಢ ಬನೋಸೀ ಬಂಕಾಪುರ ದೀಠುಂ ಸುಭಧಾಮ' ಮುಂದೆ ಲಕ್ಷ್ಮೇಶ್ವರ ಗದಗಕ್ಕೆ ಸೇರಿದ ರಾಯಹುಬೇಲಿ (ಹುಬ್ಬಳ್ಳಿ?) ರಾಮರಾಯನ ಪ್ರಸಿದ್ಧ ಬೀಜಾಪುರ ದರ್ಶನ ಮಾಡಿದರು[೭]. ಇಲ್ಲಿ ಹೇಳಿರುವ ಚಿತ್ರಗಢವೇ ಏಲಾ ಚಾರ್ಯರ ಚಿತ್ರಕೂಟವಾಗಿರಬೇಕೆಂದು ಮತ್ತು ಇದೇ ಈಗಿನ ಚಿತ್ರದುರ್ಗವಾಗಿರ ಬೇಕೆಂದೂ ಮಾನ್ಯ ನಾಥೂರಾಂಪ್ರೇಮಿಯವರ ಅಭಿಪ್ರಾಯ ಪಟ್ಟಿದ್ದಾರೆ[೮]. ಆದರೆ ಹುಂಬುಜ, ಅನಂತರ ಚಿತ್ರಗಢ ಮತ್ತು ಬನವಾಸಿಗಳನ್ನು ಹೇಳಿರುವುದರಿಂದ ಚಿತ್ರಗಢವು ಹುಂಬುಜ ಮತ್ತು ಬನವಾಸಿಗಳ ಮಾರ್ಗದ ಮಧ್ಯದಲ್ಲಿರಬೇಕೆಂದು ತಿಳಿಯ ಬೇಕಾಗುವುದಾಗಿ ಇದನ್ನು ಈಗಿನ ಚಿತ್ರದುರ್ಗವಾಗಿದೆ ಎಂದು ತಿಳಿಯುವುದು ಸುಸಂ ಗತವಾಗುವುದಿಲ್ಲ.

ಇದೂ ಅಲ್ಲದೆ ಚಿತ್ರಕೂಟ ಪದದ 'ಕೂಟ' ಪದವು ಚಿತ್ರಗಢದ 'ಗಢ' ಪದದೊಡನೆ ಅರ್ಥ ಸಾಮ್ಯಹೊಂದಿದೆ ಎಂಬ ಕಾರಣದಿಂದ ಚಿತ್ರಕೂಟವನ್ನು 'ಚಿತ್ರಗಢ' ವನ್ನಾಗಿ ಗುರುತಿಸಿರುವುದು ಎಷ್ಟು ದೂರ ಸಹಜ ಎಂಬ ಪ್ರಶ್ನೆಯೂ ಇದೆ. ಪ್ರಸ್ತುತ ಪ್ರಸಂಗದಲ್ಲಿ ಚಿತ್ರಕೂಟದ ಬಗ್ಗೆ ದೊರೆಯುವ ಮತ್ತೂ ಒಂದು ಮಾಹಿತಿಯನ್ನು ಗಮನಿಸಬೇಕಾಗಿದೆ. ರಾಷ್ಟ್ರಕೂಟ ಮನೆತನದ ರಾಜಗೋವಿಂದ

(ತೃತೀಯ)ನು ಕೇರಲ, ಮಾಲವಾ, ಗುರ್ಜರ ಮತ್ತು ಚಿತ್ರಕೂಟಗಳನ್ನು ಗೆದ್ದಿದ್ದನು, ಈ ಪ್ರದೇಶಗಳ ರಾಜರು, ಗೋವಿಂದನ ಉತ್ತರಾಧಿಕಾರಿ ಅಮೋಘವರ್ಷನ ಅಧೀನರಾಗಿದ್ದರು ಎಂದು ಹೇಳಿದೆ[೮]. ಆದರೆ ಈ ಚಿತ್ರಕೂಟವು ಕರ್ನಾಟಕದ ಪ್ರದೇಶವಾಗಿರದೆ (ಮೇವಾಡದ)ಈಗ 'ಚಿತ್ತಾಡ್' ಎಂದು ಕರೆಯಲ್ಪಡುವ ಚಿತ್ರಕೂಟವಾಗಿರಬಾರದೇಕೆ ಎಂಬ ಪ್ರಶ್ನೆಗೂ ಅವಕಾಶವಿದೆ. ಇನ್ನು ವಾಟಗ್ರಾಮದ ಬಗ್ಗೆ ದೊರೆಯುವ ಸ್ವಲ್ಪ ಮಾತ್ರದ ವಿಶೇಷ ಸಂಗತಿಯನ್ನೂ ಸದ್ಯ ಪ್ರಸಂಗದಲ್ಲಿ ಗಮನಿಸಬೇಕಾಗಿದೆ.

ಇತಿ ಶ್ರೀ ವೀರಸೇನೀಯಾ ಟೀಕಾ ಸೂತ್ರಾರ್ಥದರ್ಶಿನೀ ।

ವಾಟ ಗ್ರಾಮಪುರೇ ಶ್ರೀ ಮದ್ಗುರ್ಜರಾರ್ಯಾನುಪಾಲಿತೇ ॥ ೬ ॥ ಜಯಧವಲಾ

ಇಲ್ಲಿ ವಾಟಗ್ರಾಮವು ಗುರ್ಜರಾರ್ಯನ ಪಾಲನೆಗೊಳಪಟ್ಟಿದ್ದಿತೆಂದು ಹೇಳಿದೆ[೯]. ಅಮೋಘವರ್ಷ(ಪ್ರಥಮ)ನನ್ನು 'ಗುರ್ಜರನರೇಂದ್ರ'ನೆಂದು ಹೆಸರಿಸುವ ರೂಢಿಯಿದ್ದಿತು. ಸಾರಾಂಶತಃ ಹೇಳುವುದಾದರೆ, ಪ್ರಸ್ತುತ ಚಿತ್ರಕೂಟ ಮತ್ತು ವಾಟಗ್ರಾಮಗಳೆ ರಡೂ ರಾಷ್ಟ್ರಕೂಟ ರಾಜರ ಅಥವಾ ಆಮೋಘವರ್ಷನ ರಾಜ್ಯಾಂತರ್ಗತವಾಗಿದ್ದು ವೆಂದು ತಿಳಿಯಬಹುದಾಗಿದೆ. ಆದರೆ ಏಲಾಚಾರ್ಯರನ್ನು ಕುರಿತ ಇತಿವೃತ್ತವು ಕರ್ನಾಟಕದೊಡನೆ ಅಥವಾ ದಕ್ಷಿಣಭಾರತದೊಡನೆಯೇ ಸಂಬಂಧ ಹೊಂದಿರುವುದ ರಿಂದ ಇವರ ವಿಹಾರಕ್ಷೇತ್ರವಾಗಿದ್ದ ಚಿತ್ರಕೂಟವನ್ನು ಉತ್ತರಭಾರತದ ಚಿತ್ತಾಡ್ ನೊಡನೆ ಸಮೀಕರಿಸುವುದು ಅಸಂಗತವಾಗುತ್ತದೆ. ಆದ್ದರಿಂದ ಇವರ ವಿಹಾರಕ್ಷೇತ್ರವನ್ನು ದಕ್ಷಿಣಭಾರತದಲ್ಲಿಯೇ ಗುರುತಿಸಬೇಕಾಗುತ್ತದೆ. ಈ ಬಗ್ಗೆ ಶೋಧನೆ ಮಾಡು ವಲ್ಲಿ ಮೂಖ್ಯವಾದ ಒಂದು ಸಮಸ್ಯೆ ಎದುರು ನಿಲ್ಲುತ್ತದೆ.

ವೀರಸೇನಾಚಾರ್ಯರು ತಮ್ಮ ವಿದ್ಯಾಗುರುವನ್ನು (ಏಲಾಯಿರಿಯ) ಏಲಾಚಾರ್ಯ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಈ ಏಲಾಚಾರ್ಯರ ಸಮಕಾಲೀನರದ್ದೆಂದು ಗುರುತಿಸಬಹುದಾದ 'ಹೇಲಾಚಾರ್ಯ' ಎಂಬ ಹೆಸರಿನ ಆಚಾರ್ಯರ ಉದಂತ ಲಭ್ಯ ವಿದೆ. ಇದರಿಂದ ಈ ಎರಡೂ ಹೆಸರುಗಳೂ ಒಬ್ಬರೇ ಆಚಾರ್ಯರನ್ನಧಿಕರಿಸಿರಬಹುದೆ ಎಂಬುದು ಸಮಸ್ಯೆಯಾಗಿದೆ. ಆದ್ದರಿಂದ ಈ ಎರಡೂ ಹೆಸರುಗಳಿಗೆ ಸಂಬಂಧಿಸಿದ ಇತಿವೃತ್ತವನ್ನು ಇಲ್ಲಿ ಪರಿಷ್ಕರಿಸಬೇಕಾಗಿದ ಅಗತ್ಯವಿದೆ.

ಜ್ವಾಲೀನೀಕಲ್ಪದ ಬಗ್ಗೆ ವಿವರಣೆ ಕೊಡುವಲ್ಲಿ ಮಾನ್ಯ ನಾಥೂರಾಂಪ್ರೇಮಿ ಯವರು ಈ ಮುಂದಿನ ಸಂಗತಿಯನ್ನು ಹೇಳಿದ್ದಾರೆ. "ದ್ರಾವಿಡ ಸಂಘದ ಇಂದ್ರನಂದಿ ಯೋಗೊಂದ್ರ ವಿರಚಿತವಾದ ಮತ್ತೊಂದು ಜ್ವಾಲಾಮಾಲಿನೀ ಕಲ್ಪವು ಬೊಂಬಾಯಿನ ಪ. ಪನ್ನಾಲಾಲ್ ಸರಸ್ವತಿ ಭವನದಲ್ಲಿದೆ. ಇಂದ್ರನಂದಿಯವರು ವರ್ಷನಂದಿಯವರ ಶಿಷ್ಯರು ಮತ್ತು ವಾಸವನಂದಿಯವರ ಪ್ರಶಿಷ್ಯರು. ವಾಸವನಂದಿಯವರ ಗುರುವೂ ಇಂದ್ರನಂದಿ ಎಂಬ ಹೆಸರಿನವರು. ಈ ಹೇಳಿದ (ಜ್ವಾಲಾಮಾಲಿನೀಕಲ್ಪ) ಗ್ರಂಥವು ಶಕ. ಸಂ. ೮೬೧(ಇಸವಿ ೯೩೯)ರಲ್ಲಿ ರಚಿತವಾಗಿದೆ. ಇದರ ಉತ್ಥಾನಿಕೆಯಲ್ಲಿ ಹೇಳಿರು ವಂತೆ–ದಕ್ಷಿಣದ ಮಲಯದೇಶದ ಹೇಮಗ್ರಾಮದಲ್ಲಿ ದ್ರಾವಿಡ ಸಂಘಾಧಿಪತಿ ಹೇಲಾಚಾರ್ಯರಿದ್ದರು. ಒಮ್ಮೆ ಅವರ ಶಿಷ್ಯೆ ಕಮಲಶ್ರೀಗೆ ಬ್ರಹ್ಮರಾಕ್ಷಸ ಹಿಡಿಯಿತು. ಅದರ ಪೀಡೆಯಿಂದ ಬಿಡುಗಡೆ ಮಾಡಲು ಹೇಲಾಚಾರ್ಯರು ನೀಲಗಿರಿಯ ಶಿಖರಕ್ಕೆ ಹೋಗಿ ವಿಧಿಪೂರ್ವಕ ಜ್ವಾಲಾಮಾಲಿನಿಯ ಸಾಧನೆ ಮಾಡಿದರು. ಏಳನೇ ದಿನ ದೇವಿಯು ಉಪಸ್ಥಿತಳಾಗಿ 'ಏನುಬೇಕಾಗಿದೆ' ಎಂದು ಕೇಳಿದಳು. ಮುನಿಯು 'ನನಗೆ ಮತ್ತೇನೂ ಬೇಕಿಲ್ಲ. ಕಮಲಶ್ರೀಯನ್ನು ಗ್ರಹಮುಕ್ತಳನ್ನಾಗಿ ಮಾಡು' ಎಂದು ಹೇಳಿ ದರು. ದೇವಿಯು ಒಂದು (ಲೋಹದ) ತಡಗಿನ ಮೇಲೆ ಮಂತ್ರವನ್ನು ಬರೆದುಕೊಟ್ಟು ಅದರ ವಿಧಿಯನ್ನು ತೋರಿಸಿಕೊಟ್ಟಳು. ಇದರಿಂದ ಇವರ ಶಿಷ್ಯೆಯು ಸ್ವಸ್ಥಳಾದಳು. ಆನಂತರ ದೇವಿಯು ಆದೇಶದಂತೆ 'ಹೇಲಾಚಾರ್ಯರು' ಜ್ವಾಲಿನೀಮತದ ರಚನೆ ಮಾಡಿದರು. ಬಳಿಕ ಪರಂಪರಾನುಗತವಾಗಿ ಇದು ಹೇಲಾಚಾರ್ಯರ ಶಿಷ್ಯ ಗಾಂಗ ಮುನಿ, ನೀಲಗ್ರೀವ ಮುಂತಾದವರಿಗೆ ಪ್ರಾಪ್ತವಾಯಿತು, ಮತ್ತು ಆ ಬಳಿಕ ಗುಣನಂದಿ ಮುನಿಯ ಬಳಿ ಅಧ್ಯಯನ ಮಾಡಿ ಇಂದ್ರನಂದಿಯವರು ಇದರ (ಜ್ವಾಲಾಮಾಲಿನೀ ಕಲ್ಪದ) ರಚನೆ ಮಾಡಿದರು."

ಸ್ಥೂಲರೀತಿಯಿಂದ ಪ್ರಸ್ತುತ ವಿಷಯಕ್ಕೆ ಸಮಬಂಧಿಸಿರುವ ಮತ್ತೊಂದು ಮೂಲದ ಕಥನವನ್ನೂ ಇಲ್ಲಿ ಪ್ರಸ್ತುತ ಪಡಿಸಬೇಕಾದ ಅಗತ್ಯವಿದೆ 'ಉತ್ತರ ಆರ್ಕಾಟ್‌ಜಿಲ್ಲೆ ಯಲ್ಲಿ ವಂದವಾಶಿಯಿಂದ ಹದಿನೈದು(೧೫)ಕಿಲೋಮೀಟರ್ ದೂರದಲ್ಲಿ 'ಪೊನ್ನೂರ್' ಎಂಬ ಪ್ರಸಿದ್ಧ ಜೈನ ಕ್ಷೇತ್ರವಿದೆ. ಅಲ್ಲಿ ಕನಗಗಿರಿ ಎಂಬ ಹೆಸರಿನ ಒಂದು ಚಿಕ್ಕ ಗುಡ್ಡದಮೇಲೆ ಆದಿನಾಥನ ಬಸದಿ ಇದೆ. ಈ ಸ್ಥಳಕ್ಕೆ ಸ್ವರ್ಣಪುರ, ಹೇಮಗ್ರಾಮ, ಕುಂದಕುಂದಗ್ರಾಮ ಎಂದು ಮುಂತಾದ ಹೆಸರುಗಳಿವೆ. ಈ ಬಸದಿ

ಯಲ್ಲಿ ತೀರ್ಥಂಕರರ, ಯಕ್ಷರ, ಯಕ್ಷಿಯರ ಅನೇಕ ಮೂರ್ತಿಗಳಿವೆ. ಇಲ್ಲಿರುವ ಪಾರ್ಶ್ವನಾಥ ಬಿಂಬದ ಪ್ರಭಾವಲಿಯ ಹಿಂಬದಿಯಲ್ಲಿರುವ ಸಲ್ಯೆವಾಹನ (ಶಾಲಿ ವಾಹನ) ಶಕೆ ೧೬೫೫ ಕಲಿವರ್ಷ ೪೮೩೪ರ ವೈಶಾಖಮಾಸ ೧೭ರ ಶಾಸನದಲ್ಲಿ ಸೇನ ಗಣದ ವೀರಸೇನದೇವರ ಶಿಷ್ಯ ಅನಂತಸೇನರು ಪ್ರಸ್ತುತ ಬಿಂಬವನ್ನು ದಾನವಾಗಿ ಕೊಟ್ಟ ಸಂಗತಿಯನ್ನು ಹೇಳಿದೆ.

ಇದೇ ದೇವಸ್ಥಾನದ ಕ್ರಿ. ಶ. ೧೭೩೩ರ ಮತ್ತೊಂದು ಶಾಸನದಲ್ಲಿ ಹೇಳಿರುವಂತೆ, ಈ ಆದಿನಾಥ ಬಸದಿಯಿಂದ ವಾಯುವ್ಯ ದಿಕ್ಕಿನಲ್ಲಿರುವ ನೀಲಗಿರಿ ಬೆಟ್ಟದಲ್ಲಿ ಪ್ರತಿ ವಾರಹೂ ಹೇಲಾಚಾರ್ಯರ ಪೂಜೆ ನಡೆಯುತ್ತಿದ್ದು ಅಲ್ಲಿಗೆ ಸ್ವರ್ಣಪುರದ ನಿವಾಸಿಗಳು (ಆದಿನಾಥ ಬಸದಿಯಿಂದ)ಪಾರ್ಶ್ವನಾಥ ಮತ್ತು ಜ್ವಾಲಾಮಾಲಿನೀ ಯಕ್ಷೀ ಬಿಂಬಗಳನ್ನು ಉತ್ಸವದಲ್ಲಿ ತೆಗೆಡುಕೊಂಡು ಹೋಗುತ್ತಿದ್ದರು. ಈ ನೀಲಗಿರಿಯು, ಬಸದಿ ಯಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿರುವ ಪೊನ್ನೂರ್ (ಹಿಲ್) ಮಲ್ಯೆಯೇ ಆಗಿದೆ ಎಂಬುದನ್ನು ಮತ್ತು ಇದೇ ಬೆಟ್ಟದ ಮೇಲೆಯೇ ಹೇಲಾಚಾರ್ಯರ ಪವಿತ್ರ ಪಾದಗಳನ್ನು ಒಂದು ಬಂಡೆಯ ಮೇಲೆ ಅಂಕಿತಗೊಳಿಸಲಾಗಿದೆ ಎಂಬುದನ್ನು ವಿಶೇಷತಃ ತಿಳಿಯಬೇಕಾಗಿದೆ. ಹೇಲಾಚಾರ್ಯರು ದ್ರಾವಿಡಗಣದ ಪ್ರಸಿದ್ಧ ಮುನಿ ವರ್ಯರು,ಇವರು ನೀಲಗಿರಿಪರ್ವತದಲ್ಲಿ ಮುಕ್ತಿ(?) ಪಡೆದರೆಂಬ ಹೇಳಿಕೆ ಇದೆ. ಈ ಪರ್ವತವು ಹೇಲಾಚಾರ್ಯರಿಗೆ ವರವನ್ನು ಅನುಗ್ರಹಿಸಿದ ಜ್ವಾಲಾಮಾಲಿನೀದೇವಿ ಅಧಿವಾಸ ಸ್ಥಾನವಾಗಿದೆಯೆಂದು ತಿಳಿಯಲಾಗಿದೆ. ಈ ದೇವತೆಯ ಉಪಾಸನೆಯು ಈ ಪ್ರದೇಶದಲ್ಲಿ ಜನಪ್ರಿಯವಾಯಿತಾಗಿ ಇವಳಿಗೆ ಆದಿನಾಥಬಸದಿಯಲ್ಲಿ ಪ್ರಾಧಾನ್ಯತೆಯ ಸ್ಥಾನವಿದೆ. ಇದೇ ಬಸದಿಯಲ್ಲಿ ಈ ದೇವತೆಗೆ ಪ್ರತ್ಯೇಕ ಗುಡಿ ಕಟ್ಟಿ ಪ್ರತಿನಿತ್ಯವೂ ವಿಶೇಷ ಪೂಜೆಗಳನ್ನು ಮಾಡಲಾಗುತ್ತಿದೆ[೧೨].

ಈ ಮೇಲಿನ ಎರಡು ಸ್ರೋತಗಳ್ಲ್ಲಿಯೂ ಜ್ವಾಲಾಮಾಲೀನಿದೇವಿಯ ವರಸಿದ್ಧಿಯಿಂದ ಕಮಲಶ್ರೀಯ ಗ್ರಹೋಚ್ಚಾಟನೇಯ ಪ್ರಸಂಗವು ಸಾಧಾರಣ ಸಂಗತಿಯಾಗಿದೆ.

ಪುನಃ ಪೂಜ್ಯಪಾದಚರಿತೆಯಲ್ಲಿ ಹೇಳಲಾಗಿರುವ ಇದೇ ಸಂಗತಿಯನ್ನು ಪ್ರಸ್ತುತ ಪ್ರಸಂಗದಲ್ಲಿ ಅವಶ್ಯವಾಗಿ ಗಮನಿಸಬೇಕಾಗಿದೆ. "ಸೋಮನಂದದ ಚಿತ್ರಕೂಟ, ಆ ಮಹಾಪುರದೊಳು

ಎಲ್ಲಾಚಾರ್ಯ ಮುನಿಪತಿ ತತ್ತ್ವಜ್ಞನೆನಿಸಿದ್ದನು. ಪ್ರೇಮದಿಂದ ಕಮಲಶ್ರೀಗೆ ಸೋಂಕಿರ್ದಗ್ರಹವನ್ನು ವಿಮಲ ಜ್ವಾಲಿನೀದೇವಿಯ ವರದಿಂದ ಬಿಡಿಸಿ ದನು. ಸುಮನ (ದೇವ)ಲೋಕದಿಂದ ಜ್ವಾಲೀನಿದೇವಿಯು ಪ್ರಸನ್ನ ಮನಸ್ಸಿನಿಂದ ಬಂದು ಪ್ರತ್ಯಕ್ಷಳಾಗಿ, ಏಳು ದಿವಸ ಉಪವಾಸವಿದ್ದ ಮುನಿಪತಿಗೆ ಬೀಜಾಕ್ಷರಗಳನ್ನು ಹೇಳಿದಳು. (ಅದನ್ನು ಮುನಿಪನು) ಲೋಹತಗಡಿನಲ್ಲಿ ಬರೆದು ಹೂಳಿಟ್ಟು ಹೋಮ ಮಾಡಿ ಯಂತ್ರ ಮಂತ್ರ ತಂತ್ರಾದಿ ಸಮರ್ಥನಾದನು. ಬಳಿಕ ಆ ಯತೀಂದ್ರನು ಉತ್ಸಾಹದಿಂದ ಉದ್ಯೋಗಪುರದಲ್ಲಿ ಚಂದ್ರಪ್ರಭ ಜಿನನ ನಿಲಯವನ್ನು ಕಟ್ಟಿಸಿದನು. ಅವರ ಸಮೀಪದಲ್ಲಿ ವೀರಸೇನ ಮಹಾಗುರುವು ವಿನಯದಿಂದೋದಿ ಕವಿಇಸಂಹಿತಾದಿ ಸಕಲವನ್ನು ಹೇಳಿದನು."(ಪದ್ಯಸಂ.೧೭೫–೧೮೦)

ಈ ಹಿಂದೆ ಉಲ್ಲೇಖಿಸಿರುವ ಎರಡು ಉದಂತಗಳಲ್ಲಿಯೂ ಜ್ವಾಲಾಮಾಲಿನೀ ದೇವಿಯಿಂದ ಯತೀಂದ್ರನನ್ನು 'ಹೇಲಾಚಾರ್ಯ' ಎಂದು ಹೆಸರಿಸಿದೆಯಾ ದರೆ ಪೂಜ್ಯಪಾದಚರಿತೆಯಲ್ಲಿ ಇದಲ್ಲದೆ (ಎಲ್ಲಾಚಾರ್ಯ) ಏಲಾಚಾರ್ಯ ಎಂದು ಹೆಸರಿಸಿದೆ. ಮೇಲೆ ಹೇಳಿರುವ ಪೊನ್ನೂರ್ ಮ್ಯಲೆ ಪಾದಚಿಹ್ನೆಗಳನ್ನು ಏಲಾಚಾರ್ಯರ ಪಾದಚಿಹ್ನೆಗಳೆಂದು ಬೇರೆಡೆಗಳಲ್ಲಿ ಹೇಳಿದೆ[೧೩]. ಈ ಏಲಾಚಾರ್ಯ ಎಂಬುದು ಕುಂದ ಕುಂದಾಚಾರ್ಯರ ಮತ್ತೊಂದು ಹೆಸರಾಗಿದ್ದು, ಅವರು ವಿಹೇಹದಲ್ಲಿ ತೀರ್ಥಂಕರರ ದರ್ಶನ ಮಾಡಿ ಹಿಂದಿರುಗಿ ಆಕಾಶಮಾರ್ಗದಲ್ಲಿ ಬಂದು ಪೊನ್ನೂರ್ ಮಲೈಯಲ್ಲಿ ಇಳಿದ ಕುರುಹಾಗಿ ಈ ಪಾದಚಿಹ್ನೆಗಳಿವೆ ಎಂದೂ ನಂಬಲಾಗಿದೆ. ಇದರಂತೆ ಈ ಪಾದ ಚಿಹ್ನೆಗಳು ಹೇಲಾಚಾರ್ಯರವುಗಳಾಗಿರದೆ ಏಲಾಚಾರ್ಯರವುಗಳಾಗಿವೆ ಎಂದೇ ಜನ ಸಾಮಾನ್ಯದಲ್ಲಿ ಪ್ರಚಲಿತವಿರುವ ಸಂಗತಿಯಾಗಿದೆ. ಆದ್ದರಿಂದ ಏಲಾಚಾರ್ಯ ಮತ್ತು ಹೇಲಾಚಾರ್ಯ ಎಂಬ ಹೆಸರುಗಳು ಒಬ್ಬ ವ್ಯಕ್ತಿಯ ಹೆಸರೇ ಆಗಿರಬಹುದೆಂದು ತೀಳಿಯಬಹುದಾಗಿದೆ.

ಇಂದ್ರನಂದಿಯೋಗೀಂದ್ರರು 'ಜ್ವಾಲಾಮಾಲಿನೀಕಲ್ಪ'ವನ್ನು ಶಕ ಸಂ. ೮೬೧ರಲ್ಲಿ ರಚಿಸಿರುವರೆಂದು ಮತ್ತು ಇದಕ್ಕೆ ಹೇಲಾಚಾರ್ಯರ 'ಜ್ವಾಲಿನೀಮತ'ವು ಆಧಾರವಾಗಿ ರುವುದೆಂದು ಈ ಹಿಂದೆ ಹೇಳಿದೆ. ಈ ಇಂದ್ರನಂದಿಯವರ ಗುರು, ಪ್ರಗುರು, ಪ್ರಗುರು ವಿನ ಗುರುಗಳ ಮತ್ತು ಹೇಲಾಚಾರ್ಯರ ಶಿಷ್ಯ ಪರಂಪರೆಯ ಅನುಕ್ರಮದಿಂದ ಸೂಚಿತವಾಗುವಂತೆ ಹೇಲಾಚಾರ್ಯರು

ಇಂದ್ರನಂದಿಯವರಿಂದ ಕನಿಷ್ಠ ಮಿತಿ ಯಿಂದ ಐದಾರುತಲೆಮಾರಿನಷ್ಟು ಹಿಂದಿನವರೆಂದು ಗಣನೆ ಮಾಡಬಹುದಾಗಿದೆ. ಈ ಗಣನೆಯಂತೆ ಹೇಲಾಚಾರ್ಯರು ಇಂದ್ರನಂದಿಯವರಿಂದ ಸುಮಾರು ಒಂದು ನೂರೈ ವತ್ತು ಇನ್ನೂರು ವರ್ಷಗಳಷ್ಟಾದರೂ ಹಿಂದಿನಕಾಲದವರಾಗಿರುವರೆಂದು ಪರಿಗಣನೆ ಮಾಡಬಹುದು. ಈ ರೀತಿಯಿಂದ ಹೇಲಾಚಾರ್ಯರು ಶಕ. ಸಂ. (೮೬೧–೧೫೦) ೭೧೧ನೇ ವರ್ಷದ ಆಸುಪಾಸಿನಲ್ಲಿ ಜೀವಿಸಿದ್ದರೆಂದು ಗ್ರಹಿಸಬಹುದು. ಈ ಕಾಲ ಗಣನೆಯು ವೀರಸೇನಾಚಾರ್ಯರ ವಿದ್ಯಾಗುರು ಏಲಾಚಾರ್ಯರ ಜೀವಿತ ಕಾಲ ದೊಡನೆ ಐಕ್ಯತೆ ಹೊದುವುದು. ವೀರಸೇನಾಚಾರ್ಯರು ತಮ್ಮ ಧವಲಾಟೀಕೆಯ ರಚನೆಯನ್ನು ಶಕ. ಸಂ. ೭೩೮ರಲ್ಲಿ ಸಮಾಪ್ತಿಗೊಳಿಸಿದ್ದಾರೆ. ಆದ್ದರಿಂದ ಇವರ ವಿದ್ಯಾಗುರುವಾದ ಏಲಾಚಾರ್ಯರ ಜೀವಿತಕಾಲವೂ ಶಕ. ಸಂ. ೭೧೧ರ ಆಸುಪಾಸಿ ನದಾಗಿದೆಯೆಂದು ಗಣನೆ ಮಾಡಲು ಭಾಧಕವಿಲ್ಲ. ಈ ರೀತಿಯಾಗಿ ಜ್ವಾಲಿನೀಮತದ ರಚನಕಾರರೆಂದು ಹೆಸರಿಸಲಾಗಿರುವ ಹೇಲಾಚಾರ್ಯರ ಮತ್ತು ವೀರಸೇನಾಚಾರ್ಯರ ವಿದ್ಯಾಗುರು ಏಲಾಚಾರ್ಯರ ಜೀವಿತಕಾಲವು ಐಕ್ಯತೆ ಹೊಂದುವುದು. ಹೀಗೆಯೇಜ್ವಾಲಾಮಾಲಿನೀ ದೇವಿಯ ವರವನ್ನು ಪಡೆದ ಒಬ್ಬರೇ ಆದ ವ್ಯಕ್ತಿಯನ್ನು ಹೇಲಾ ಚಾರ್ಯ ಮತ್ತು ಏಲಾಚಾರ್ಯ ಎಂಬುದಾದ ಹೆಸರುಗಳಿಂದ ನಿರ್ದೇಶನ ಮಾಡಿದೆ ಯಾಗಿ ಈ ಎರಡೂ ಹೆಸರುಗಳು ಒಬ್ಬರೇ ವ್ಯಕ್ತಿಯ ಸೂಚಕವಾಗಿರಬೇಕೆಂದು ಮತ್ತು ಈ ವ್ಯಕ್ತಿಯ ಹೆಸರು ವಾಸ್ತವವಾಗಿ 'ಏಲಾಚಾರ್ಯ' ಎಂದಿದ್ದು ಕಾರಣಾಂತರದಿಂದ ಇದು ಧವಲಾ, ಶ್ರುತಾವತಾರ, ಪೂ. ಪಾ. ಚರಿತೆಗಳಿಂದ ಬೇರೆಯದಾದ ಮೂಲಗಳಲ್ಲಿ ಹೇಲಾಚಾರ್ಯ ಎಂಬ ಪರಿವರ್ತನೆ ಹೊಂದಿದೆಯೆಂದು ತಿಳಿಯಬಹುದಾಗಿದೆ. ಈ ಏಲಾಚಾರ್ಯ ಎಂಬ ಹೆಸರು ಮೌಲಿಕವಾದುದಾಗಿರದೆ ಕಾರಣಾಂತರದಿಂದ ರೂಢಿಗೆ ಬಂದ ಹೆಸರಾಗಿದೆ. ಈ ಹೆಸರಿಲ್ಲದೆ ಇವರಿಗೆ ಸಂಘ, ಅಥವಾ ಗಣವನ್ನು ಸೂಚಿಸುವ ಬೇರೊಂದು ಹೆಸರಿದ್ದಿರಬೇಕೆಂಬುದರಲ್ಲಿ ಸಂಶಯವಿಲ್ಲ. ಇಷ್ಟಾದರೂ ಇಲ್ಲಿ ಒಂದು ಪ್ರಶ್ನೆಗವಕಾಶವಿದೆ. ವೀರಸೇನಾಚಾರ್ಯರ ಗುರು ಏಲಾಚಾರ್ಯರು ಸಿದ್ಧಾಂತ ವಿದ್ಯಾ ಪರಿಣತರಾಗಿದ್ದರೆಂದು ಸ್ಪಷ್ಟಸೂಚನೆ ದೊರೆಯುವುದು. ಆದರೆ ಹೇಲಾಚಾರ್ಯರು ಮಂತ್ರತಂತ್ರ ವಿದ್ಯಾವಿಶಾರದರಾಗಿದ್ದರೆಂದು ಸೂಚಿತವಾಗುವುದಾದ್ದರಿಂದ ಈ ಎರಡು ಹೆಸರುಗಳು ಒಬ್ಬರೇ ವ್ಯಕ್ತಿಯ ಸೂಚಕಗಳಾಗಿವೆಯೆಂದು ಗಣನೆ ಮಾಡು ವುದು ಸೂಕ್ತವೆ ? ಎಂಬ

ಪ್ರಶ್ನೆಗವಕಾಶವಿರುವುದು ನಿಜ. ಆದರೆ ಕೆಲವೆರು ಸುಪ್ರಸಿದ್ಧ ಆಚಾರ್ಯರುಗಳನ್ನಧಿಕರಿಸಿ ಉಳಿದು ಬಂದಿರುವ ಐತಿಹ್ಯವನ್ನುಗಮನಕ್ಕೆ ತಂದು ಕೊಂಡಲ್ಲಿ ಈಹೇಳಿದ ಪ್ರಶ್ನೆಗೆ ಅವಕಾಶವಿಲ್ಲದಂತಾಗುವುದು. ಉದಾಹರಣೆಯಾಗಿ ಷಟ್‌ಖಂಡಾಗಮದ ಮೌಲಿಕಸಿದ್ಧಾಂತವನ್ನು ಪುಷ್ಪದಂತ ಮತ್ತು ಭೂತಬಲಿ ಆಚಾರ್ಯರುಗಳಿಗೆ ಉಪದೇಶ ಮಾಡಿದ ಧರಸೇನಸ್ವಾಮಿಯವರು ಮಂತ್ರ ಶಾಸ್ತ್ರದಲ್ಲಿ ಪ್ರಾವೀಣ್ಯತೆ ಹೊಂದಿದ್ದರೆಂಬುವುದು ಸುವಿದಿತ. ಇದಲ್ಲದೆ ದೃಷ್ಟಿವಾದಾಗಂಗದ ನಾಲ್ಕನೇ ಭೇಧವಾದ ಪೂರ್ವಗತದ ಹತ್ತನೇ ಭೇಧವಾದ ವಿದ್ಯಾನುವಾದ ಪೂರ್ವ ಮತ್ತು ಇದೇ ಅಂಗದ ಅಂತಿಮ ಭಾಗಗಳಾದ ಚೂಲಿಕೆಗಳು ಯಂತ್ರಮಂತ್ರಶಾಸ್ತ್ರ ಗಳೇ ಆಗಿವೆ. ಆದ್ದರಿಂದ ಸಿದ್ಧಾಂತದ ಅಧ್ಯಯನವು ಮಂತ್ರಶಾಸ್ತ್ರಗಳ ಅಧ್ಯಯನವನ್ನೂ ಒಳಗೊಂಡಿದ್ದಿತೆಂದು ಸ್ಪಷ್ಟವಾಗುವುದು. ಯಂತ್ರ–ಮಂತ್ರ ಶಾಸ್ತ್ರದಲ್ಲಿ ನೈಪುಣ್ಯತೆ ಹೊಂದಿದ ಆಚಾರ್ಯ ಇಂದ್ರನಂದಿಯವರು, ಪ್ರಸ್ತುತ ಹೇಲಾಚಾರ್ಯರ ಸಂತತಿಯಲ್ಲಿ ಐದನೇ ಅಥವಾ ಆರನೇ ಆಚಾರ್ಯರಾಗಿದ್ದು ಕ್ರಿ. ಶ. ೯೩೯ರಲ್ಲಿ ಜ್ವಾಲಾಮಾಲೀಕಲ್ಪದ ರಚನೆ ಮಾಡಿದ್ದಾರೆ. ಇವರು, ಗೊಮ್ಮಟಸಾರದಲ್ಲಿ ನೇಮಿ ಚಂದ್ರಸಿದ್ಧಾಂತ ಚಕ್ರವರ್ತಿಯವರು ತಮ್ಮ ಗುರುಗಳಲ್ಲಿ ಒಬ್ಬರನ್ನಾಗಿ ಹೆಸರಿಸುವ ಇಂದ್ರನಂದಿಯರಾಗಿರಬಹುದಾದ ಸಂಭಾವ್ಯತೆಯನ್ನು ಮಾನ್ಯ ಜುಗುಲ್ ಕಿಶೋರ ಮುಖ್ತಾರ್ ಅವರು ಮತ್ತು ಮಾನ್ಯ ನಾಥೂರಾಂಪ್ರೇಮಿಯವರಿಬ್ಬರೂ ನಿರೂಪಿಸಿದ್ದಾರೆ. ಇವರನ್ನು 'ಜೈನಸಿದ್ಧಾಂತ ವಾರ್ಧೌವಿಮಲಿತ ಹೃದಯ': ಎಂದು ಹೇಳಿದೆ.[(೩೨)] ಇದರಿಂದ ಯಂತ್ರ–ಮಂತ್ರ ಶಾಸ್ತ್ರದ ಅಧ್ಯಯನಮತ್ತು ಸಿದ್ಧಾಂತ ಅಧ್ಯಯನಗಳನ್ನು ಒಟ್ಟಿಗೇ ನಡೆಸುವುದರಲ್ಲಿ ಪರಸ್ಪರ ವಿರೋಧವೇನಿರಲಿಲ್ಲವೆಂದು ಅಧಿಗತವಾಗು ವುದು. ಆದ್ದರಿಂದ ಏಲಾಚಾರ್ಯರು ಮಂತ್ರ,ತಂತ್ರ, ಯಂತ್ರ ವಿದ್ಯೆಗಳಲ್ಲಿ ಪ್ರಾವೀಣ್ಯತೆ ಹೊಂದಿದ್ದಲ್ಲಿ ಅದು ಅವರ ಸಿದ್ಧಾಂತ ವಿದ್ಯೆಯ ಪ್ರಾವೀಣ್ಯತೆಗೆ ವಿರೋಧವಾಗಿ ರುವಂತಹದೇನಲ್ಲ. ಆದ್ದರಿಂದ ಇವರು 'ಜ್ವಾಲಾನೀಮತ'ದ ರಚನೆ ಮಾಡಿದ್ದಲ್ಲಿ ಮತ್ತು ಇದರ ಆಧಾರದಿಂದ 'ಜ್ವಾಲಾಮಾಲಿನೀಕಲ್ಪ'ದ ರಚನೆ ಮಾಡಿದ ಇಂದ್ರನಂದಿ ಯೋಗಿಂದ್ರರು ಪ್ರಾಮಾಣ್ಯರೂಪದಿಂದ, ಏಲಾಚಾರ್ಯರ ಸಿದ್ಧಾಂತ ವಿದ್ಯಾಪ್ರಾವೀಣ್ಯತೆಯನ್ನು ಹೇಳದೆಯೇ, ಮಂತ್ರ ಯಂತ್ರ ತಂತ್ರ ವಿದ್ಯಾಪ್ರಾವಿಣ್ಯತೆಯನ್ನು ಹೇಳಿದ್ದಲ್ಲಿ ಅದು ಅಸಂಗತವೆನಿಸುವುದಿಲ್ಲ ಆದ್ದರಿಂದ ವೀರಸೇನರಿಗೆ

ಸಿದ್ಧಾಂತದ ಉಪದೇಶ ಮಾಡಿದ ಏಲಾಚಾರ್ಯರು ಮತ್ತು ಜ್ವಾಲಿನೀಮತದ ಕರ್ತೃ ಹೇಲಾ ಚಾರ್ಯ(=ಏಲಾಚಾರ್ಯ)ರು ಒಬ್ಬವ್ಯಕ್ತಿಯೇ ಆಗಿರಬಹುದಾದ ಸಂಭಾವ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಮಾನ್ಯ ನಾಥೂರಾಂಪ್ರೇಮಿಯವರ ಹೇಳಿಕೆಯ, ಈ ಹಿಂದಿನ ಉಲ್ಲೇಖದಲ್ಲಿ ದ್ರಾವಿಡಸಂಘಾಧಿಪತಿ ಹೇಲಾಚಾರ್ಯರು ದಕ್ಷಿಣಮಲಯದ ಹೇಮಗ್ರಾಮದಲ್ಲಿದ್ದರೆಂದು ಮತ್ತು ಇವರು ನೀಲಗಿರಿಯ ಜ್ವಾಲಾಮಾಲಿನೀದೇವಿಯವರದ ಸಾಧನೆ ಮಾಡಿದರೆಂದು ಹೇಳಿದೆ. ಇದರಂತೆಯೇ ಮತ್ತೊಂದು ಕಥನದಾಧಾರಿಂದ, ಈ ಮೇಲೆ ಉಲ್ಲೇಕಮಾಡಿರುವ ಕಥನದಲ್ಲಿ, ಪೊನ್ನೂರಿನ ಬಳಿಯಲ್ಲಿ ಹೇಮಗ್ರಾಮ, ಸ್ವರ್ಣ ಪುರ, ಕುಂದಕುಂದಗ್ರಾಮ ಎಂಬ ವಿಭಿನ್ನ ಹೆಸರುಗಳನ್ನು ಹೊಂದಿದ ಕನಕಗಿರಿ ಇರುವುದೆಂದು ಮತ್ತು ಇಲ್ಲಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿ ನೀಲಗಿರಿ ಇರುವುದೆಂದು ಹಾಗೂ ಇದೇ ಪೊನ್ನೂರ್ ಮಲೈ ಆಗಿದೆ ಎಂದು ಹೇಳಿರುವುದನ್ನೂ ಪ್ರಕೃತದಲ್ಲಿ ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಪೂ. ಪಾ. ಚರಿತೆಯಲ್ಲಿ ಏಲಾ ಚಾರ್ಯರು ಸೋಮನಂದದ ಚಿತ್ರಕೂಟಪುರದಲ್ಲಿದ್ದರೆಂದು ಹೇಳಿದೆ. ಇದಲ್ಲದೆ ಉದ್ಯೋಗಪುರದಲ್ಲಿ ಚಂದ್ರಪ್ರಭ ಜಿನನ ಬಸದಿನಿರ್ಮಾಣ ಸಂಗತಿಯಲ್ಲಿ ಅವರ ಹೆಸರನ್ನು ಸೇರಿಸಿದೆ.'ಉದ್ಯೋಗಪುರ' ಎಂಬುದು 'ಕೆಲ್ಲೂರು' ಎಂಬುದರ ಸಂಸ್ಕೃತ ರೂಪವಾಗಿದೆ. ಈ ಕೆಲ್ಲೂರು ಗುಡ್ಳುಪೇಟೆಯ ಸಮೀಪದಲ್ಲಿದೆ. ಈ ಊರಿನಲ್ಲಿ ಚಂದ್ರ ಪ್ರಭ ತೀರ್ಥಂಕರನ ಬಸದಿ ಇದೆ. ಮತ್ತು ಈ ದೇವಸ್ಥಾನದ ಜ್ವಾಲಾಮಾಲಿನೀ ಯಕ್ಷೀ ದೇವತೆ ಮೂರ್ತಿಯು ಬಹು ಪ್ರಭಾವಯುತವಾದುದೆಂಬ ನಂಬಿಕೆ ಜನರಲ್ಲಿದೆ. ಈ ಊರನ್ನು 'ಛತ್ರತ್ರಯಪುರ' ಎಂದು ಮತ್ತು 'ಮುಕ್ಕೊಡೆಗ್ರಾಮ' ಎಂದೂ ಹೆಸರಿಸಿರುವ ಉಲ್ಲೇಖಗಳಿವೆ. ಜೈನನಾಟಕಕಾರರೆನಿಸಿ ಪ್ರಸಿದ್ಧನಾಗಿರುವ ಹಸ್ತಿಮಲ್ಲನ ಹಿರಿಯ ಮಗ ಪಾರ್ಶ್ವಪಂಡಿತನು ಛತ್ರತ್ರಯಪುರಿಯನ್ನು ಸೇರಿ ಅಲ್ಲಿ ವಿಚಿತ್ರ ಚಿತ್ರಾನ್ವಿತ ಜೈತ್ಯಾಲಯದಲ್ಲಿ ಚಂದ್ರಪ್ರಭ ತೀರ್ಥಂಕರಪಾದ ಸರೋಜ ಭೃಂಗನಾಗಿ ನೆಲಸಿದನೆಂದು ಮತ್ತು ಇವನ ಹಿರಿಯ ಮಗನು ಹೇಮಾಚಲದಲ್ಲಿ (ಕನಕಗಿರಿಯಲ್ಲಿ) ನೆಲಸಿದನೆಂದೂ ಹೇಳಿದೆ. ಇದರಂತೆ ಕೆಲ್ಲೂರಿನ ಬಸದಿಯು ಹದಿಮೂರನೇ ಶತಮಾನ ಕ್ಕಿಂತ ಪೂರ್ವಕಾಲೀನವಾದುದೆಂದು ನಿಶ್ಚಿತವಾಗುವುದು.

ಇದಲ್ಲದೆ ಗಂಗಮನೆತನ ದರಸ ಸ್ತ್ರೀಪುರುಷನ ತಂದೆ ಶಿವಮಾರನು ಕೆಲ್ಲೂರಿನಲ್ಲಿ ಜೈನಬಸದಿ ಕಟ್ಟಿಸಿದನೆಂದು ಡಾ. ದೇವರಕೊಂಡಾರೆಡ್ಡಿ ಹೇಳಿದ್ದಾರೆ. (ಶ್ರ. ಬೆಳಗುಳದ ಬಸದಿಗಳ ವಾಸ್ತುಶಿಲ್ಪ–ಪು. ೧೩) ಇದರಿಂದ ಪೂಜ್ಯಪಾದಚರಿತೆಯಲ್ಲಿ ಹೇಳಲಾಗಿರುವ ಏಲಾಚಾರ್ಯರ ಸಂಗತಿಯ ಐತಿಹಾಸಿಕತೆಯು ಸಮರ್ಥಿತವಾಗುವುದು. ಇಲ್ಲಿ ಹೇಳಿರುವ ಹೇಮಾ ಚಲವು (ಎಂದರೆ ಕನಕಗಿರಿಯ) ಕೆಲ್ಲೂರಿನಿಂದ ಅನತಿದೂರದಲ್ಲಿದೆ. ಈ ಗಿರಿಯ ತಲ ಪ್ರದೇಶದಲ್ಲಿರುವ ಊರು 'ಮಲಯೂರು' ಎಂದು ಪ್ರಸಿದ್ಧವಿದೆ. ಈ ವಿವರಣೆಗಳಿಂದ ಈ ಹಿಂದೆ ಹೇಳಿದ ಪೊನ್ನೂರು ಮತ್ತು ಮಲಯಗಿರಿಗಳ ಐತಿಹ್ಯಾಂಶಗಳಲ್ಲಿ ಸಾಮ್ಯತೆಯನ್ನು ಕಾಣಬಹುದು. ಈ ಮಲಯಗಿರಿಯ ನಿಕಟವರ್ತಿ ಪ್ರದೇಶವೂ ಏಲಾಚಾರ್ಯರ ವಿಹಾರಕ್ಷೇತ್ರವಾಗಿದ್ದಿರಬಹುದೆಂದನ್ನೂ ಚಿತ್ರಕೂಟಪುರವು ಈ ಪ್ರದೇಶದ ಸುತ್ತಮುತ್ತಲಲ್ಲಿ ಇದ್ದಿರಬಹುದೆಂಬುದಾದ ಸಂಭಾವ್ಯತೆಯನ್ನೂ ಕಾಣಬಹುದು.

ನಗರ ತಾಲ್ಲೋಕ್ ಹೊಂಬುಜದ ಪಂಚಬಸ್ತಿಶಾಸನದಲ್ಲಿ (ನಂ. ೩೫. ಸಾಲು ೩೮ ರಲ್ಲಿ) ಗಂಗಮನೆತನದ ಬೂತುಗಪೆರ್ಮಾನಡಿಯು ಚಿತ್ರಕೂಟವನ್ನು ಗೆದ್ದುಕೊಂಡ ಸಂಗತಿಯನ್ನು ಹೇಳಿದೆ. ಗಂಗಮನೆತನದ ಈ ರಾಜರು ತಲಕಾಡನ್ನು ರಾಜಧಾನಿಯಾಗಿ ಹೊಂದಿದ್ದರಾಗಿ ಈ ಹೇಳಿದ ಚಿತ್ರಕೂಟವು ತಲಕಾಡಿಗೆ ಅತಿ ದೂರದ್ದಲ್ಲದ ಸ್ಥಳವಾಗಿ ರಬೇಕೆಂದು ತಿಳಿಯಬೇಕಾಗುವುದು. ಈ ದೃಷ್ಟಿಯಿಂದಲೂ ಏಲಾಚಾರ್ಯರ ಚಿತ್ರ ಕೂಟವು ಕೆಲ್ಲೂರಿನಿಂದ ಅನತಿ ದೂರದಲ್ಲಿದ್ದಿರಬೇಕೆಂಬುದು ಸಂಭಾವಿತವಾಗುವುದು.

ವೀರಸೇನಾಚಾರ್ಯರ ವಿದ್ಯಾಗುರುವಿನ ಖ್ಯಾತಿನಾಮವಾದ 'ಏಳಾಚಾರ್ಯ' ಎಂಬ ಹೆಸರನ್ನು ಹೊಂದಿದ್ದ ಇಬ್ಬರು ಆಚಾರ್ಯರನ್ನು ಮೈಸೂರು ಜಿಲ್ಲೆ, ಕೃಷ್ಣರಾಜನಗರ ತಾಲ್ಲೋಕಿನ ಚಿಕ್ಕಹನಸೋಗೆಯ (೩೩ ಮತ್ತು ೩೬ ನೇ ಸಂಖ್ಯೆ)ಶಾಸನಗಳು ಉಲ್ಲೇಖಿ ಸುತ್ತವೆ. ಈ ಹೆಸರನ್ನು ಹಿಂದಿದ್ದ ಆಚಾರ್ಯರ ಉಲ್ಲೇಖ ಅನ್ಯತ್ರ ಎಲ್ಲಿಯೂ ಕಂಡು ಬರುವುದಿಲ್ಲವಾದ್ದರಿಂದ ಈ ಸುತ್ತುಮುತ್ತಿನ ಸ್ಥಳಗಳನ್ನು ಪ್ರಧಾನ ವಿಹಾರ ಕ್ಷೇತ್ರವಾಗಿ ಹೊಂದಿದ್ದ ಈ ಪ್ರದೇಶದ ಮುನಿಗಳಲ್ಲಿ ಪ್ರಸಿದ್ಧರಾದ ಪೂರ್ವಚಾರ್ಯರ ಹೆಸರನ್ನು ಹೊಂದುವ ಸಂಪ್ರದಾಯವಿದ್ದಿತೆಂದು ತಿಳಿಯಬಹುದಾಗಿದೆ. ಆದ್ದರಿಂದ ವೀರಸೇನಾಚಾರ್ಯರ ಗುರು ಏಲಾಚಾರ್ಯರ ಪ್ರಧಾನ

ವಿಹಾರಕ್ಷೇತ್ರವು ಕೆಲ್ಲೂರಿನ ನಿಕಟವರ್ತಿಯಾದ ಪ್ರದೇಶವಾಗಿದ್ದಿತೆಂದು ತಿಳಿಯಬಹುದಾಗಿದೆ. ಇದರಂತೆ ವೀರ ಸೇನಾಚಾರ್ಯರು ಏಲಾಚಾರ್ಯರ ಬಳಿ ಸಿದ್ಧಾಂತದ ಅಧ್ಯನ ನಡೆಸಿದ ಚಿತ್ರ ಕೂಟವು ಕೆಲ್ಲೂರಿನ ಸಮೀಪವರ್ತಿಯಾದ ಸ್ಥಳವಾಗಿದೆ ಎಂದು ಪರಿಗಣನೆ ಮಾಡ ಬಹುದಾಗಿದೆ. ವೀರಸೇನಾಚಾರ್ಯರಿಗೆ ಬಪ್ಪದೇವಗುರುವಿನ ವ್ಯಾಖ್ಯಾಪ್ರಜ್ಞಪ್ತಿ ದೊರೆತ ವಾಟಗ್ರಾಮವು ಕರ್ನಾಟಕದ ಬೆಳಗಾಮಿನಿಂದ ಅನತಿ ದೂರವರ್ತಿಯಾದ ಸ್ಥಳವಾಗಿರಬೇಕೆಂದು ಹಿಂದೆ ಹೇಳಿದೆ. ಹೀಗಿದ್ದರೂ ಈ ಬಗ್ಗೆ ಮಾನ್ಯ ವಿದ್ಯಾವಾರಿಧಿ ಡಾ. ಜ್ಯೋತಿಪ್ರಸಾದ್‌ಜೈನ ಅವರ ವಿಚಾರಪೂರ್ಣ ಅಭಿಮತವು ಅವಧಾರಣಾರ್ಹವಾಗಿದೆ. ಈ ಮಾನ್ಯರ ಅಭಿಪ್ರಾಯದಂತೆ ವಾಟಗ್ರಾಮವು ನಾಸಿಕ ಪ್ರಾತಂದ ವರಾರ ಗ್ರಾಮವಾಗಿದೆ. ('ಭಾರತವರ್ಷಕಾ ಏಕ್ ಪ್ರಾಚೀನ ಜೈನ ವಿಶ್ವವಿದ್ಯಾಲಯ' ಶೋಧಾ ದರ್ಶ, ಚಾತುರ್ಮಾಸಿಕ ಪತ್ರಿಕೆ –೧೪ ಜುಲೈ, ೧೯೯೧, ಪು. ಸಂ. ೧೩)

ಧವಲಾಮತ್ತು ಜಯಧವಲಾಗಳ ಕೆಲವು ವಿಶಿಷ್ಟಾಂಶಗಳು, ಈ ಹಿಂದೆ ಹೇಳಿರುವಂತೆ ಷಟ್ಖಂಡಾಗಮದ ಮೊದಲ ಐದುಖಂಡಗಳ ಎಪ್ಪತ್ತೆರಡುಸಾವಿರ ಗ್ರಂಥ ಪ್ರಮಾಣದ ಧವಲಾಟೀಕೆ, ಕಸಾಯಪಾಹುಡದ ಇಪ್ಪತ್ತುಸಾವಿರ ಗ್ರಂಥಪ್ರಮಾಣದ ಜಯಧವಲಾಟೀಕೆ ಮತ್ತು ಹದಿನೆಂಟು ಅನುಯೋಗಗಳನ್ನೊಳಗೊಂಡ 'ಸತ್ ಕರ್ಮ' ಇವುಗಳು ಈಗ ಉಪಲಬ್ಧವಿರುವ ವೀರಸೇನಾಚಾರ್ಯರ ರಚನೆಗಳು. ಇವುಗಳಲ್ಲಿ ಧವಲಾ ಮತ್ತು ಜಯಧವಲಾಗಳು ಪ್ರಾಕೃತ ಮತ್ತು ಸಂಸ್ಕೃತ ಮಿಶ್ರಣದ ಮಣಿ ಪ್ರವಾಳಶೈಲಿಯಲ್ಲಿ ರಚಿತವಾಗಿವೆ. ಇವರ ಈ ಶೈಲಿಗೆ ಮೌಲಿಕವಾದ ಒಂದು ಕಾರಣವೂ ಇದೆಯೆಂದು ಹೇಳಬಹುದಾಗಿದೆ. ಇಂದ್ರನಂದಿಯವರು ಹೇಳಿರುವಂತೆ ಷಟ್‌ಖಂಡಾಗಮದ ಮತ್ತು ಕಸಾಯಪಾಹುಡದ ವ್ಯಾಖ್ಯಾನಗಳು ಪ್ರಾಕೃತ, ಕನ್ನಡ ಮತ್ತು ಸಂಸ್ಕೃತ ಭಾಷಗಳಲ್ಲಿದ್ದುವು. ಕುಂದಕುಂದಾಸ್ವಾಮಿಯವರ ಪರಿಕರ್ಮ,ಯತಿ ವೃಷಭರ ಚೂರ್ಣಿ, ಉಚ್ಚಾರಣಾಚಾರ್ಯರ ಉಚ್ಚಾರಣಾವೃತ್ತಿ, ಪೂಜ್ಯಪಾದರ ಸಾರಸಂಗ್ರಹ ಮತ್ತು ಬಪ್ಪದೇವಗುರುವಿನ ವ್ಯಾಖ್ಯಾನಗಳು ವೀರಸೇನರಿಗೆ ಪೂರ್ಣ ರೀತಿಯಲ್ಲಿ ಇಲ್ಲವೆ ಭಾಗಶಃ ಉಪಲಬ್ಧವಿದ್ದುವೆಂದು ಹೇಳಲು ಅವರ ಉಲ್ಲೇಖಗಳೇ ಆಧಾರವಾಗಿವೆ. ಇವಲ್ಲದೆ ಮತ್ತೂ ಅನೇಕ ಆಚಾರ್ಯರ ವ್ಯಾಖ್ಯಾನಗಳೂ

ಪ್ರಾಯಶಃ ರಚನಕಾರರ ಸ್ಪಷ್ಟಮಾಹಿತಿಇಲ್ಲದೆ, ಇವರಿಗೆ ದೊರಕಿದ್ದುವೆಂದು ಹೇಳಬಹುದಾದ ಸೂಚನೆಗಳೂ ಇವೆ[೨೧].

ಶ್ಯಾಮಕುಂಡ, ತುಂಬುಲೂರಾಚಾರ್ಯ ಮತ್ತು ಸಮತಭದ್ರರ ವ್ಯಾಖ್ಯಾನಗಳ ಬಗ್ಗೆ ಧವಲಾ ಮತ್ತು ಜಯಧವಲಾಗಳಲ್ಲಿ ಉಲ್ಲೇಖಗಳು ದೊರೆಯುವುದಿಲ್ಲವಾದ್ದರಿಂದ ಈ ವ್ಯಾಖ್ಯಾನಗಳು ವೀರಸೇನಾಚಾರ್ಯರಿಗೆ ದೊರಕಿರಲಾರವೆಂದು ತಿಳಿಯ ಬೇಕಾಗುವುದು. ಹೀಗಿದ್ದರೂ ಧವಲಾ ಮತ್ತು ಜಯಧವಲಾ ಟೀಕೆಗಳಲ್ಲಿ ಹಿಂದಿನ ಕಾಲದ ಅನೇಕ ವ್ಯಾಖ್ಯಾನಕಾರ ಆಚಾರ್ಯರ ಪ್ರಾಕೃತ ಮತ್ತು ಸಂಸ್ಕೃತವಾಕ್ಯಗಳು ಯಥಾವತ್ತಾಗಿ ಸಮಾವೇಶವಾಗಿವೆಯೆಂದು ಹೇಳಬಹುದಾಗಿದೆಯಲ್ಲದೆ ಈ ಟೀಕೆಗಳು ಪ್ರಾಕೃತ–ಸಂಸ್ಕೃತ ಮಿಶ್ರಣದ  ಮಣಿಪ್ರವಾಳಶೈಲಿಯಲ್ಲಿ ರಚಿತವಾಗಲು ಇದು ಕಾರಣವಾಗಿದೆ ಎಂದೂ ಹೇಳಬಹುದಾಗಿದೆ. ಧವಲಾ ಮತ್ತು ಜಯಧವಲಾ ಟೀಕೆಗಳಲ್ಲಿ 'ಉತ್ತಂಚ' ಎಂದು ಹೇಳಿ ಅನೇಕ ಪ್ರಾಕೃತ ಮತ್ತು ಸಂಸ್ಕೃತ ಪದ್ಯಗಳನ್ನು ಹಿಂದಿನ ಕಾಲದ ವ್ಯಾಖ್ಯಾನಗಳಿಂದ ಉಲ್ಲೇಖಿಸಿರುವುದು ಸ್ಪಷ್ಟವಿದೆ. ಇದರಂತೆಯೇ ಕೆಲವು ವಾಕ್ಯಭಾಗಗಳು ಪೂರ್ವಕಾಲೀನ ವ್ಯಾಖ್ಯಾನಗಳಿಂದ ಯಥಾವತ್ತಾಗಿ ಸಮಾವೇಶ ಗೊಂಡಿವೆ. ಎಂದು ಹೇಳಬಹುದಾದ ಆಧಾರಗಳಿವೆ. ಪೂಜ್ಯಪಾದರ ಸರ್ವಾರ್ಥ ಸಿದ್ಧಿಯ ಅನೇಕ ವಾಕ್ಯಗಳನ್ನು ತದ್ವತ್ತಾಗಿ ಧವಲಾ ಟೀಕೆಯಲ್ಲಿ ಗುರುತಿಸಬಹುದಾ ಗಿದೆ[೨೨]. ಇದೇ ರೀತಿಯಾಗಿ 'ಧವಲಾ'ಕಾರರು, "ದಿಟ್ಠಿವಾದೋಣಾಮ ಬಾರಸಮಂ" ಎಂದು ಮತ್ತು" ತಸ್ಯದೃಷ್ಟಿವಾದಸ್ಯ ಸ್ವರೂಪಂ ನಿರೂಪ್ಯತೇ" ಎಂದು ಹೇಳಿ "ಕೌತ್ಕಲ– ಕಾಣೇವಿದ್ದಿ – ಕೌಶಿಕ–ಹರಿಸ್ಮಶ್ರು–ಮಾದ್ದಪಿಕ–ರೋಮಶ–ಹಾರಿತ–ಮುಂಡ–ಅಶ್ವಲಾಯನಾದೀನಾಂ ಕ್ರಿಯಾವಾದ ದೃಷ್ಟೀನಾಮಶೀತಿ ಶತಂ . . . ನಿಗ್ರಹಶ್ಚದೃಷ್ಟಿ ವಾದೇಕ್ರಿಯತೇ" ಎಂಬುದಾಗಿ ಹೇಳಿದ್ದಾರೆ.[೨೩] ಇದೇ ವಾಕ್ಯವು ಅಕಲಂಕರ ರಾಜವಾರ್ತಿಕದಲ್ಲಿ, ಹೆಸರುಗಳ ಬಗ್ಗೆ ಒಂದೆರಡು ಪಾಠಾಂತರವನ್ನೊಳಗೊಂಡದ್ದಾಗಿ, ಇದೆ.[೨೪] ದ್ವಾದಶಾಂಗದ ವಸ್ತುವಿವರಣೆಯ ಈ ವಿಷಯಕ್ಕೆ ಅಕಲಂಕರಿಂದ ಹಿಂದಿನ ಕಾಲದ್ದಾದ ಷಟ್ ಖಂಡಾಗಮದ ಯಾವುದಾದರೊಂದು ವ್ಯಾಖ್ಯಾನವು ಆಧಾರವಾಗಿರ ಬೇಕೆಂಬುದರಲ್ಲಿ ಸಂಶಯ ಪಡುವಂತಿಲ್ಲ. 'ಧವಲಾ' ರಚನಾಕಾರರಿಗೂ ಇದೇ ವ್ಯಾಖ್ಯಾನವು ಆಧಾರವಾಗಿದೆ ಎಂದು ಹೇಳಬಹುದಾಗಿದೆ. ಈ ವಾಕ್ಯವು ಸಂಸ್ಕೃತ ಭಾಷೆ

ಯದ್ದಾಗಿರುವದರಿಂದ ಧವಲಾಕಾರರು ಅದೇ ಸಂಸ್ಕೃತ ವಾಕ್ಯಾನ್ನು ತದ್ವತ್ತಾಗಿ ಸಮಾವೇಶಮಾಡಿಕೊಂಡಿದ್ದಾರೆ. ಷಟ್ ಖಂಡಾಗಮಕ್ಕೆ ಸಂಸ್ಕೃತ ವ್ಯಾಖ್ಯಾನ ಬರೆದ ವರು ಸಮಂತಭದ್ರರ ಆದ್ದರಿದ ಈ ವಾಕ್ಯ ಅಥವಾ ಇಂತಹ ಅನೇಕ ವಾಕ್ಯಗಳು ಸಮಂತಭದ್ರರ ವ್ಯಾಖ್ಯಾನದ ಅವಶೇಷಗಳಾಗಿ ಧವಲಾಟೀಕೆಯಲ್ಲಿ ಸಮಾವೇಶವಾಗಿ ರಬಹುದಾದ ಸಂಭವವಿದೆ. ಹೀಗೆಯೇ ಹಿಂದಿನ ಕಾಲದ ಪ್ರಾಕೃತವ್ಯಾಖ್ಯಾನಗಳ ವಾಕ್ಯಗಳು ತದ್ವತ್ತಾಗಿ ಧವಲಾ ಮತ್ತು ಜಯಧವಲಾಗಳಲ್ಲಿ ಸಮಾವಿಷ್ಟವಾಗಿವೆಯೆಂದು ಮತ್ತು ಮಣಿಪ್ರವಾಲಿಶೈಲಿಗೆ ಇದು ಮುಖ್ಯಕಾರಣವಾಗಿದೆ ಎಂದು ತಿಳಿಯಬಹುದು. ವೀರಸೇನಾಚಾರ್ಯರ ಹಾಗೂ ಜಿನಸೇನಾಚಾರ್ಯರ ಈ ಟೀಕೆಗಳ ರಚನೆಯ ವಶವಾಗಿ ಕ್ರಿ. ಶ. ಎರಡನೇ ಶತಮಾನದಾರಭ್ಯ ಕ್ರಿ.ಶ. ಒಂಭತ್ತನೇ ಶತಮಾನ ಕಾಲದ ಪರ್ಯಂತ ರಚಿತವಾದ ದಿಗಂಬರ ಜೈನಪಂಥದ ಪರಮಾಗಮ ಮಾತ್ರವಲ್ಲದೆ ವ್ಯಾಖ್ಯಾನಗಳೂ ಸಂಕಲಿತವಾಗಿ ಉಳಿದುಬಂದಿವೆ. ಪ್ರಾಯಿಕವಾಗಿ, ಶ್ಯಾಮಕುಂಡ ಮತ್ತು ತುಂಬುಲೂರಾಚಾರ್ಯರ ವ್ಯಾಖ್ಯಾನಗಳು ವೀರಸೇನಾಚಾರ್ಯರಿಗೆ ಲಭ್ಯವಾಗದಿದ್ದ ಕಾರಣದಿಂದ ಅವರ ಮಣಿಪ್ರವಾಳ ಶೈಲಿಯ ಟೀಕೆಗಳಲ್ಲಿ ಕನ್ನಡದ ವಾಕ್ಯಗಳಲ್ಲಿ ಸ್ಥಾನ ದೊರೆಯದಾಯಿತೆಂದಲ್ಲಿ ಅದು ತಪ್ಪಾಗಲಾರದು.

ಧವಲಾ ಮತ್ತು ಜಯಧವಲಗಳಲ್ಲಿ ನಿರ್ದೇಶಿತವಾಗಿರುವ ಸಾಹಿತ್ಯ : ದಿಗಂಬರ ಪಂಥದ ಸೈದ್ಧಾಂತಿಕ ವಿಷಯಗಳಿಗೆ ಪ್ರಮಾಣಭೂತವಾಗಿ ಪ್ರಮಾಣಭೂತವಾಗಿ ಪರಿಗಣನೆ ಹೊಂದಿದ್ದ ಪ್ರಾಚೀನ ಸಾಹಿತ್ಯ ಸಂಗತಿ ಹಾಗೂ ಧವಲಾ ಮತ್ತು ಜಯಧವಲಾ ಟೀಕೆಗಳನ್ನು ರಚನೆ ಮಾಡುವಲ್ಲಿ ಹೇಗೆ ಸಂಶೋಧನದೃಷ್ಟಿಯಿಂದ ವಿಷಯ ವಿವೇಚನೆ ಮಾಡಿರುವರೆಂಬ ಸಂಗತಿಗಳು ಮಹತ್ವಪೂರ್ಣವಗಿವೆ. ಈ ಬಗ್ಗೆ ಹೀರಾಲಾಲ್ ಜೈನ್ ರವರು ಇತ್ತಿರುವ ಪರಿಚಯವು ಅಮೂಲ್ಯವಾಗಿದೆಯಾಗಿ ಅದನ್ನೇ ಈ ಮುಂದೆ ಕೊಡಲಾ ಗಿದೆ.[೨೫]

"ಧವಲಾಕಾರರ ಸಮುಖದಲ್ಲಿ ಉಪಸ್ಥಿತವಿದ್ದ ಸಾಹಿತ್ಯ–ಸತ್ವರೂಪಣಾದಲ್ಲಿ ಉಲ್ಲಿಖಿತ ಸಾಹಿತ್ಯ ಧವಲಾ ಮತ್ತು ಜಯಧವಾಲಾಗಳ ಅವಲೋಕನದಿಂದ ವೀರಸೇನ ಆಚಾರ್ಯರ

ಸಮ್ಮುಖದಲ್ಲಿ ಬಹುವಿಶಾಲವಾದ ಜೈನಸಾಹಿತ್ಯವಿದ್ದಿತೆಂದು ತಿಳಿದು ಬರುತ್ತದೆ. ಸತ್ಪ್ರರೂಪಣೆಯಲ್ಲಿ ಸತ್ಕರ್ಮ ಪ್ರಾಭೃತ ಮತ್ತು ಕಷಾಯ ಪ್ರಾಭೃತಗಳನ್ನು ಹೆಸರಿಸಿ, ಅವುಗಳ ಅಧಿಕಾರಗಳ ಉಲ್ಲೇಖ ಹಾಗೂ ಅವತರಣ ಮೊದಲಾದುವನ್ನು ಕೊಟ್ಟಿರುತ್ತಾರೆ. ಇದಲ್ಲದೆ, ಸಿದ್ಧಸೇನ ದಿವಾಕರರ ಸನ್ಮತಿ ತರ್ಕವನ್ನು 'ಸಮ್ಮಇ ಸುತ್ತ' (ಸನ್ಮತಿ ಸೂತ್ರ) ಎಂಬುದಾಗಿ ಹೆಸರಿಸಿದ್ದಾರೆ ಹಾಗೂ ಒಂದೆಡೆಯಲ್ಲಿ ಈ ಕೃತಿಯ ಹೇಳಿಕೆಯ ಬಗ್ಗೆ ವಿರೋಧ ವ್ಯಕ್ತಪಡಿಸಿ, ಅದರ ಬಗ್ಗೆ ಸಮಾಧಾನ ಮಾಡಿದ್ದಾರೆ, ಮತ್ತು ಈ ಕೃತಿಯ ಏಳುಗಾಹೆಗಳನ್ನು ಉಲ್ಲೇಖ ಮಾಡಿದ್ದಾರೆ ಅಕಲಂಕ ದೇವರ ತತ್ವಾರ್ಥ ರಾಜವಾರ್ತಿಕವನ್ನು 'ತತ್ವಾರ್ಥ ಭಾಷ್ಯ' ಎಂದು ಹೆಸರಿಸಿ ಅದರ ಅನೇಕ ಅವತರಣಗಳನ್ನು ಕೆಲವೆಡೆ ಶಬ್ಧಶಃ ತದ್ವತ್ತಾಗಿ ಮತ್ತೆ ಕೆಕವೆಡೆ ಪರಿವರ್ತನೆಯೊಡನೆ ಕೊಟ್ಟಿದ್ದಾರೆ.[೧] ಇದಲ್ಲದೆ 'ಉಕ್ತಂಚ' ಎಂಬ ಪೀಠಿಕೆಯೊಡನೆ ಇಲ್ಲವೆ ಕೆಕವೆಡೆ ಈ ಪೀಠಿಕೆ ಇಲ್ಲದೆಯೆ, ಉಲ್ಲೇಖ ಮಾಡಿರುವಂತಹವುಗಳು ಕುಂದಕುಂದರ ಪ್ರವಚನ ಸಾರ, ಪಂಚಾಸ್ತಿಕಾಯ ಯತಿವೃಷಭರ ತಿಲೋಯಪಣ್ಣತ್ತಿ, ವಟ್ಟಕೇರರ ಮೂಲಾ ಚಾರ, ಅಕಲಂಕದೇವಕೃತ ಲಘೀಯಸ್ತ್ರಯ, ಸಿವಜ್ಜರ ಮೂಲಾರಾಧನಾ ಕೃತಿಗಳಲ್ಲಿ ದೊರೆಯುತ್ತವೆ. ಇಷ್ಟಲ್ಲದೆ ಧವಲಾ ಟೀಕೆಯಲ್ಲಿ ಕಂಡುಬರುವ ಕೆಲವು ಗಾಹೆಗಳು ಅದರಿಂದೀಚಿನ ಕೃತಿಗಳಾದ ವಸುನಂದಿ ಶ್ರಾವಕಾಚಾರ, ಪ್ರಭಾಚಂದ್ರಕೃತ ಶಾಕಟಾ ಯನ–ನ್ಯಾಸ, ದೇವಸೇನ ಕೃತ ನಯಚಕ್ರ, ವಿದ್ಯಾನಂದರ ಆಪ್ತಪರೀಕ್ಷಾ–ಇವುಗಳಲ್ಲಿ ಕಂಡು ಬರುತ್ತವೆ. ಗೊಮ್ಮಟಸಾರ ಜೀವಕಾಂಡ, ಕರ್ಮಕಾಂಡ ಹಾಗೂ ಜೀವ ಪ್ರಬೋಧಿನೀ ಟೀಕೆಗಳಲ್ಲಿ ಕಂಡು ಬರುವ ಬಹುಸಂಖ್ಯಾತ ಗಾಥೆಗಳನ್ನು ಇಲ್ಲಿಂದಲೇ ತೆಗೆದುಕೊಳ್ಳಲಾಗಿದೆ ಎಂಬುದರಲ್ಲಿ ಸಂಶಯಪಡುವಂತಿಲ್ಲ. ತಿಲೋಯಪಣ್ಣತ್ತಿಯ ಅನೇಕ ಗಾಹೆಗಳಲ್ಲಿ ಹೇಳಲಾಗಿರುವ ವಿಷಯವನ್ನು ಅದೇ ಶಬ್ದಗಳಲ್ಲಿ ಸಂಸ್ಕೃತ ಗದ್ಯ ಇಲ್ಲವೆ ಪದ್ಯಗಳ ಮೂಲಕ ವಿವರಿಸಲಾಗದೆ. ಅಲ್ಲದೆ ಯತಿವೃಷಭಾಚಾರ್ಯರ ಮತವನ್ನೂ ಇಲ್ಲಿ ಉಲ್ಲೇಖಮಾಡಿದೆ. ಇದೂ ಅಲ್ಲದೆ ಈ ಧವಲಾಟೀಕೆಯ ಕೆಲವು ಗಾಹೆಗಳು ಶ್ವೇತಾಂಬರ ಆಮ್ನಾಯದ ಆಚಾರಾಂಗ, ಬೃಹತ್ಕಲ್ಪಸೂತ್ರ, ದಶವೈಕಾಲಿಕ, ಸ್ಥಾನಾಂಗ ಟೀಕೆ, ಅನುಯೋಗದ್ವಾರ, ಅವಶ್ಯಕ ನಿರ್ಯುಕ್ತಿಗಳಲ್ಲಿ ಕಂಡು ಬರುತ್ತವೆ. ಇಷ್ಟು ಮಾತ್ರವಲ್ಲದೆ ಮತ್ತೂ ಹೆಚ್ಚಿನ ಶೋಧನೆ ಮಾಡಿದಲ್ಲಿ ದಿಂಗಬರ ಮತ್ತು ಶ್ವೇತಾಂಬರ ಸಾಹಿತ್ಯದಲ್ಲಿ ಪ್ರಾಯಿಕವಾಗಿ ಎಲ್ಲ ಗಾಹೆಗಳೂ ದೊರಕಬಹುದಾದ ಸಂಭವವಿದೆ.

ಸೂತ್ರ ಪುಸ್ತಕಗಳಲ್ಲಿ ಪಾಠಭೇದ ಇಲ್ಲವೆ ಮತಭೇದ : ವೀರಸೇನಾಚಾರ್ಯರ ಸಂಮುಖದಲ್ಲಿ ಪುಷ್ಪದಂತ, ಭೂತಬಲಿ ಹಾಗೂ ಗುಣಧರ ಆಚಾರ್ಯರುಗಳ ಪೂರ್ಣ ಸೂತ್ರಸಾಹಿತ್ಯವಿದ್ದಿತೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿಲ್ಲ. ಆದರೆ, ಈ ಬಗ್ಗೆ, ಈ ಸೂತ್ರಗ್ರಂಥಗಳ ಚಿಕ್ಕದಾದ, ದೊಡ್ಡದಾದ ಪಾಠಭೇದಗಳನ್ನೊಳ ಗೊಂಡ ಅನೇಕ ಸಂಸ್ಕರಣಗಳು ಅವರ ಸಂಮುಖದಲ್ಲಿದ್ದುವೆಂಬುದು ವಿಶೇಷವಾಗಿ ಉಲ್ಲೇಖಾರ್ಹಸಂಗತಿಯಾಗಿದೆ. ಅವರು ಅನೇಕ ಎಡೆಗಳಲ್ಲಿ ಸೂತ್ರಪಾಠಗಳ ಬೇರೆ ಬೇರೆ ಪಾಠಗಳು ಹಾಗೂ ಅವುಗಳಿಂದ ಮೂಡಿದ ಮತಭೇದಗಳನ್ನು ಉಲ್ಲೇಖಿಸಿ ಯಥಾ ಸಾಧ್ಯ ಸಮಾಧಾನಗೊಳಿಸಿದ್ದಾರೆ. (೨)

ಕೆಲವೆಡೆಗಳಲ್ಲಿ ಸೂತ್ರಗಳಲ್ಲಿ ಪರಸ್ಪರ ವಿರೋಧಗಳು ಕಂಡು ಬರುತ್ತಿದ್ದುವು. ಇಂತಹ ಎಡೆಗಳಲ್ಲಿ ಟೀಕಾಕಾರರು ನಿರ್ಣಯ ಕೊಡಲು ತಮ್ಮ ಅಸಮರ್ಥತೆಯನ್ನು ವ್ಯಕ್ತಪಡಿಸಿ 'ಇವುಗಳಲ್ಲಿ ಸೂತ್ರ ಯಾವುದು ಅಸೂತ್ರ ಯಾವುದು ಎಂಬುದರ ನಿರ್ಣಯವನ್ನು ಆಗಮನಿಪುಣ ಆಚಾರ್ಯರು ಕೊಡಲಿ', ಈ ವಿಷಯದಲ್ಲಿ ಉಪ ದೇಶದ ಲಾಭವಿಲ್ಲವಾದುದರಿಂದ ಏನು ಹೇಳಲೂ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಕೆಲವೆಡೆ ಪರಸ್ಪರ ವಿರೋಧದ ಎರಡೂ ಸೂತ್ರಗಳಿಗೆ ವ್ಯಾಖ್ಯಾನ ಮಾಡಿ 'ಇದರ (ಇವುಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದರ) ನೀರ್ಣಯವನ್ನು ಚತು ರ್ದಶ ಪೂರ್ವಶ್ರುತಧರರು ಅಥವಾ ಕೇವಲಜ್ಞಾನಿಗಳು ಮಾತ್ರ ಮಾಡಬಲ್ಲರು, ಆದರೆ ವರ್ತಮಾನ ಕಾಲ್ದಲ್ಲಿ ಇಲ್ಲಿ ಅವರಿಲ್ಲ, ಅಥವಾ ಈಗ ಅವರಿಂದ ಕೇಳಿ ತಿಳಿದು ಬಂದವರೂ ದೊರಕುವುದಿಲ್ಲ, ಆದ್ದರಿಂದ ಸೂತ್ರಗಳ ಪ್ರಮಾಣಿಕತೆಯನ್ನು ನಷ್ಟಪಡಿ ಸುವುದರ ಬಗ್ಗೆ ಹೆದರಿಕೆಯುಳ್ಳ ಆಚಾರ್ಯರು ಎರಡೂ ಸೂತ್ರಗಳನ್ನು ವ್ಯಾಖ್ಯಾನ ಮಾಡಬೇಕಾಗಿದೆ' ಎಂದು ಹೇಳಿದ್ದಾರೆ. ಮತ್ತೆ ಕೆಲವೆಡೆಗಳಲ್ಲಿ ಸೂತ್ರಗಳ ಬಗ್ಗೆ ಮೂಡಿದ ಸಂದೇಹವನ್ನು ಕುರಿತು 'ಈ ವಿಷಯದ ಬಗ್ಗೆ ಗೌತಮನೊಡನೆ ವಿಚಾರ ಮಾಡಬೇಕು, ನಾವು ಇಲ್ಲಿ ಅವುಗಳ (ಸೂತ್ರಗಳ) ಅಭಿಪ್ರಾಯವನ್ನು ಮಾತ್ರ ಹೇಳಿ ದ್ದೇವೆ' ಎಂದೂ ಹೇಳಿದ್ದಾರೆ. ಸೂತ್ರವಿರೋಧದ ಬಗ್ಗೆ ಮತ್ತೆ ಕೆಲವೆಡೆಗಳಲ್ಲಿ 'ಈ ವಿರೋಧವಾದರೋ ಸತ್ಯವಿದೆ, ಆದರೆ ಏಕಾಂತ (ಏಕಪಕ್ಷೀಯ) ಗ್ರಹಣ ಮಾಡ ಬಾರದು ಏಕೆಂದರೆ ಆ ವಿರೋಧ ಸೂತ್ರಗಳದ್ದಲ್ಲ, ಈ ಸೂತ್ರಗಳ ಉಪಸಂಗ್ರಹ ಕರ್ತೃಗಳಾದ ಆಚಾರ್ಯರು, ಸಕಲ ಶ್ರುತಜ್ಞಾತೃಗಳಾಗಿರಲಿಲ್ಲವಾದುದರಿಂದ, ಅವ

ರಿಂದ ಈ ವಿರೋಧ ಏರ್ಪಟ್ಟಿರುವ ಸಂಭವವಿದೆ' ಎಂದು ಸಮಾಧಾನ ಹೇಳಿದ್ದಾರೆ. ಇದರಿಂದ 'ಸೂತ್ರಗಳಲ್ಲಿ ಪಾಠಭೇದಾದಿಗಳು ಪರಂಪರಾಗತ ಆಚಾರ್ಯರುಗಳಿಂದಲೂ ಆಗಿಬಿಟ್ಟಿದ್ದುವು' ಎಂಬುದಾದ ಆಚಾರ್ಯ ವೀರಸೇನರ ಅಭಿಪ್ರಾಯವನ್ನು ತಿಳಿಯಬಹುದು. ಇದು ಸ್ವಾಭಾವಿಕವಾದುದೇ ಆಗಿದೆ. ಏಕೆಂದರೆ ಇವರ ಉಲ್ಲೇಖ ಗಳಿಂದ ಸೂತ್ರಗಳ ಅಧ್ಯಯನವು ಅನೇಕ ಪ್ರಕಾರಗಳಿಂದ ನಡೆಯುತ್ತಿದ್ದಿತೆಂದು ತಿಳಿಯಬರುವುದು. ಇದರ ಅನುಸಾರ ಕೆಲವರು ಸೂತ್ರಾಚಾರ್ಯರು ಕೆಲವರು ಉಚ್ಚಾ ರಣಾಚಾರ್ಯರು ಕೆಲವರು ನಿಕ್ಷೇಪಾಚಾರ್ಯರು, ಮತ್ತೆ ಕೆಲವರು ವ್ಯಾಖ್ಯಾನಾಚಾರ್ಯರಾಗಿದ್ದರು. ಇವರಿಗೂ ಮೇಲಿನದು 'ಮಹಾವಾಚಕ' ರೆಂದು ಪದವಿಯಾಗಿದ್ದಿತೆಂದು ತಿಳಿದುಬರುತ್ತದೆ. ಕಷಾಯಪ್ರಾಭೃತದ ಪ್ರಕಾಂಡಜ್ಞಾತೃಗಳಾದ ಆರ್ಯಮುಂಕ್ಷು ಮತ್ತು ನಾಗಹಸ್ತಿಯವರನ್ನು ಅನೇಕ ಎಡೆಗಳಲ್ಲಿ 'ಮಹಾವಾಚಕ'ರೆಂದು ಹೇಳಲಾಗಿದೆ. ಒಂದೆಡೆಯಲ್ಲಿ ಆರ್ಯನಂದಿಯವರನ್ನೂ 'ಮಹಾವಾಚಕ' ಎಂದು ನಿರ್ದೇಶಿಸಿದೆ. ಸಂಭವನೀಯವಾಗಿ ಇವರು ಧವಲಾಪ್ರಶಸ್ತಿಯಲ್ಲಿ ಉಲ್ಲೇಖಿಸಿರುವ ವೀರಸೇನರ ಗುರುವೇ ಆಗಿರಬೇಕು.

ಧವಲಾಕಾರರು ಹಿಂದಿನಕಾಲದ ಆಚಾರ್ಯರಾರೊಬ್ಬರ ಮತ ದೊರೆಯದಿರು ವಂತಹ ಅನೇಕ ಪ್ರಸಂಗಗಳ ಉಲ್ಲೇಖ ಮಾಡಿ ಅವುಗಳ ನಿರ್ಣಯವನ್ನು ಅವರು ತಮ್ಮ ಗುರುವಿನ ಉಪದೇಶ ಬಲದಿಂದ, ಅಥವಾ ಪರಂಪರಾಗತವಾಗಿ ಬಂದ ಉಪದೇಶದಾಧಾರದಿಂದ ಅಥವಾ ಸೂತ್ರಗಳೊಡನೆ ವಿರೋಧ ಹೊಂದಿಲ್ಲದ ಅನ್ಯ ಆಚಾರ್ಯರ ವಚನಗಳ ಆಧಾರದಿಂದ ನಿರ್ಣಯ ಮಾಡಿದ್ದಾರೆ.

ಧವಲಾಪತ್ರ ೧೦೩೭ರಲ್ಲಿ ಮತ್ತು ಜಯಧವಲಾ ಮಂಗಲಾಚಾರಣದಲ್ಲಿ ಹೇಳಿರು ವಂತೆ ಗುಣಧರಾಚಾರ್ಯವಿರಚಿತ ಕಷಾಯಪ್ರಾಭೃತವು ಆಚಾರ್ಯ ಪರಂಪರೆಯಿಂದ ಆರ್ಯಮುಂಕ್ಷು ಮತ್ತು ನಾಗಹಸ್ತಿ ಆಚಾರ್ಯರಿಗೆ ಪ್ರಾಪ್ತವಾಯಿತು. ಅವರಿಂದ ಉಪದೇಶ ಪಡೆದು ಯತಿವೃಷಭರು ಅದರ ಮಾಲೆ ವೃತ್ತಿಸೂತ್ರ ರಚನೆ ಮಾಡಿದರು. ಆರ್ಯಮಂಕ್ಷು ಮತ್ತು ನಾಗಹಸ್ತಿ ಆಚಾರ್ಯರ ಮತಭೇದಗಳನ್ನು ಅನೇಕ ಕಡೆಗಳಲ್ಲಿ ವೀರಸೇನ ಮತ್ತು ಜಿನಸೇನರು ಉಲ್ಲೇಖ ಮಾಡಿದ್ದಾರಾಗಿ ಇವರ ಸಂಮುಖದಲ್ಲಿ ಆ ಇಬ್ಬರೂ ಆಚಾರ್ಯರ ಅಭಿಮತದ ವ್ಯಾಖ್ಯಾನಗಳು ಉಪಸ್ಥಿತವಿದ್ದುವೆಂದು ತಿಳಿಯಬಹುದಾಗಿದೆ. ಹಾಗೂ ಅವರಿಬ್ಬರನ್ನೂ 'ಮಹಾವಾಚಕ' ಎಂಬ ಉಪಾಧಿ ಯೊಡನೆ ಯಲ್ಲದೆ

'ಕ್ಷಮಾಶ್ರಮಣ' ಎಂಬ ಉಪಾಧಿಯೊಡನೆಯೂ ನಿರ್ದೇಶಿಸಿದ್ದಾರೆ. ಯತಿ ವೃಷಭರ ಚೂರ್ಣಿಸೂತ್ರಗ್ರಂಥವೂ ಇವರ ಸಂಮುಖದಲ್ಲಿದ್ದಿತು.ಇದರ ಸೂತ್ರ ಸಂಖ್ಯಾಕ್ರಮದ ಬಗ್ಗೆಯೂ ವೀರಸೇನರು ವಿಶೇಷ ಲಕ್ಷ್ಯವಿರಿಸಿದ್ದರು.

ಉತ್ತರ ಮತ್ತು ದಕ್ಷಿಣ ಪ್ರತಿಪತ್ತಿ : ಸೂತ್ರ ಮತ್ತು ವ್ಯಾಖ್ಯಾನಗಳಲ್ಲಿ ಕಂಡು ಬರುವ ವಿರೋಧಗಳಲ್ಲದೆ ಬೇರೆ ರೀತಿಯದಾದ ವಿರೋಧದ ಉಲ್ಲೇಖವಿದ್ದು ಅದನ್ನು ಧವಲಾಕಾರರು ಉತ್ತರಪ್ರತಿಪತ್ತಿ ಮತ್ತು ದಕ್ಷಿಣಪ್ರತಿಪತ್ತಿ ಎಂದು ಹೆಸರಿಸಿದ್ದಾರೆ. ಈ ರೀತಿಯದಾಗಿದ್ದ ಎರಡು ಭಿನ್ನಪ್ರಕಾರದ ಮಾನ್ಯತೆಗಳಲ್ಲಿ ಟಿಕಾಕಾರರು ದಕ್ಷಿಣ ಪ್ರತಿಪತ್ತಿಗೆ ಮಾನ್ಯತೆ ಕೊಟ್ಟಿದ್ದಾರೆ. ಏಕೆಂದರೆ, ಇದು ಋಜು ಎಂದರೆ ಸರಳ, ಸುಸ್ಪಷ್ಟ ಮತ್ತು ಆಚಾರ್ಯ ಪರಂಪರಾಗತವಾದುದಾಗಿದೆ ಮತ್ತು ಉತ್ತರಪ್ರತಿಪತ್ತಿಯು ಅನೃಜುವಾಗಿದ್ದು ಆಚಾರ್ಯ ಪರಂಪರಾಗತವಾದುದಾಗಿಲ್ಲ ಎಂದು ಹೇಳಿ ಧವಲಾ ದಲ್ಲಿ ಇಂತಹ ಮೂರು ಪ್ರಸಂಗಗಳನ್ನು ಗುರುತಿಸಲಾಗಿದೆ.

ದಕ್ಷಿಣಪ್ರತಿಯಲ್ಲಿಯೇ ಅಂತರ್ಗತವಾಗಿರುವ ಒಂದು ಮತಭೇದದ ಉಲ್ಲೇಖ ಪ್ರಸ್ತುತ ಪ್ರಸಂಗದಲ್ಲಿ ಗಮನಾರ್ಹವಾಗಿದೆ. ಕೆಲವರು ಆಚಾರ್ಯರು (ಈ ಹೇಳಿದ) ಸಂಖ್ಯೆಯ ಸಂಬಂಧವಾಗಿ ವ್ಯಕ್ತಪಡಿಸಿರುವ ಶಂಕೆಯನ್ನು ನಿವಾರಣೆ ಮಾಡುತ್ತಾ ಧವಲಾಕಾರರು–'ಜಂ ದೂಸಣಂ ಭಣಿದಂ ತಣ್ಣ ದೂಸಣಂ, ಬುದ್ಧಿ ವಿಹೂಣಾಇರಿ ಯಮುಹವಿಣಿಗ್ಗ ಯತ್ತಾದೋ'–ಎಂದರೆ, 'ಯಾವ ದೂಷಣೆಯನ್ನು ಹೇಳಲಾಗಿ ದೆಯೋ ಅದು ದೂಷಣವಲ್ಲ. ಏಕೆಂದರೆ ಇದು, ಬುದ್ಧಿವಿಹೀನ ಆಚಾರ್ಯರ ಬಾಯಿಂದ ಹೊರಟಿರುವ ಮಾತು' ಇದನ್ನು ವೀರಸೇನಸ್ವಾಮಿಯವರು ತಮ್ಮ ಸಮ ಕಾಲೀನರಾದ ಯಾರೋ ಒಬ್ಬ ಅಚಾರ್ಯರ ಶಂಕೆಯನ್ನು ದೃಷ್ಟಿಯಲ್ಲಿರಿಸಿ ಹೇಳಿರುವ ಭರ್ತ್ಸನೆಯ ಮಾತಾಗಿರಬಹುದಾದ ಸಂಭವವಿದೆ.

ಈ ಉತ್ತರ ಮತ್ತು ದಕ್ಷಿಣಪ್ರತಿಪತ್ತಿಗೆ ಸಂಬಂಧಿಸಿದ ಸಂಗತಿಯು, ಧವಲಾಕಾರರ ದೃಷ್ಟಿಯಲ್ಲಿ, ಸಂಭವನೀಯವಾಗಿ, ಜೈನಸಮಾಜದ ಒಳಗಡೆಯದೇ ಆದ ಯಾವು ದಾದ ರೊಂದು ವಿಶೇಷ ಸಾಂಪ್ರದಾಯಿಕ ಮಾನ್ಯತೆಗಳಿಗೆ ಸಂಬಂಧಿಸಿದ್ದಾಗಿರಬಹು ದಾಗಿದೆಯಾದ್ದರಿಂದ, ಮಹತ್ವಪೂರ್ಣವೂ ವಿಚಾರಣೀಯವೂ ಆಗಿದೆ.

ಧವಲಾದಲ್ಲಿ ದೃಷ್ಟಿಗೋಚರವಾಗುವ ಅನ್ಯ ಆಚಾರ್ಯರ ಅತವಾ ಅವರ ರಚನೆ ಗಳ ಉಲ್ಲೇಖ–

ತಿಲೋಯಪಣ್ಣತ್ತಿ ಸೂತ್ರ–ಯತಿವೃಷಭಾಚಾರ್ಯರ ತಿಲೋಯಪಣ್ಣತ್ತಿಯನ್ನು ಧವಕಾರರು 'ಸೂತ್ರ'ವೆಂದು ನಿರ್ದೆಶೀಸಿ ಅಗತ್ಯವಾದೆಡೆಗಳಲ್ಲಿ ಅದರ ಉಪಯೋಗ ಮಾಡಿಕೊಂಡಿದ್ದಾರೆ. ಇದರ ಕರ್ತೃಯತಿವೃಷಭಾಚಾರ್ಯರು, ಇವರು ಜಯಧವಲಾಟೀಕೆಯಲ್ಲಿ ಅಂತರ್ಗತವಾಗಿರುವ ಕಷಾಯಪ್ರಾಭೃತಕ್ಕೆ ಚೂರ್ಣಿಸೂತ್ರ ರಚನೆ ಮಾಡಿರುವ ಯತಿವೃಷಭರಿಂದ ಅಭಿನ್ನರೆಂದು ಕಂಡುಬರುತ್ತದೆ. ಸತ್ಪ್ರರೂಪಣಾ ದಲ್ಲಿಯೂ ಯತಿವೃಷಭರ ಉಲ್ಲೇಖವಿದೆ.

ಪಂಚತ್ಥಿಪಾಹುಡ– ಕುಂದಕುಂದರ ಪಂಚಾಸ್ತಿಕಾಯವನ್ನು 'ಪಂಚತ್ಥಿಪಾಹುಡ' ವೆಂದು ಹೆಸರಿಸಿ ಅದರ ಎರಡು ಗಾಹೆಗಳನ್ನು ಉಲ್ಲೇಖಿಸಿದೆ 'ಪರಿಕರ್ಮ'ದ ಉಲ್ಲೇಖ ಮತ್ತು ಇದು ಕುಂದಕುಂದಕರ್ತೃಕವಾಗಿದೆ ಎಂಬುದರ ಬಗ್ಗೆ ಹಿಂದೆ ಪರಿಷ್ಕರಿಸಲಾಗಿದೆ.

ಗೃದ್ಧಪಿಂಛಾಚಾರ್ಯ ಕೃತ ತತ್ವಾರ್ಥ ಸೂತ್ರ–ತತ್ವಾರ್ಥ ಸೂತ್ರವು ಗೃದ್ಧಪಿಂಛಾಚಾರ್ಯ ರಚಿತವಾದುದೆಂದು ವೀರಸೇನರು ನಿರ್ದೇಶಿಸಿ ಅನೇಕ ಸೂತ್ರಗಳನ್ನು ಅದರಿಂದ ಉಲ್ಲೇಖಿಸಿದ್ದಾರೆ. ಇದರಿಂದ, ತತ್ವಾರ್ಥಕ್ಕೆ ಸಂಬಂಧಿಸಿದ ಒಂದು ಶ್ಲೋಕ ಹಾಗೂ ಶ್ರವಣಬೆಳಗುಳದ ಕೆಲವು ಶಾಸನಗಳಲ್ಲಿ ಉಮಾಸ್ವಾಮಿಯವರ ಬಗ್ಗೆ'ಗೃದ್ಧಪಿಂಛೋಪಲಾಂಛಿತ' ಎಂದು ಹೇಳಿರುವುದರ ಸಮರ್ಥನೆಯಾಗುವುದು. ತತ್ವಾರ್ಥಸೂತ್ರ ಕರ್ತೃವನ್ನು 'ಗೃದ್ಧಪಿಂಛಾಚಾರ್ಯ' ಎಂದು ಹೆಸರಿಸಿರುವ ದಾಖಲಾತಿಗಳಲ್ಲಿ, ಈಗ ಉಪಲಬ್ಧವಿರುವಂತೆ, ಇದು ಅತ್ಯಂತ ಪ್ರಾಚೀನ ದಾಖಲಾತಿ ಯಾಗಿದೆ.

ಆಚಾರಾಂಗ–ಧವಲಾದಲ್ಲಿ ಒಂದು ಗಾಥೆಯನ್ನು ಮುಂದಿನಂತೆ ಉಲ್ಲೇಖಿಸಿದೆ–

ಪಂಚತ್ಥಿಕಾಯಾ ಯ ಛಜ್ಜೀವಣಿಕಾಯ ಕಾಲದವ್ವಮಣ್ಣೇಯ ।
ಆಣಾಗೆಜ್ಝೇ ಭಾವೇ ಆಣಾವಿಚಯೇಣ ವಿಚಿಣಾದಿ ॥

ಇದೇ ಗಾಥೆಯು ಸ್ವಲ್ಪಮಾತ್ರದ ಶಾಬ್ದಿಕ ವ್ಯತ್ಯಾಸದೊಡನೆ ಮೂಲಾಚಾರ (೩೯೯ ನೇ) ಗಾಹೆಯಾಗಿದೆ. ಈ ಗಾಹೆಯನ್ನು ಇಲ್ಲಿಂದಲೇ ವೀರಸೇನರು ಉದ್ಧೃತಗೊಳಿಸಿದ್ದಲ್ಲಿ, ಅವರ ಕಾಲದಲ್ಲಿ ಮೂಲಾಚಾರವು 'ಆಚಾರಾಂಗ ' ವೆಂಬ ಹೆಸರಿನಿಂದ

ಧವಲಾದಲ್ಲಿ ಕಂಡುಬರುವ ಸಮಂತಭದ್ರರ ಕೃತಿಗಳ ಅವತರಣಗಳ ಬಗ್ಗೆ ಹಾಗೂ ದೇವನಂದಿ ಪೂಜ್ಯಪಾದ 'ಸಾರಸಂಗ್ರಹ'ದ ಬಗ್ಗೆ ಹಿಂದೆ ವಿವರಿಸಲಾಗಿದೆ.

ಪೂಜ್ಯಪಾದ ಭಟ್ಟಾರಕ-ಅಕಲಂಕ ದೇವವಿರಚಿತ ತತ್ವಾರ್ಥ ರಾಜವಾರ್ತಿಕದ ಉಪಯೋಗವನ್ನು ಧವಲಾಕಾರರು ಉತ್ತಮ ರೀತಿಯಿಂದ ಮಾಡಿಕೊಂಡಿದ್ದಾರೆ. ಕೆಲವೆಡೆ ಶಬ್ದಶಃ ಮತ್ತೆ ಕೆಲವಡೆ ಸ್ವಲ್ಪ ಬದಲಾವಣೆಗಳೊಡನೆ ಅದರ ಅನೇಕ ಅವತರಣಗಳನ್ನು ಕೊಟ್ಟಿದ್ದಾರೆ. ಆದರೆ ಅವುಗಳೊಡನೆ ಎಲ್ಲಿಯಾಗಲಿ ಅಕಲಂಕರ ಹೆಸರನ್ನು ಇಲ್ಲವೆ, ರಾಜವಾರ್ತಿಕದ ಹೆಸರನ್ನು ಹೇಳಿಲ್ಲ. ಆ ಅವತರಣಗಳನ್ನು ಹೆಚಿವಿನದಾಗಿ 'ಉಕ್ತಂಚ ತತ್ವಾರ್ಥಭಾಷ್ಯೇ' ಅಥವಾ 'ತತ್ವಾರ್ಥ ಭಾಷ್ಯಗತ' ಎಂದು ಕಾಣಿಸಿದ್ದಾರೆ. ಒಂದೆಡೆಯಲ್ಲಿ (ಪತ್ರ ೭೦೦) 'ಪೂಜ್ಯಪಾದ ಭಟ್ಟಾರಕೈರಪ್ಯಭಾಣಿ, ಸಾಮಾನ್ಯನಯ-ಲಕ್ಷಣ ಮಿದಮೇವ. ತದ್ಯಥಾ, ಪ್ರಮಾಣ ಪಕಾಶಿತಾರ್ಥ ವಿಶೇಷಪ್ರರೂಪಕೋ ನಯಃ' ಎಂದು ಹೇಳಿದೆ.

ಇದರಿಂದ ಮುಂದೆ 'ಪ್ರಕರ್ಷೇಣ ಮಾನಂ ಪ್ರಮಾಣಂ' ಎಂದು ಮುಂತಾಗಿ ಈ ಹೇಳಿದ ಲಕ್ಷಣದ ವ್ಯಾಖ್ಯಾನವನ್ನೂ ಮಾಡಿದ್ದಾರೆ. ಇದೇ ಲಕ್ಷಣ ಹಾಗೂ ವ್ಯಾಖ್ಯಾನವು ತತ್ವಾರ್ಥರಾಜವಾರ್ತಿಕದಲ್ಲಿ (೧, ೩೩,೧)ಇದೆ. ಇಯಧವಲಾದಲ್ಲಿಯೂ (ಪತ್ರ೨೬) ಈ ವ್ಯಾಖ್ಯಾನವನ್ನು ಕೊಡಲಾಗಿದ್ದು ಅಲ್ಲಿ ಇದನ್ನು ತತ್ವಾರ್ಥಭಾಷ್ಯಗತವೆಂದು ಹೇಳಲಾಗಿದೆ. 'ಅಯಂ ವಕ್ಯನಯಃ ತತ್ವಾರ್ಥ ಭಾಷ್ಯಗತಃ' ಇದರಿಂದ ರಾಜವಾರ್ತಿಕದ ಮೌಲಿಕ ಹೆಸರು 'ತತ್ವಾರ್ಥಭಾಷ್ಯ' ಎಂದಾಗಿತ್ತೆಂದು ಮತ್ತು ಇದರ ಕರ್ತೃ ಅಕಲಂಕ ದೇವರನ್ನು ಸನ್ಮಾನ ಸೂಚಕವಾಗಿ 'ಪೂಜ್ಯಪಾದ ಭಟ್ಟಾರಕ' ಎಂದು ಹೆಸರಿಸಲಾಗಿದೆಯೆಂದು ಸಿದ್ಧವಾಗುವುದು. ಇವರ 'ಭಟ್ಟಾಕಲಂಕ ದೇವ' ಎಂಬ ಹೆಸರು ತಿಳಿದದ್ದೇ ಆಗಿದೆ.

ಪ್ರಭಾಚಂದ್ರ ಭಟ್ಟಾರಕ-ಧವಲಾಟೀಕೆಯ ವೇದನಾಖಂಡಾಂತರ್ಗತವಾದ ನಯನಿರೂಪಣೆಯಲ್ಲಿ (ಪ.೭೦೦)-'ಪ್ರಭಾಚಂದ್ರಭಟ್ಟರಕ್ಕೆರಪ್ಯಭಾಣಿ ಪ್ರಮಾಣ ವ್ಯಪಾಶ್ರಯ ಪರಿಣಾಮ ವಿಕಲ್ಪ ವಶೀಕೃತಾರ್ಥ ವಿಶೇಷಪ್ರರೂಪಣ ಪ್ರವಣ ಪ್ರಣಿಧಿರ್ಯಃಸ ನಯ ಇತಿ' ಎಂದು ಪ್ರಭಾಚಂದ್ರರು ಹೇಳಿರುವ ನಯದ ಲಕ್ಷಣವನ್ನು ಉದ್ದೃತಗೊಳಿಸಿದೆ. ಇದೇ ನಯಲಕ್ಷಣವು

'ಪ್ರಮಾಣವ್ಯಪಾಶ್ರಯ' ಮುಂತಾಗಿ ಜಯಧವಲಾದಲ್ಲಿ (ಪ. ೨೬) ಹೇಳಲಾಗಿದು ಅದರ ನಾಸ್ಯ ನಯಃ ಪ್ರಭಾಚಂದ್ರೀಯಃ' ಎಂದಿರುವುದು ಕಂಡು ಬರುತ್ತದೆ. ಇಲ್ಲಿ ನಮಗೆ ಲಬ್ದವಿರವ ಪ್ರಭಾಚಂದ್ರೀಯಃ ಎಂಬುದಾಗಿರಬೇಕೆಂದು ಕಂಡು ಬರುತ್ತದೆ.

ಈ ಪ್ರಭಾಚಂದ್ರ ಭಟ್ಟಾರಕರನ್ನು ಧವಲಾಪ್ರಸ್ತಾವನಾಕಾರರಾದ ಮಾನ್ಯ ಹೀರಾಲಾಲ್‌ಜೈನ್‌ರವರು, ಸುಪ್ರಸಿದ್ಧ ಜೈನ ನ್ಯಾಯಗ್ರಂಥಗಳಾದ ಪ್ರಮೇಯ ಕಮಲ ಮಾರ್ತಂಡ ಮತ್ತು ನ್ಯಾಯಕಮುದ ಚಂದ್ರಗಳ ಕರ್ತೃವಾದ 'ಪ್ರಭಾಚಂದ್ರ' ರೆಂದು ಗುರುತಿಸಿರುವಂತೆ ಕಂಡು ಬರುತ್ತದೆ. ಆದರೆ ಇವರು ಧವಲಾ ಮತ್ತು ಜಯಧವಲಾದಲ್ಲಿ ಹೆಸರಿಸಲಾಗಿರುವ ಪ್ರಭಾಚಂದ್ರ ಭಟ್ಟಾರಕರಾಗಿರಬಹುದಾದ ಸಂಬವವಿಲ್ಲವೆಂದು ಕ. ಪಾ. ಪ್ರಸ್ತಾವಕಾರರು ಈ ಮುಂದಿನ ಮೂರು ಕಾರಣಗಳನ್ನಿತ್ತು ಸಮರ್ಥನೆ ಮಾಡಿದ್ದಾರೆ. ಮೊದಲನೆಯದಾಗಿ ಧವಲಾ ಮತ್ತು ಜಯಧವಲಾಗಳಲ್ಲಿ ಉದ್ಧೃತವಿರುವ ಮೇಲೆ ಹೇಳಿದ ನಯದ ಲಕ್ಷಣವು ಈಗ ಉಪಲಬ್ಧಿ ವಿರುವ, ಪ್ರಭಾಚಂದ್ರರ ರಚನೆಗಳಾದ ಪ್ರಮೇಯಕಮಲಮಾರ್ತಾಂಡದಲ್ಲಾಗಲಿ ಅಥವಾ ನ್ಯಾಯಕುಮುದಚಂದ್ರದಲ್ಲಾಗಲಿ ಇಲ್ಲವಾಗಿದೆ. ಎರಡನೆಯದಾಗಿ ಈ ಎರಡು ಗ್ರಂಥಗಳ ಕರ್ತೃ ಪ್ರಭಾಚಂದ್ರರು, ಧವಲಾಕರ್ತೃ ವೀರಸೇನರಿಂದ (ಸುಮಾರು ಮೂರು ಶತಮಾನಗಳಷ್ಟು) ಈಚಿನ ಕಾಲದವರಾಗಿದ್ದಾರೆ. ಮೂರನೆಯದಾಗಿ ಈ ಪ್ರಭಾಚಂದ್ರರನ್ನು ಎಲ್ಲಿಯಾಗಲಿ 'ಪ್ರಭಾಚಂದ್ರ ಭಟ್ಟಾರಕ' ಎಂಬುದಾಗಿ ಹೆಸರಿಸಿರುವ ಉಲ್ಲೇಖಗಳು ದೊರಕುವುದಿಲ್ಲ. ಆದ್ದರಿಂದ ಧವಲಾದಲ್ಲಿ ಉಲ್ಲೀಖಿತವಾಗಿರುವ ಪ್ರಭಾಚಂದ್ರ ಭಟ್ಟಾರಕ ಎಂಬ ಹೆಸರು ಈ ಹೇಳಿದ ಎರಡು ನ್ಯಾಯಗ್ರಂಥ ಕರ್ತೃ ಪ್ರಭಾಚಂದ್ರರಿಂದ ಬೇರೆಯಾದವರ ಹೆಸರಾಗಿದೆಯೆಂದು ನಿಶ್ಚಿತವಾಗುವುದು. ಈ ಪ್ರಭಚಂದ್ರ ಭಟ್ಟಾರಕರನ್ನು, ಪುನ್ನಾಟಸಂಘದ ಜಿನಸೇನರು ಹರಿವಂಶ ಪುರಾಣದಲ್ಲಿ ಹೆಸರಿಸಿರುವ ಕುಮಾರಸೇನರ ಶಿಷ್ಯರೆಂದು ಹಾಗೂ ಆದಿಪುರಾಣದಲ್ಲಿ ಹೆಸರಿಸಿರುವ ಕುಮಾರಸೇನರ ಶಿಷ್ಯರೆಂದು ಹಾಗೂ ಆದಿಪುರಾಣದಲ್ಲಿ ಹೆಸರಿಸಿರುವ 'ಪ್ರಭಾಚಂದ್ರ'ರೆಂದೂ ಕ. ಪಾ. ಪ್ರಸ್ತಾವನಾಕಾರರು ಗುರುತಿಸಿದ್ದಾರೆ.[೨೬] ಮಾನ್ಯ ನಾಥೂರಾಂಪ್ರೇಮಿಯವರು, ಜೈನೇಂದ್ರ ವ್ಯಾಕರಣ 'ರಾತ್ರೈಃಕೃತಿಪ್ರಭಾರ್ಚಚಂದ್ರಸ್ಯ' (೪-೩-೮೦) ಸೂತ್ರದಲ್ಲಿ ಹೆಸರಿಸಿರುವ ಪ್ರಭಾಚಂದ್ರರು

(ಈಹೇಳಿದ) ಹರಿವಂಶಪುರಣ ಮತ್ತು ಆದಿ ಪುರಾಣಗಳಲ್ಲಿ ಹೆಸರಿಸಿರುವ ಪ್ರಭಾಚಂದ್ರರೇ ಆಗಿರಬೇಕೆಂದು ಹೇಳಿದ್ದಾರೆಯಾಗಿ ಇವರೇ ಧವಲಾಟೀಕೆಯಲ್ಲಿ ಹೆಸರಿಸಿರುವ ಪ್ರಭಾಚಂದ್ರಭಟ್ಟಾರಕರೆಂದು ತಿಳಿಯ ಬೇಕಾಗುವುದು.

ಧನಂಜಯನ ಅನೇಕಾರ್ಥ ನಾಮಮಾಲಾ ; ಧವಲಾದಲ್ಲಿ 'ಇತಿ' ಎಂಬುದರ ನಾನಾರ್ಥವನ್ನು ಶ್ರುತಪಡಿಸಲೋಸುಗ ಮುಂದಿನ ಶ್ಲೋಕವನ್ನು ಉಲ್ಲೇಖ ಮಾಡಲಾಗಿದೆ.

ಹೇತಾವೆವಂ ಪ್ರಕಾರಾದ್ಯೈಃ ವ್ಯವಚ್ಛೇದೇ ವಿಪರ್ಯಯಃ ।

ಪ್ರಾದುರ್ಭಾವೇ ಸಮಾಪ್ತಂ ಚ ಇತಿ ಶಬ್ದಂ ವಿದುರ್ಬುಧಾಃ ॥ (ಧವಲಾ ಅ. ೩೮೭)

ತುಸುಮಾತ್ರದ ವತ್ಯಾಸದೂಡನೆ ಇದೇ ಶೋಕವು ಧನಂಜಯನ ಅನೇಕಾರ್ಥ ನಾಮಮಾಲಾದಲ್ಲಿ (ಶ್ಲೋ. ೩೯)ಇದೆ.

ಈಧನಂಜಯನು ರಚಿಸಿದ ನಾಮಮಾಲಾಕೋಶದಲ್ಲಿ,ತನ್ನದೇ ಆದ ದ್ವಿಸಂಧಾನ ಕಾವ್ಯ, ಅಕಲಂಕರ ಪ್ರಮಾಣ ಮತ್ತು ಪೂಜ್ಯಪಾದರ ಲಕ್ಷಣವನ್ನು ಅಪಶ್ಚಿಮ ರತ್ನತ್ರಯ, ಎಂದರೆ ಮುಂದೆ ಯಾರು ರಚಿಸಲಾಗದಂತಹ ಶ್ರೇಷ್ಠ ಕೃತಿಗಳು, ಎಂದು ಹೇಳಿದ್ದಾರೆ.[೨೨] ಇದರಿಂದ ಕೋಷಕಾರ ಧನಂಜಯನು ದೇವನಂದಿ ಪೂಜ್ಯಪಾಡರು ಮತ್ತು ಅಕಲಂಕರಿಂದ ಈಚನೆ ಕಾಲವನೆಂದು ನಿಶ್ಚಿತವಾಗುವುದು. ಆದರೆ ಎಷ್ಟು ಕಾಲ ಈಚಿನವನೆಂಬುದು ತಿಳಿದಿರಲಿಲ್ಲ. ಧವಲಾದ ಈ ಉಲ್ಲೇಖದಿಂದ ಧನಂಜಯನ ಕಾಲವು ಧವಲಾ ರಚನೆ ಸಮಾಪ್ತಿಯಾದ ಶಕ. ೭೩೮ಕ್ಕಿಂತ ಹಿಂದಿನವನೆಂದು ನಿಶ್ಚಿತವಾಗುವುದು.

ಧವಲಾಟೀಕೆಯಲ್ಲಿರುವ ಕೆಲವು ಉಲ್ಲೇಖಗಳ ಮೂಲ ಆಧಾರ ಅಥವಾ ಅವುಗಳ ಕರ್ತೃವಿನ ಬಗ್ಗೆ ಇದುವರೆಗೆ ಏನೂ ತಿಳಿಯಲು ಸಾಧ್ಯವಾಗಿಲ್ಲ. ಇಂತಹ ಒಂದು ಉಲ್ಲೇಖ ಜೀವ ಸಮಾಸದಲ್ಲಿ 'ಜೀವಸಮಾಸಾಏ ವಿ ಉತ್ತಂ' ಎಂದು ಹೇಳಿ, ಈ ಮುಂದಿನ ಗಾಹೆಯನ್ನು ಉಲ್ಲೇಖಿಸಿದೆ.

ಛಪ್ಪಂಚ ಣವ ವಿಹಾಣಂ ಅತ್ಥಾಣಂ ಜಿಣರೋವ ಇಟ್ಠಾಣಂ ।

ಆಣಾಏ ಅಹಿಗಮೇಣ ಯ ಸದ್ದಹಣಂ ಹೋಇ ಸಮ್ಮತ್ತಂ ॥

ಈ ಗಾಥೆಯು 'ಉಕ್ತಂಚ' ಎಂಬ ಪೀಠಿಕೆಯೊಡನೆ ಸತ್ಪ್ರರೂಪಣಾದಲ್ಲಿಯೂ ಎರಡೂ ಬಾರಿ ಬಂದಿದೆ. ಅಲ್ಲದೆ ಗೋಮಟಸಾರ ಜೀವಕಾಂಡದಲ್ಲಿಯೂ ಇದೆ.

ಒಂದೆಡೆಯಲ್ಲಿ ಧವಲಾಕಾರರು ಭೇಧಸೂತ್ರದ ಉಲ್ಲೇಖವನ್ನು ಮುಂದಿನಂತೆ ಮಾಡಿದ್ದಾರೆ.

'ಣ ಚ ದವ್ವಿತ್ಥಿಣವುಂಸಯವೇದಾಣಂ ಚೇಲಾದಿ ಚಾಓ ಅತ್ಥಿ ಭೇಧಸುತ್ತೇಣ ಸಹ ವಿರೋಹಾದೀ ।' (ಧ ವ ಲಾ ಅ. ೬೦೭)

ಕರ್ಮಪ್ರವಾದದ ಉಲ್ಲೇಖ ಮುಂದಿನಂತಿದೆ. 'ಸಾ ಕಮ್ಮಪವಾದೇ ಸವಿತ್ಥರೇಣ ಪರೂವಿದಾ' (ಧವಲಾ ಅ. ೧೩೭೧)

ಜಯಧವಲಾದಲ್ಲಿ ಒಂದೆಡೆ ದಶಕರಣೀ ಸಂಗ್ರಹದ ಉಲ್ಲೇಖ ಮುಂದಿನಂತಿದೆ:

'ಶುಷ್ಕ ಕುಡ್ಯಪತಿತಸಿಕತಾಮುಷ್ಟಿವದನಂತರ ಸಮಯೇ ನಿರ್ವರ್ತತೇ ಕರ್ಮೇ ರ್ಯಾಪಥಂ ವೀತರ್ರಾಗಾಣಾಮಿತಿ. ದಸಕರಣೀ ಸಂಗಹೇ ಪುಣ ಪಯಡಿಬಂಧಸಂಭವ ಮೆತ್ತಮವೆಕ್ಖಿಯ ವೇದಣೀಯಸ್ಸ ವೀಯರಾಯಗುಣಟ್ಠಾಣೇಸು ವಿ ಬಂಧಣಾ ಕರಣ ಮೋಮಟ್ಟಣಾಕರಣಂ ಚದೋವಿಭಣಿದಾಣಿತ್ತಿ. (ಜಯಧ.ವಾ. ಅ. ೧೦೪೨).

ಈ ಅವತರಣದಿಂದ ಈ ಗ್ರಂಥದಲ್ಲಿ ಕರ್ಮಗಳ ಬಂಧ, ಉದಯ, ಸಂಕ್ರಮಣ, ಮುಂತಾದ ಹತ್ತು ಅವಸ್ಥೆಗಳ ವರ್ಣನೆ ಇದ್ದಿರಬೇಕೆಂದು ಕಂಡು ಬರುತ್ತದೆ.

ಈ ಮೇಲಿನ ಅವತರಣಿಕೆಯ ಧವಲಾ ಮತ್ತು ಜಯಧವಲಾಗಳ ಸ್ಥೂಲಾವಲೋಕ ನದಿಂದ ಮೂಡಿದೆ. ಸೂಕ್ಷ್ಮಾವಲೋಕನದಿಂದ ಜೈನಧಾರ್ಮಿಕ ಮತ್ತು ಸಾಹಿತ್ಯಿಕ ಇತಿಹಾಸ ಸಂಬಂಧವಾಗಿ ಹೊಸ ಸಂಗತಿಗಳು ಬೆಳಕಿಗೆ ಬರುವುವು ಮತ್ತು ಅದರಿಂದ ಅನೇಕ ಸಾಹಿತ್ಯದ ಸಮಸ್ಯೆಗಳ ಪರಿಹಾರವಾಗುವುದೆಂದು ನಂಬಲಾಗಿದೆ."

'ಧವಲಾ' ಮತ್ತು 'ಜಯಧವಲಾ' ಹೆಸರುಗಳ ಬಗ್ಗೆ–ವೀರಸೇನರು ಷಟ್ ಖಂಡಾ ಗಮಕ್ಕೆ ಟೀಕೆ ಬರೆಯಲಾರಂಭಿಸಿದಾಗಲೇ ಅದನ್ನು 'ಧವಲಾ' ಎಂದು ಹೆಸರಿಸಬೇಕೆಂಬ

ಅಭಿಪ್ರಾಯವುಳ್ಳವರಾಗಿದ್ದರೆ ಹೇಗೆ ಎಂಬುದನ್ನು ನಿರ್ಧರಿಸಿ ಹೇಳಲು ಆಧಾರವಿಲ್ಲ. ಆದರೆ ಟೀಕೆ ಸಮಾಪ್ತಿಯಾಗುವ ಸಮಯಕ್ಕೆ ಈ ಹೆಸರನ್ನಿಡುವ ಅಭಿಪ್ರಾಯ ಮೂಡಿರ ಬಹುದೆಂದು ಹೇಳಬಹುದಾಗಿದೆ. ಷಟ್ ಖಂಡಾಗಮದ ಮೊದಲ ಐದುಖಂಡಗಳ ಸಮಾಪ್ತಿಯಲ್ಲಿ ಎಲ್ಲಿಯಾಗಲಿ ಧವಲಾ ಎಂಬ ಹೆಸರು ಕಂಡು ಬರುವುದಿಲ್ಲ. ಆದರೆ ಈ ಟೀಕೆಯ ಅಂತ್ಯದಲ್ಲಿರುವ ಪ್ರಶಸ್ತಿಯ ೮ನೇ ಗಾಹೆಯಲ್ಲಿ 'ಏಸಾ ಟೀಕಾ ಹು ಸಮಾಣಿ ಆ ಧವಲಾ' ಎಂದು ಹೇಳಿದೆ. ಮಾನ್ಯ ಹೀರಾಲಾಲ್ ಜೈನ್‌ರವರ ಪರಿಷ್ಕರಣ ದನುಗುಣವಾಗಿ ಈ ಟೀಕೆಯು ಶಕ ಸಂ. ೭೩೮ನೇ ಕಾರ್ತಿಕಮಾಸ ಶುಕ್ಲ ಪಕ್ಷ ಪ್ರಯೋದಶಿ (ಕ್ರಿ. ಶ. ೮-೧೦-೮೧೬) ಬುಧವಾರ ಪ್ರಾತಃಕಾಲದಲ್ಲಿ ಸಮಾಪ್ತವಾಗಿದೆ. ಇಲ್ಲಿ 'ಶುಕ್ಲಪಕ್ಷ' ಎಂಬುದನ್ನು ಪ್ರಶಸ್ತಿಯ ಗಾಹೆಯಲ್ಲಿ 'ಧವಲಕ್ಖೇ' ಎಂದು ಹೇಳಿದೆ. ಈ ಧವಲಾಟೀಕೆಯನ್ನು ಪ್ರಾಯಶಃ ಚಂದ್ರಪ್ರಭ ತೀರ್ಥಂಕರನ ಬಸದಿಯಲ್ಲಿ ಸಮಾಪ್ತಿ ಮಾಡಿ ಅಲ್ಲಿಯೇ ಕಸಾಯಪಾಹುಡಕ್ಕೆ 'ಜಯಧವಲಾ' ಟೀಕೆಯನ್ನು ಬರೆಯ ಲಾರಂಭಿಸಿದ್ದಾರೆಂದು ಕಂಡು ಬರುತ್ತದೆಯಲ್ಲದೆ, ಆಷಾಢಮಾಸದ ಅಷ್ಟಾಹ್ನೀಕದ ಕೊನೆಯ ದಿನದಿಂದ ಆರಂಭವಾಗುವ ಚಾತುರ್ಮಾಸ್ಯದ ದಿನಗಳನ್ನು ಈ ಬಸದಿಯಲ್ಲಿಯೇ ಇದ್ದು ಕಳೆದಿರಬಹುದೆಂದು ತಿಳಿಯಬಹುದಾಗಿದೆ. ಜಯಧವಲಾ ಟೀಕೆಯ ಆರಂಭದಲ್ಲಿ-

> ಜಯಇ ಧವಲಂಗತೇ ಏಣಾಊರಿಯ ಸಯಲಭುವಣಭವಣಗಣೋ ।
> ಕೇವಲಣಾಣಸರೀರೋ ಅಣಂಜಣೋ ಣಾಮಓ ಚಂದೋ॥

ಈ ರೀತಿಯಿಂದ ಜಯಧವಲಾಟೀಕೆಯನ್ನು ಚಂದ್ರಪ್ರಭತೀರ್ಥಂಕರನ ಸ್ತುತಿಯೊಡನೆ ಪ್ರಾರಂಭಿಸಲು ಅದಕ್ಕೆ ಏನಾದರೊಂದು ವಿಶಿಷ್ಟ ಕಾರಣವಿರಬೇಕು. ಚಂದ್ರ ಪ್ರಭತೀರ್ಥಂಕರನ ಬಸದಿಯಲ್ಲಿ ಈ ಟೀಕಾರಚನೆಯನ್ನು ಪ್ರಾರಂಭ ಮಾಡಿದುದೇ ಆ ಕಾರಣವಾಗಿರಬೇಕೆಂದು ತಿಳಿಯಬಹುದಾಗಿದೆ. ಈ ಸ್ತುತಿಯಲ್ಲಿ ಪ್ರಯುಕ್ತವಾಗಿ ರುವ 'ಧವಲ' ಪದಯುಕ್ತ ವಿಶೇಷಣವು ಗಮನಾರ್ಹವಾಗಿದೆ. ವೀರಸೇನಾಚಾರ್ಯರು ಷಟ್ಖಂಡಾಗಮದ ತಮ್ಮ ಟೀಕೆಗೆ 'ಧವಲ' ಎಂದು

ಹೆಸರಿಸಿರುವುದರ ಮೂಲ ಕಾರಣ ವನ್ನು ಇಲ್ಲಿ ಕಾಣಬಹುದು. 'ಟೀಕಾ' ಎಂಬುದು ಸ್ತ್ರೀಲಿಂಗ ಪದವಾಗಿರುವುದರಿಂದ ಇದರ ವಿಶೇಷಣ ವಾದ 'ಧವಲ' ಪದವೂ 'ಧವಲಾ' ಎಂಬ ಸ್ತ್ರೀಲಿಂಗ ರೂಪ ಹೊಂದಿದೆ. ಇದರಿಂದ ಕಸಾಯಪಾಹುಡದ ಟೀಕೆಯನ್ನು ಪ್ರತ್ಯೇಕಿಸಿ ಹೆಸರಿಸಲು 'ಧವಲ' ಪದದ ಮೊದಲಲ್ಲಿ 'ಜಯ' ಪದವನ್ನು ಸೇರಿಸಿ 'ಜಯಧವಲಾ' ಎಂದು ಹೆಸರಿಸಿದ್ದಾರೆಂದೂ ತಿಳಿಯಬಹುದಾಗಿದೆ. ಇದಲ್ಲದೆ ಈ ಮೇಲೆ ಹೇಳಿರುವಂತೆ ಕಾರ್ತಿಕಮಾಸದ ಧವಲ (ಶುಕ್ಲ)ಪಕ್ಷದಲ್ಲಿ ಟೀಕೆ ಸಮಾಪ್ತವಾಗಿರುವುದರಿಂದಲೂ ಟೀಕೆಗೆ ಈ ಹೆಸರಿನ್ನಿರಿಸಿರಬಹುದಾಗಿದೆ.ಹೀಗೆಯೇ 'ಧವಲ' ಪದ್ಯಕ್ಕೆ ಶುಕ್ಲ ಎಂದಲ್ಲದೆ, ಪರ್ಯಾಯ ರೀತಿಯಿಂದ ಶುದ್ಧ, ವಿಶದ, ಸ್ಪಷ್ಟ ಎಂಬ ಅರ್ಥಗಳೂ ಇವೆಯಾಗಿಈ ಅರ್ಥದ್ಯೋತಕವಾಗಿ ಟೀಕೆಗೆ 'ಧವಲಾ' ಎಂಬ ಹೆಸರನ್ನಿರಿಸಿರಬಹುದೆಂದು ಕ. ಪಾ. ಪ್ರಸ್ತಾವನಾಕಾರರು ಅಭಿಪ್ರಾಯ ಪಟ್ಟಿದ್ದಾರೆ.[೧೯] ಇದಲ್ಲದೆ,ಈ ಟೀಕೆಯು ಅಮೋಘ ವರ್ಷ(ಪ್ರಥಮ)ನ ರಾಜ್ಯಭಾರ ಕಾಲದಲ್ಲಿ ಸಮಾಪ್ತಿಯಾಗಿದೆ. ಈ ರಾಜನಿಗೆ 'ಅತಿಶಯ ಧವಲ' ಎಂಬ ಬಹುಮಾನ ಸೂಚಕ ಹೆಸರಿದ್ದಿತು. ಇವನು ಜೈನಧರ್ಮದ ಬಗ್ಗೆ ವಿಶೇಷ ಆಸ್ಥೆ ಹೊಂದಿದ್ದನು. ಆದ್ದರಿಂದ ಇವನ ಹೆಸರಿನ ಗೌರವದಿಂದ ಈ ಟೀಕೆಗೆ 'ಧವಲಾ' ಎಂದು ಹೆಸರಿಸಿರಬಹುದೆಂಬ ಅಭಿಪ್ರಾಯವೂ ಇದೆ.[೨೦] ಧವಲಾ ಮತ್ತು ಜಯಧವಲಾಟೀಕೆಗಳು ಕೇವಲ ಟೀಕೆಗಳೆನ್ನಿಸಿಕೊಂಡಿರದೆ 'ಸಿದ್ದಾಂತ' ಎಂಬ ಹೆಸ ರನ್ನು ಪಡೆದುಕೊಂಡಿದೆ. ಧವಲಾ ಪ್ರತಿಗಳ ಅಂತ್ಯದಲ್ಲಿ 'ಏವಂ ಸಿದ್ಧಾಂತಾರ್ಣವಂ ಪೂರ್ತಿ ಮಗಮತ್' ಹೀಗೆ ಸಿದ್ಧಾಂತ ಸಾಗರವು ಪೂರ್ಣವಾಯಿತು ಎಂಬ ವಾಕ್ಯವಿದೆ. ಹೀಗೆಯೇ ಧವಲಾ ಅಂತ್ಯದ ಪ್ರಶಸ್ತಿಯ ಗಾಹೆಯಲ್ಲಿ 'ಸಿದ್ಧಾಂತಮಿದಂ ಹಿ ಅಹಿಲ ಹುಂದೀ' ಎಂದಿದೆ ಈ ಮೇಲಿನ ಎರಡೂ ವಾಕ್ಯಗಳಲ್ಲಿ ಧವಲಾಗ್ರಂಥವನ್ನು ಸಿದ್ಧಾಂತ ವೆಂದು ನಿರ್ದೇಶಿಸಿರುವುದು ಸ್ಪಷ್ಟವಿದೆ. ಜಯಧವಲಾದ ಅಂತ್ಯದಲ್ಲಿ 'ಸಿದ್ಧಾಂತ'ದ ಲಕ್ಷಣವನ್ನು ಮುಂದಿನಂತೆ ಹೇಳಿದೆ.

ಸಿದ್ಧಾನಾಂ ಕೀರ್ತನಾದ್ಮತೇ ಯಃ ಪ್ರಸಿದ್ಧವಾಕ್ ।
ಸೋऽನಾದ್ಯ ನಂತಸಂತಾನಃ ಸಿದ್ಧಾಂತೋ ನೋವತಾಚ್ಚಿರಂ ॥

ಅಂತ್ಯದಲ್ಲಿ 'ಸಿದ್ಧರ' ಕೀರ್ತನೆ ಮಾಡಿರುವುದಾದ ಕಾರಣದಿಂದ 'ಸಿದ್ಧಾಂತ' ಎಂಬ ಪ್ರಸಿದ್ಧ ಮಾತನ್ನು ಹೊಂದಿದ, ಅನಾದನಂತ ಸಂತಾನದ ಸಿದ್ಧಾಂತವು ನಮ್ಮನ್ನು ಕಾಪಾಡಲಿ.'

ಈ ರೀತಿಯಿಂದ ಧವಲಾ ಮತ್ತು ಜಯಧವಲಾಗಳು ರಚನೆಯಾದ ಕಾಲದಿಂದಲೇ 'ಸಿದ್ಧಾಂತ' ಎಂಬ ಸನ್ಮಾನದ ಖ್ಯಾತಿ ಪಡೆದಿದೆ. ವಾಸ್ತವವಾಗಿ ಧವಲಾ ಮತ್ತು ಜಯ ಧವಲಾಗಳು ಷಟ್ ಖಂಡಾಗಮ ಸಿದ್ಧಾಂತ ಮತ್ತುಕಸಾಯಪಾಹುಡ ಆಗಮಸಿದ್ಧಾಂತಗಳ ಟೀಕೆಗಳಾಗಿದ್ದರೂ ಸಾಮಾನ್ಯ ಜನತೆಯಲ್ಲಿ ಈ ಮೂಲ ಸಿದ್ಧಾಂತಗಳ ಹೆಸರುಗಳು ಮರೆಯಾಗಿ ಧವಲ ಮತ್ತು ಜಯಧವಲಗಳೇ ಸಿದ್ಧಾಂತವೆನಿಸಿಕೊಂಡು ಪ್ರಚಾರ ಹೊಂದಿದವು. ಇದರಿಂದ ಈ ಟೀಕಾಸಿದ್ಧಾಂತಗಳಬಗ್ಗೆ ಮೂಡಿದ ಅಪಾರ ಗೌರವ ಸನ್ಮಾನದ ಭಾವನೆಯು ವ್ಯಕ್ತವಾಗುವುದು. ಧವಲಾ ಮತ್ತು ಜಯಧವಲಾ ಟೀಕೆಗಳ ಮಹತ್ತ್ವವನ್ನು ಮತ್ತೂ ಒಂದು ದೃಷ್ಟಿಯಿಂದ ಕಾಣಬಹುದಾಗಿದೆ : ಯಾವುದೇ ಒಂದು ದೇಶದ ಸಂಸ್ಕೃತಿಯ ಹಿರಿಮೆಯನ್ನು ಗುರುತಿಸಲು ಸಾಧಕವಾಗಿರುವ ಅಂಶ ಗಳಲ್ಲಿ, ಬೌದ್ಧಿಕವಿಕಾಸದರ್ಶಕವಾದ ಗಣಿತ ಶಾಸ್ತ್ರದ ಬೆಳವಣಿಗೆಯು ಒಂದು ಪ್ರಧಾನ ಅಂಶವಾಗಿದೆ.

ಪ್ರಾಚೀನ ಕಾಲದಿಂದಲೂ ಭಾರತೀಯ ಗಣಿತಶಾಸ್ತ್ರದ ಬೆಳವಣಿಗೆಗೆ ಜೈನ ಸಾಹಿತಿ ಗಳು ತಮ್ಮದೇ ಆದ ವಿಶಿಷ್ಟವೂ ಮಹತ್ತ್ವಪೂರ್ಣವೂ ಆದ ಕೊಡುಗೆ ಇತ್ತಿದ್ದಾರೆ. ದೃಷ್ಟಿವಾದಾಂಗದ ಮೊದಲನೆಯ ಭೇಧವಾದ ಪರಿಯಮ್ಮ (ಪರಿಕರ್ಮ) ವು ಅಮಿತ ವಾದ ಗಣಿತ ವಿಷಯವನ್ನೊಳಗೊಂಡಿದ್ದಿತು. ಈ ಅಂಗದ ನಾಲ್ಕನೇ ಭೇಧವಾದ ಪುವ್ವಗಯ (ಪೂರ್ವಗತ)ದ ಅನೇಕ ವಿಭಾಗಗಳೂ ಅಪಾರವಾದ ಗಣಿತವಿಷಯ ವನ್ನೊಳಗೊಂಡಿದ್ದುವು. ಈಗ ಉಪಲಬ್ಧವಿರುವ 'ತಿಲೋಯಪಣ್ಣತ್ತಿ'ಯಲ್ಲಿ ಅದರ ರಚನೆಗೆ ಮೂಲಾಧಾರವಾಗಿದ್ದ ಅಂಗಶ್ರುತ ಸಂಬಂಧಿಯಾದ ಅನೇಕ ಆಕರಗಳ ಉಲ್ಲೇಖವಿದೆ. ಇದರಲ್ಲಿರುವ ಲೋಕಸ್ವರೂಪ ವರ್ಣನೆಯಲ್ಲಿ ಮತ್ತು ಧವಲಾ ಹಾಗೂ ಜಯಧವಲಾ ಟೀಕೆಗಳಲ್ಲಿ ಜೀವ ಮತ್ತುಕರ್ಮ ಸ್ವರೂಪವರ್ಣನೆಯಲ್ಲಿ ಜೈನ ಸಂಪ್ರದಾಯದ ವಿಶಿಷ್ಟ ಗಣಿತವಿಷಯ ನಿರೂಪಣೆ ಉಳಿದುಬಂದಿದೆ. ಇದರ ಮಹತ್ತ್ವವನ್ನು ಅನೇಕ

ಆಧುನಿಕ ಗಣಿತ ಶಾಸ್ತ್ರಜ್ಞರು ಬಹುವಾಗಿ ಪ್ರಶಂಸಿದ್ದಾರೆ. ಈ ಬಗ್ಗೆ ಶ್ರೀ ಎ, ಎನ್, ಸಿಂಘ್, ಡಿ. ಎಸ್. ಸಿ. ಅವರ ಈ ಮುಂದಿನ ಹೇಲಿಕೆಗಳನ್ನು ಗಮನಿಸಬೇಕಾಗಿದೆ. "ಧವಲಾ ಟೀಕೆಯು ಕ್ರಿ. ಶ. ಐದನೇ ಶತಮಾನಕ್ಕಿಂತ ಹಿಂದಿನ ದಾದ ಗಣಿತಶ್ರಾದ ಚರಿತೆಯ ಅತ್ಯಂತ ಅಂಧಕಾರದ ಕಾಲದಬಗ್ಗೆ ತಿಳಿವನ್ನು ನೀಡು ತ್ತದೆಯಾಗಿ, ಭಾರತದೇಶದ ಗಣಿತಶಾಸ್ತ್ರ ಇತಿಹಾಸ ಪರಿಶೋಧಕರಿಗೆ ಪ್ರಾಮುಖ್ಯತೆ ಯಲ್ಲಿ ಪ್ರಥಮಸ್ಥಾನ ಹೊಂದಿದ ಕೃತಿಯಾಗಿದೆ. ಈ ಬಗ್ಗೆ ಹೆಚ್ಚಿನ ಆಸ್ಥೆ ಹೊಂದಿದ ವರು ಷ. ಆಗಮ–ಧವಲಾ–ಪುಸ್ತಕ ೪. ಪ್ರಸ್ತಾವನೆ ನೋಡಬಹುದು. ಇದುಲ್ಲದೆ ಈ ಬಗ್ಗೆ ಪ್ರೊ. ಎಲ್. ಸಿ. ಜೈನ್ ಅವರ 'ದಿ ಲಬ್ಧಿಸಾರ ಆಫ್ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ' (ವಾಲ್ಯೂಂ ೧೯೪) ಕೃತಿಯು ಬಹುಮಹತ್ತ್ವ ಪೂರ್ಣವಾದುದಾಗಿದೆ. ನಮ್ಮ ದೇಶದ ಸಂಸ್ಕೃತಿಯ ಹಿರಿಮೆಯನ್ನು ಗುರುತಿಸಲು ಸಹಕಾರಿಯಾಗಿರುವ ಈ ಗಣಿತದ ನಿರೂಪಣೆಯ ವಿಶೇಷ ಅಧ್ಯಯನವು ಅತ್ಯವಶ್ಯಕವಾದುದಾಗಿದೆ.

ವೀರಸೇನಸ್ವಾಮಿಯವರ ಕೃತಿಗಳು : ವೀರಸ್ವಾಮಿಯವರ ಹೆಸರು ಧವಲಾ ಮತ್ತು ಜಯಧವಲಾಟೀಕೆಗಳೊಡನೆ ಲೀನವಾಗಿ ಹೋಗಿದೆ. ಈ ಟೀಕೆಗಳನ್ನಲ್ಲದೆ ಇವರು ಮತ್ತಾವ ಕೃತಿಗಳನ್ನಾಗಲಿ ರಚನೆ ಮಾಡಿರುವರೆ ? ಹೇಗೆ ಎಂಬುದು ಅಷ್ಟಾಗಿ ಸ್ಪಷ್ಟವಿಲ್ಲ ಎಂದೇ ಹೇಳಬೇಕಾಗಿದೆ.

ಪುನ್ನಾಟ ಜಿನಸೇನರು ತಮ್ಮ ಹರಿವಂಶ ಪುರಾಣದಲ್ಲಿ (ಪ್ರಥಮ ಸರ್ಗ–೩೯) 'ಆತ್ಮ ಮತ್ತು ಪರಲೋಕದ ವಿಜಯಿಯಾದ (ಸ್ವಪಕ್ಷ ಮತ್ತು ಪರಪಕ್ಷವನ್ನು ಗೆದ್ದವನಾದ) ಕವಿಚಕ್ರವರ್ತಿಯಾದ ವೀರಸೇನಗುರುವಿನ ಕಲಂಕರಹಿತವಾದ ಕೀರ್ತಿಯು ಪ್ರಕಾಶಿಸುತ್ತಿದೆ' ಎಂದು ವೀರಸೇನರ ಗುಣಸ್ತುತಿ ಮಾಡಿದ್ದಾರೆ. ಇಲ್ಲಿ ಪರಿಶೀಲನಾರ್ಹವಾದ ಅಂಶಗಳಿವೆ. ಪು. ಜಿನಸೇನರು ಮತ್ತು ವೀರಸೇನರಿಬ್ಬರೂ ಸೇನಗಣದವರೇ ಆಗಿ ದ್ದರೂ ಅನ್ವಯ ಕ್ರಮದಿಂದ ಬೇರೆ ಬೇರೆ ಪಂಗಡಕ್ಕೆ ಸೇರಿದವರಾಗಿದ್ದಾರೆ. ಪ್ರಾಯಿಕ ವಾಗಿ ವೀರಸೇನರು ಪು. ಜಿನಸೇನರಿಗಿಂತ ವಯಸ್ಸಿನಲ್ಲಿ ಹಿರಿಯರಾಗಿದ್ದಾರೆಂದು ಹೇಳ ಬಹುದಾಗಿದೆ. ಮೇಲೆ ಹೇಳಿದ ವೀರಸೇನರ ಗುಣಸ್ತುತಿಯಲ್ಲಿ ಅವರನ್ನು ಕವಿಚಕ್ರವರ್ತಿ' ಎಂದು ಮತ್ತು ನಿರ್ಮಲಕೀರ್ತಿ ಸಂಪನ್ನರೆಂದು ಹೇಳಿದೆ. ಇದರಲ್ಲಿ ವೀರಸೇನರ ಧವಲಾ ಟೀಕೆ ರಚನೆಯ

ಬಗ್ಗೆ ಸೂಚನೆ ದೊರೆಯುವುದಿಲ್ಲ. 'ಕವಿಚಕ್ರವರ್ತಿ' ಎಂಬುದರಿಂದಲೇ ಇವರ ಟೀಕಾಕರ್ತೃತ್ವದ ಸೂಚನೆ ದೊರೆಯುವುದೆಂದು ಹೇಳಲಾ ಗುವುದಿಲ್ಲ. ಒಂದೊಮ್ಮೆ ಪು. ಜಿನಸೇನರಿಂದ ಹರಿವಂಶ ರಚನೆ ಆರಂಭವಾಗುವ ಕಾಲಕ್ಕೆ ವೀರಸೇನರು ಧವಲಾ ಟೀಕೆ ರಚನೆ ಮಾಡಲು ಆರಂಭಿಸಿದ್ದರೂ ಅದು ವ್ಯಾಪಕ ರೀತಿಯಿಂದ ಪ್ರಚಾರಕ್ಕೆ ಬಂದಿರಲಿಲ್ಲವೆಂದೇ ತಿಳಿಯಬೇಕಾಗುವುದು. ಹರಿವಂಶ ಪುರಾಣದ ರಚನೆಯು ಶಕ ಸಂ. ೭೦೫ (ಕ್ರಿ. ಶ.೭೮೩)ರಲ್ಲಿ ಕೊನೆಗೊಂಡಿದೆ. ಆದ್ದರಿಂದ ಇದರ ರಚನೆಗೆ ಸುಮಾರು ಐದುವರ್ಷ ಕಾಲವಾದರೂ ಸಂದಿದೆಯೆಂದು ಗ್ರಹಿ ಸಬೇಕಾಗದೆಯಾದ್ದರಿಂದ ಶ. ಕ. ಸಂ. ೭೦೦ರ ಆಸುಪಾಸಿನಲ್ಲಿ ಇದರ ರಚನೆ ಆರಂಬ ವಾಗಿದೆಯೆಂದು ತಿಳಿಯಬಹುದು. ವೀರಸೇನದಿಂದ ಧವಲಾಟೀಕೆ ರಚನೆಯು ಶಕ ಸಂ. ೭೩೮ರಲ್ಲಿ ಸಮಾಪ್ತವಾಗಿದೆಯೆಂದು ಮಾನ್ಯ ಹೀರಾಲಾಲ್ ಜೈ ಅವರು ಪರಿಷ್ಕಾರ ಪೂರ್ವಕ ನಿರ್ಣಯಿಸಿದ್ದಾರೆ. ಈ ಗಣನೆಯಾಧಾರದಿಂದಲೂ ಶಕ ಸಂ. ೭೦೦ರ ಸಮ ಯದಲ್ಲಿ ಧವಲಾ ರಚನೆಯ ಸಂಗತಿ ಪು. ಜಿನಸೇನರುಗೆ ತಿಳಿದಿರಲಿಲ್ಲವೆಂದೇ ಹೇಳ ಬೇಕಾಗುವುದು. ಹೀಗಿರುವಲ್ಲಿ ವೀರಸೇನರನ್ನು 'ಕವಿಚಕ್ರವರ್ತಿ' ಎಂದು ಹೇಳಿರುವು ದರ ಹಿನ್ನೆಲೆಯಲ್ಲಿ ಇವರಿಂದ ಸೈದ್ಧಾಂತಿಕ ಟೀಕೆಗಳಲ್ಲದೆ ಬೇರೆಯದಾದ ಸಾಹಿತ್ಯಕೃತಿ ರಚಿತವಾಗಿರಬಹುದೆ ? ಎಂಬ ಪ್ರಸ್ನೆಗೆಡೆಯಾಗುವುದು. ಸ್ವಾಮಿಜಿನಸೇನರು ಆದಿಪುರಾ ಣದ ಪೂರ್ವ ಕವಿ ಪ್ರಸ್ತುತಿಯಲ್ಲಿ (ಪ್ರಥಮ ಸರ್ಗ) ತಮ್ಮ ಗುರು ವೀರಸೇನರ ಬಗ್ಗೆ–

ಶ್ರೀ ವೀರಸೇನ ಇತಾಸ್ಯ್ತಭಟ್ಟಾರಕ ಪೃಥುಪ್ರಥಃ ।
ಸ ನಃ ಪುನಾತು ಪೂತಾತ್ಮಾ ಕವಿ ವೃಂದಾರಕೋ ಮುನಿಃ ॥ ೫೫ ॥
ಲೋಕವಿತ್ವಂ ಕವಿತ್ವಂ ಚ ಸ್ಥಿತಂ ಭಟ್ಟಾರಕೇ ದ್ವಯಂ ।
ವಾಗ್ಮಿ ತಾವಾಗ್ಮಿ ತಾ ಯಸ್ಯ ವಾಚಾವಾಚಸ್ವತೇರಪಿ ॥ ೫೬ ॥

ಎಂದು ಹೇಳಿದ್ದಾರೆ ಇಲ್ಲಿಯೂ ವೀರಸೇನರನ್ನು ಕವಿಶ್ರೇಷ್ಠರೆಂದು ವರ್ಣಿಸಿರುವು ದನ್ನು ಗಮನಿಸಬಹುದು. ಇವರ ಕವಿತ್ವದಲ್ಲಿ ಒಳಗೊಂಡಿದ್ದ 'ಲೋಕವಿತ್ವ'ದಲ್ಲಿ ಇವರ ಪ್ರಾಪಂಚಿಕ ತಿಳಿವಳಿಕೆಯ ಬಗ್ಗೆಯೂ ಸೂಚನೆಯಿದೆ. ಇದು ಸರ್ವಥಾ ಇವರ ಸಿದ್ಧಾಂತ ವ್ಯಾಖ್ಯಾನಕ್ಕೆ

ಅನ್ವಯಿಸುವಂತಹುದಾಗಿಲ್ಲ. ಇದಲ್ಲದೆ ಇವರ ಸಿದ್ಧಾಂತ ಟೀಕೆಯ ಮಹತ್ವದ ಬಗ್ಗೆ ಮುಂದಿನ ಶ್ಲೋಕದಲ್ಲಿ ವರ್ಣನೆಯಿದೆ.

ಸಿದ್ಧಾಂತೋಪನಿಬಂಧಾನಾಂ ವಿಧಾತುರ್ಮದ್ಗುರೋಶ್ಚಿರಂ ।

ಮನ್ಮನಃ ಸರಸಿ ಸ್ಥೇಯಾನ್ಮೃದುಪಾದಕುಶೇಯಂ ॥ ೫೭ ॥

ಆದ್ದರಿಂದ ವೀರಸೇನರು ಧವಲಾ ಮತ್ತು ಜಯಧವಲಾ ಟೀಕೆಗಳಲ್ಲದೆ ಕವಿತ್ವ ಸಂಪನ್ನವಾದ ಬೇರೆ ಸಾಹಿತ್ಯಕೃತಿಗಳ ರಚನೆಯನ್ನೂ ಮಾಡಿದ್ದಿರಬೇಕೆಂದು ಸೂಚಿತ ವಾಗುವುದು. ಈ ಬಗ್ಗೆ ಪುನಃ ಚಾಮುಂಡರಾಯನ ತ್ರಿಶಷ್ಟಿ ಶಕಲಾ ಮಹಾಪುರಾಣದ ಪೂರ್ವಕವಿ ಪ್ರಸ್ತುತಿಯಲ್ಲಿ ವೀರಸೇನರನ್ನು ಕುರಿತು

"ವೀರಚಿತ ಸಿದ್ಧಾಂತ ಮಹಾಪುರಾಣ ನಯಶಾಸ್ತ್ರ ಕಾವ್ಯ ನಾಟಕ ತತಿಯಂ ।

ಪರಿಣತರಿರ್ದಭಿವರ್ಣಿಸೆ ಧರೆಗೆಸೆದುದು ವೀರಸೇನ–ಜಿನಸೇನ ಜಸಂ" ॥

ಎಂದು ಹೇಳಿದೆ. ಇಲ್ಲಿ ಮಹಾಪುರಾಣದ ರಚನೆ ಜಿನಸೇನ ಮತ್ತು ಗುಣಭದ್ರ ರಿಂದಾಗಿದೆಯೆಂಬುದು ತಿಳಿದ ಸಂಗತಿ, ಹೀಗೆಯೇ ಸಿದ್ಧಾಂತ ರಚನೆ ವೀರಸೇನ– ಜಿನಸೇನರಿಬ್ಬರಿಂದಲೂ ಆಗಿದೆಯೆಂಬುದೂ ತಿಳಿದ ಸಂಗತಿ. ಇನ್ನುಳಿದ ನಯಶಾಸ್ತ್ರ–ಕಾವ್ಯ–ನಾಟಕ, ಸಾಹಿತ್ಯರಚನೆಯ ಸಂಗತಿಯು ಈ ಇಬ್ಬರಿಗೂ ಅನ್ವಯವಾಗುವು ದೆಂದು ತಿಳಿಯಬೇಕಗುವುದು. ಇದರಿಂದ ಈ ಹಿಂದೆ ಪರಿಷ್ಕರಿಸಿರುವಂತೆ ವೀರ ಸೇನರಿಂದ ಸಿದ್ಧಾಂತ ಟೀಕೆ ರಚನೆಯಿಂದ ಬೇರೆಯಾದಾದ ಕಾವ್ಯ ಸಾಹಿತ್ಯದ ರಚನೆ ಯಾಗಿರಬೇಕೆಂಬುದು ಪುಷ್ಟೀಕೃತವಾಗುವುದು. ಪ್ರಸ್ತುತ ಪ್ರಸಂಗದಲ್ಲಿ ಚಾಮುಂಡ ರಾಯನಿಂದ ಪ್ರಯುಕ್ತವಾಗಿರುವ ‘ನಾಟಕ’ ಶಬ್ದವು ವಿಶೇಷ ಗಮನಾರ್ಹವಾಗಿದೆ. ವೀರಸೇನ ಮತ್ತು ಜಿನಸೇನರಿಂದ ನಾಟಕಗಳ ರಚನೆಯಾಗಿದ್ದು ಅವು ಕಾಲಾಂತರದಲ್ಲಿ ನಷ್ಟವಾಗಿರಬಹುದೆ ? ಎಂಬ ಪರ್ಯಾಲೋಚನೆಗೆಡೆಯಾಗಿದೆ. ವೀರಸೇನರ ಸಿದ್ಧಾಂತ ಟೀಕೆ ರಚನೆಯ ಯಶಸ್ಸಿನ ವ್ಯಾಪಕತೆಯಲ್ಲಿ ಅವರ ಇತರ ಸಾಹಿತ್ಯದ ಕೃತಿ ರಚನೆಯ ಸಂಗತಿ ಮರೆಯಾಗಿಹೋಗಿದೆಯೆಂದು ತಿಳಿಯಬೇಕಾಗಿದೆ. ಇವರಿಂದ 'ಸಿದ್ಧಭೂ ಪದ್ಧತಿ' ಎಂಬ ಒಂದು ಕೃತಿಯು ರಚಿತವಾಗಿದೆ ಎಂದು ಉತ್ತರಪುರಾಣಕರ್ತೃ

ಗುಣಭದ್ರಸ್ವಾಮಿಯವರ ಹೇಳಿಕೆಯಿಂದ ಸೂಚಿತವಾಗುವುದು. ಆದರೆ ಇದರ ವಸ್ತು ವೇನೆಂಬುದು ಸ್ಪಷ್ಟವಿಲ್ಲ.

ವೀರಸೇನಸ್ವಾಮಿಯವರ ಜೀವಿತಕಾಲ : ವೀರಸೇನಸ್ವಾಮಿಯವರ ಶಿಷ್ಯರಾದ ಜಿನಸೇನರಿಂದ ಜಯಧವಲಾಟೀ ಕೆಯು ಸಮಾಪ್ತವಾದ ಕಾಲದ ಸ್ಪಷ್ಟ ಹೇಳಿಕೆಯಿದೆ. ಇದಲ್ಲದೆ ವೀರಸೇನ ಸ್ವಾಮಿಯವರಿಂದ ಧವಲಾಟಿಕೆಯು ಸಮಾಪ್ತವಾದ ಕಾಲದ ಬಗ್ಗೆ ಇರುವ ಹೇಳಿಕೆಯಲ್ಲಿ ಸಂದಿಗ್ಧತೆ ಏರ್ಪಟ್ಟಿದ್ದರೂ ಮಾನ್ಯ ಹೀರಾಲಾಲ್ ಜೈನ್ ರವರು ಅದನ್ನು ಪರಿಶೋಧಿಸಿ ಪರಿಷ್ಕರಿಸಿ ನಿರ್ಣಯಿಸಿದ್ದಾರೆ. ಇಷ್ಟಲ್ಲದೆ ಮಾನ್ಯ ನಾಥೂರಾಂ ಪ್ರೇಮಿಯವರು ನಿರಂತರ ಗುರುಶಿಷ್ಯಾನುಕ್ರಮ ಹೊಂದಿರುವ ವೀರ ಸೇನ, ಜಿನಸೇನ ಮತ್ತು ಗುಣಭದ್ರರ ಜೀವಿತಕಾಲಗಳನ್ನು ಯುಕ್ತಿ ಯುಕ್ತ ರೀತಿಯಿಂದ ನಿರ್ಣಯಿಸಿದ್ದಾರೆ.[೩೧] ಈ ನಿರ್ಣಯಗಳನುಸಾರ ಸಂಭವನೀಯವಾಗಿ ವೀರಸೇನಾ ಚಾರ್ಯರು ಶಕ ಸಂ. ೬೬೦ರ (ಕ್ರಿ. ಶ. ೬೭೮ರ) ಆಸುಪಾಸಿನಲ್ಲಿ ಜನಿಸಿದ್ದಾರೆ. ಇವರು ತಮ್ಮ ಧವಲಾಟಿಕೆಯ ರಚನೆಯನ್ನು ಶಕ. ಸಂ. ೭೩೮ರಲ್ಲಿ (ಕ್ರಿ. ಶ. ೮೧೬ರಲ್ಲಿ) ಸಮಾಪ್ತಿ ಮಾಡಿದ್ದಾರೆ. ಇಲ್ಲಿಂದ ಮುಂದೆ ಇಪ್ಪತ್ತು ಸಹಸ್ರ ಗ್ರಂಥ ಪ್ರಮಾಣದ ಜಯಧವಲಾಟೀಕೆಯ ರಚನೆಗೆ ಏಳೆಂಟು ವರ್ಷಗಳು ಸಂದಿರಬೇಕು. ಇದರಂತೆ, ಶಕ. ಸಂ.೭೪೫ರ (ಕ್ರಿ. ಶ. ೮೨೩ರ) ಸರಿಸುಮಾರಿನಲ್ಲಿ ತಮ್ಮ ೮೫ ವರ್ಷಗಳ ವಯಸ್ಸಿನಲ್ಲಿ ದಿವಂಗತರಾಗಿರುವರೆಂದು ಪರಿಗಣನೆ ಮಾಡಬಹುದಾಗಿದೆ.

ವೀರಸೇನಾಚಾರ್ಯರ ಪ್ರಶಸ್ತಿ–ದಿಗಂಬರ ಜೈನ ಪಂಥದ ಪರಮಪೂಜ್ಯ ಮಹೋನ್ನತ ಸಾಹಿತ್ಯಕೃತಿ ಎಂದರೆ ಷಟ್ ಖಂಡಾಗಮ. ಭಗವಾನ್ ಮಹಾವೀರನ ದಿವ್ಯ ವಾಣಿಯಿಂದ ಸಾಕ್ಷಾತ್ಕಾರ ಪಡೆದ ದ್ವಾದಶಾಂಗದ ಅವಶಿಷ್ಟ ಭಾಗವನ್ನೊಳ ಗೊಂಡ ಮಹೋನ್ನತ ಆಗಮ ಕೃತಿ ಇದು. ಇಂತಹುದೇ ಆಗಮ ಕೃತಿ ಕಸಾಯಪಾಹುಡ. ಅದೇ ದ್ವಾದಶಾಂಗದ ಅವಶಿಷ್ಟ ಅಂಶಗಳ ಪ್ರಾಮಾಣಿಕ ಆಧಾರ ದಿಂದ ಅನೇಕ ಆಚಾರ್ಯರು ಈ ಆಗಮ ಕೃತಿಗಳಿಗೆ ಪರಂಪರೆಯನುಕ್ರಮದಿಂದ ವ್ಯಾಖ್ಯಾನಗಳನ್ನು ರಚಿಸಿದರು.

ಈ ಆಗಮ ಕೃತಿಗಳನ್ನು ಪೂರ್ವಾಚಾರ್ಯರಿಂದ ರಚಿತವಾಗಿದ್ದ ವ್ಯಾಖ್ಯಾನಗಳ ಸಹಿತ ಗಹನವಾದ ಅಧ್ಯಯನ ನಡೆಸಿ ಆತ್ಮಾಯತ್ತ ಮಾಡಿಕೊಂಡು ಅನ್ಯಾದೃಶವಾದ ಧವಲಾ ಮತ್ತು

ಜಯಧವಲಾ ಟೀಕೆಗಳನ್ನು ರಚಿಸುವ ಮೂಲಕ ಮೇರುಸದೃಶವಾದ ಈ ಆಧ್ಯಾತ್ಮಿಕ ಸಿದ್ಧಾಂತವನ್ನು ನಮ್ಮವರೆಗೆ ಉಳಿಸಿಕೊಟ್ಟಿರುವವರು ವರ ಮಹಾ ಮುನಿ ವೀರಸೇನಾಚಾರ್ಯರು. ಜೈನಾಗಮದ ಉಳಿವಿಗಾಗಿ, ಮತ್ತು ಅದು ಚಿರಕಾಲ ಪ್ರಚಲಿತ ವಾಗಿರುವಂತಾಗಲು ತಮ್ಮ ಪೂರ್ಣ ಬದುಕನ್ನೇ ಸಮರ್ಪಣೆ ಮಾಡಿಕೊಂಡ ಇವರೇ ಮಹಿಮಪುರುಷರು ಮಹಾನ್ ಪುರುಷರು.

ವೀರಸೇನಾಚಾರ್ಯರ ಸ್ಥೂಲ ಪರಿಚಯವು, ಧವಲಾಟೀಕೆಯ ಅಂತ್ಯದಲ್ಲಿ ಅವರಿಂದಲೇ ರಚಿತವಾಗಿರುವ ಪ್ರಶಸ್ತಿಯಿಂದ ದೊರಕುವುದು. ಮೊದಲನೆಯದಾಗಿ ಇಲ್ಲಿ ಇವರು ತಮ್ಮ ಸಿದ್ಧಾಂತದ ವಿದ್ಯಾಗುರುವಾದ ಏಲಾಚಾರ್ಯರ ಪ್ರಸನ್ನತೆ ಸಿದ್ಧಿಸ ಲೆಂದು ಪ್ರಾರ್ಥಿಸಿದ್ದಾರೆ. ಇದರ ಬಳಿಕ (ಉಸಹಸೇಣ) ಋಷಭಸೇನರ ಮಹಿಮಾನ್ವಿತ ವ್ಯಕ್ತಿತ್ವ ಮತ್ತು ಜ್ಞಾನ ಮಹತ್ವದ ಪ್ರಸ್ತುತಿ ಪೂರ್ವಕ ವಂದನೆ ಮಾಡಿದ್ದಾರೆ. ಮತ್ತೆ ಮುಂದೆ ತಮ್ಮನ್ನು ಅಜ್ಜನಂದಿಯವರ ಶಿಷ್ಯನೆಂದೂ ಮತ್ತು ಚಂದ್ರಸೇನರ ಪ್ರಶಿಷ್ಯ ನೆಂದೂ ಹೇಳಿ ಕೊಂಡಿದ್ದಾರೆ. ಮುಂದುವರಿದು ತಮ್ಮ ಬಗ್ಗೆ, 'ಪಂಚಸ್ತೂಪಾನ್ವಯದ ಭಾನುವಾದ ಮುನಿಯೂ, ಸಿದ್ಧಾಂತ–ಛಂದಸ್ಸು–ಜ್ಯೋತಿಷ–ವ್ಯಾಕರಣ–ಪ್ರಮಾಣಶಾಸ್ತ್ರ ನಿಪೂಣನೂ ಆದ ಭಟ್ಟಾರಕ ವೀರಸೇನನಿಂದ ಈ (ಧವಲಾ) ಟೀಕೆಯು ಬರೆಯಲ್ಪಟ್ಟಿತು' ಎಂದು ಹೇಳಿಕೊಂಡಿದ್ದಾರೆ.

ಇಲ್ಲಿ ಹೆಸರಿಸಲಾಗಿರುವ ಗುರುಗಳಲ್ಲಿ ಮೊದಲನೆಯವರಾದ ಏಲಾಚಾರ್ಯರ ಇತಿವೃತ್ತವನ್ನು ಕುರಿತು ಈ ಹಿಂದೆ ಪರ್ಯಲೋಚನೆ ಮಾಡಲಾಗಿದೆ. ಎರಡನೆಯ ದಗಿ ಪ್ರಸ್ತಿತಿ ಮಾಡಲಾಗಿರುವ (ಉಸಹಸೇಣ) ಋಷಭಸೇನರ ಇತಿವೃತ್ತದ ಬಗ್ಗೆ ವಿವರಣೆ ಲಭ್ಯವಿಲ್ಲವೆಂದೇ ಹೇಳಬೇಕು. ಈ ಬಗ್ಗೆ ಮಾನ್ಯ ಹೀರಾಲಾಲ್ ಜೈನ್ ಅವರೂ ಮೌನತಾಳಿದಂತೆ ಕಂಡು ಬರುತ್ತದೆ. ಇಷ್ಟಾದರೂ ಋಷಭಸೇನರನ್ನು ಪೂಜ್ಯ ಭವದ ವಿಶಿಷ್ಟ ಗುಣವಾಚಕಗಳೊಡನೆ ಹೆಸರಿಸಿರುವುದರಿಂದ ಇವರು ವೀರಸೇನರ ದೀಕ್ಷಾಗುರುಗಳಾಗಿದ್ದು ದೀಕ್ಷಾಪ್ರದಾನದ ಅನಂತರ ಸ್ವಲ್ಪ ಕಾಲ ಮಾತ್ರ ವಿದ್ಯಾಪ್ರದಾನ ಮಾಡಿ ದಿವಂಗತರಾಗಿರಬಹುದೆ ಎಂಬ ಚಿಂತನೆಗೆಡೆ ಇದೆ.

ಇದಲ್ಲದೆ ಸಿರಿಭೂವಲಯದಲ್ಲಿ ಹೇಳಲಾಗಿರುವ ಒಂದು ಅಂಶವನ್ನೂ ಪ್ರಸ್ತುತ ಪ್ರಸಂಗದಲ್ಲಿ ಪಶೀಲಿಸಬ ಹುದಾಗಿದೆ. ಇದರಲ್ಲಿ ವೀರಸೇನ ಮತ್ತುಜಿನಸೇನರನ್ನು (ಋಷಭಸೇನಾನ್ವಯ) ವೃಷಭ

ಸೇನಾನ್ವಯದವರೆಂದು ಹೇಳಿದೆ. ಈ ಹೇಳಿಕೆ ಅಸಂ ಗತ, ಅಸಂಬಂದ್ಧ, ವಿಶ್ವಾಸಾರ್ಹವಲ್ಲ ಎಂದು ಹೇಳಿ ತಳ್ಳಿಹಾಕುವುದಕ್ಕಿಂತಲೂ ಲಭ್ಯವಿರುವ ಐತಿಹ್ಯಾಂಶಗಳ ಆಧಾರದಿಂದ ಪರಿಷ್ಕರಿಸಲು ಯತ್ನಿಸಬಹುದಾಗಿದೆ. ವೀರಸೇನರು, ಜಿನಸೇನರು ಸೇನಗಣದವರಾಗಿರುವರೆಂಬುದರ ಬಗ್ಗೆ ಯಾವುದೇ ಪ್ರಕಾರದ ವಿವಾದಕ್ಕೆಡೆಯಿಲ್ಲ. ಆದರೆ ಇವರ ಪೂರ್ವಜರಾದ ಸೇನಗಣದ ಆಚಾರ್ಯರ ಬಗ್ಗೆ ಏನೂ ತಿಳಿಯದಾಗಿದೆ. ಪುನ್ನಾಟ ಜಿನಸೇನರ ಹರಿವಂಶಪುರಾಣ ದಲ್ಲಿ(ಸರ್ಗ೬೬) ಸೇನಗಣದ ಆಚಾರ್ಯಾನುಕ್ರಮವನ್ನು ಹೇಳಿದೆ. ಆದರೆ ಈ ಅನು ಕ್ರಮದಲ್ಲಿ ಋಷಭಸೇನರ, ವೀರಸೇನರ ಗುರುಪಿತಾಮಹ ಚಂದ್ರಸೇನರ, ಹಾಗೂ ವೀರಸೇನರ ಶಿಷ್ಯ ಜಿನಸೇನರ ಹೆಸರುಗಳು ಕಂಡುಬರುವುದಿಲ್ಲ. ಆದ್ದರಿಂದ ಪುನ್ನಾಟಜಿನಸೇನರ ಸೇನಗಣ ಮತ್ತು ವೀರಸೇನರ ಸೇನಗಣಗಳು ಬೇರೆ ಬೇರೆ ಶಾಖೆಗಳಾಗಿವೆ ಯೆಂದು ತಿಳಿಯಬೇಕಾಗುವುದು. ಕ್ರಿಸ್ತಶಕದ ಆದಿ ಸಮಯದಲ್ಲಿ ಅರ್ಹದ್ಬಲಿಸ್ವಾಮಿ ಯವರಿಂದಾದ ಮುನಿಸಂಘದ ವ್ಯವಸ್ಥೆಯಲ್ಲಿ ಏರ್ಪಟ್ಟ ಸಂಘ ಅಥವಾ ಗಣಗಳಲ್ಲಿ ಸೇನಸಂಘವೂ ಒಂದು.ಈಸಂಗತಿಯನ್ನು ಹಿಂದೆ ವಿವರಿಸಿದೆ. ನಂದಿ ಆಮ್ನಾಯ ಪಟ್ಟಾವಲಿಯಪ್ರಕಾರ ತೃಣತಲದೇಶದಲ್ಲಿ ವರ್ಷಾಯೋಗಧಾರಣೆ ಮಾಡಿದ್ದ 'ಜಿನ ಸೇನ ಎಂಬುವರು ಸೇನಸಂಘದ ಸ್ಥಾಪನೆ ಮಾಡಿದರೆಂದು ಹೇಳಿದೆ.ಹರಿವಂಶ ಪುರಾಣದಲ್ಲಿ ಹೇಳಿರುವ ಸೇನಸಂಘ ಆಚಾರ್ಯನುಕ್ರಮದಲ್ಲಿ ಜಿನಸೇನ ಎಂಬ ಪೂರ್ವಾಚಾರ್ಯರೊಬ್ಬರ ಹೆಸರಿದ್ದರು ಅದು ಅರ್ಹದ್ಬಲಿಯವರಿಂದ ಸುಮಾರು ಮುವ್ವತ್ತು ಹೆಸರುಗಳ ಅನಂತರದಲ್ಲಿದೆ. ಆದ್ದರಿಂದ ಈ ಜೀನಸೇನರು ಸೇನಗಣದ ಪ್ರವರ್ತಕರಾಗಿರುವರೆಂದು ಹೇಳಲಾಗುವುದಿಲ್ಲ. ಪ್ರಾಯಿಕವಾಗಿ ಜಿನಸೇನರಿಂದ ಸೇನ ಗಣ ಪ್ರವರ್ತನೆಯಾದ ಬಳಿಕ ಕಾಲಾಂತರದಲ್ಲಿ ಅದು ಕನಿಷ್ಠ ಮಿತಿಯಿಂದ ಎರಡು ಶಾಖೆಗಳಾಗಿ ಒಡೆದು ಅವುಗಳಲಿ ಪುನ್ನಾಟ ಜಿನಸೇನರು ಒಂದು ಶಾಖೆಯವ ರಾಗಿಯೂ ವೀರಸೇನ ಜಿನಸೇನರು ಮತ್ತೊಂದು ಶಾಖೆಯವರಾಗಿಯೂ ಆಗಿರ ಬೇಕೆಂದು ತಿಳಿಯಬೇಕಾಗಿದೆ. ಈ ರಿತಿಯಾಗಿ ಸೇನಸಂಘವು ಶಾಕೆಗಳಾಗಿ ಏರ್ಪಟ್ಟ ಸಮಯದಲ್ಲಿ ಒಂದು ಶಾಕೆಯ ಪ್ರಧಾನಾಚಾರ್ಯ ವೃಷಭ(ಋಷಭ)ಸೇನರ ಹೆಸರಿ ನಾಧಾರದಿಂದ ವೃಷಭ(ಋಷಭ)ಸೇನಾನ್ವಯವು ಮೂಡಿರಬೇಕೆಂದು ತಿಳಿಯಬಹು ದಾಗಿದೆ. ಆದ್ದರಿಂದ ವೀರಸೇನರು ತಮ್ಮ ಅನ್ವ್ಯಯದ ಮೂಲ ಪುರುಷರಾದ ಋಷಭ

ಸೇನರನ್ನು ಪೂಜ್ಯಭಾವದಿಂದ ಹೆಸರಿರುವರೆಂದು ತಿಳಿಯಬಹುದಾಗಿದೆ. ಪ್ರಾಯಶಃ ಮಾಘನಂದಿಯವರಿಂದ ಪ್ರವರ್ತಿತವಾದ ನಂದಿಸಂಘದಲ್ಲಿ ಪದ್ಮನಂದಿ ಕುಂದ ಕುಂದಸ್ವಾಮಿಯವರ ಹೆಸರಿನಲ್ಲಿ ಕುಂದಕುಂದಾನ್ವಯವು ಮೂಡಿದಂತೆ, ಸೇನಸಂಘ ದಲ್ಲಿ ಋಷಭಸೇನರ ಹೆಸರಿನಿಂದ ಋಷಭಸೇನನ್ವಯವು ಮೂಡಿದ್ದಲ್ಲಿ ಅದು ಅಸಂಭವವೆನಿಸುವುದಿಲ್ಲ. ವೀರಸೇನರು ತಮ್ಮನ್ನು ಪಂಚಸ್ತೂಪಾನ್ವಯದ ಭಾನು ಎಂದು ಹೇಳಿಕೊಂಡಿದ್ದಾರೆ. ಪಂಚಸ್ತೂಪಾನ್ವಯದ ಬಗ್ಗೆ ಅರ್ಹದ್ಬಲಿಸ್ವಾಮಿಯವ ರಿಂದಾದ ವ್ಯವಸ್ಥೆಯ ಫಲವಾಗಿ ಮೂಡಿದ ಸಂಘಗಳೆಲ್ಲವೂ ಪಂಚಸ್ತೂಪಾನ್ವಯ ದವುಗಳೇ ಆಗಿವೆಯೆಂದು ಹಿಂದೆ ವಿವರಿಸಲಾಗಿದೆ. ಆದ್ದರಿಂದ ವೀರಸೇನರು ಈ ವಿಶಾಲ ಅರ್ಥದಿಂದ ಪಂಚಸ್ತೂಪಾನ್ವಯದವರೆಂದು ಹೇಳಿಕೊಂಡಿರು ವುದು ಸುಸಂಗತವೇ ಆಗಿದೆ.

ಮುಂದೆ ವೀರಸೇನರು ತಮ್ಮನ್ನು ಆರ್ಯನಂದಿಯವರ ಶಿಷ್ಯನೆಂದು ಹೇಳಿಕೊಂಡಿ ರುವುದು ಗಮನಾರ್ಹವಾಗಿದೆ. 'ಆರ್ಯನಂದಿ' ಹೆಸರಿನೊಡನಿರುವ 'ನಂದಿ' ಪದ ದಿಂದ ಈ ಆಚಾರ್ಯರು ನಂದಿಸಂಘ–ಗಣದವರೆಂದು ಸ್ಪಷ್ಟವಾಗಿ ಸೂಚಿತವಾಗು ವುದು. ಮಾನ್ಯ ಹೀರಾಲಾಲ್ ಜೈನ ಅವರು ಹೇಳಿರುವಂತೆ ಇವರು ವೀರಸೇನರ ದೀಕ್ಷಾಗುರುಗಳಾಗಿದ್ದಲ್ಲಿ ಮೊದಲಿಗೆ ವೀರಸೇನರು ನಂದಿಸಂಘದವರಾಗಿದ್ದು ಅನಂತರ ಸೇನಗಣವನ್ನು ಸೇರಿರಬೇಕೆಂದು ತಿಳಿಯಬೇಕಾಗುವುದು. ಹಿಗಲ್ಲದೆ ವೀರಸೇನರು ಸೇನಗಣದವರಾಗಿ ದೀಕ್ಷಿತರಾಗಿದ್ದರೂ ತಾವು ಸಿದ್ಧಾಂತದ ಪ್ರಕರ್ಷ ವರೆಂದು ತಿಳಿಯಬಹುದಾಗಿದೆ. ಇದರಂತೆ ಆರ್ಯನಂದಿಯವರೂ ಇವರ ವಿದ್ಯಾ ಗುರುಗಳೇ ಆಗಿರುವರೆಂದು ತಿಳಿಯಬಹುದಾಗಿದೆ.

ಜಯಧವಲಾ ಟೀಕೆಯ ಅಂತ್ಯದಲ್ಲಿ ಜಿನಸೇನಾಚಾರ್ಯರು ತಮ್ಮ ಗುರುವಾದ ಈ ವೀರಸೇನರನ್ನು, ಅತಿಶಯೋಕ್ತಿಗಳಂತೆ ಕಂಡುಬಂದರೂ, ಅರ್ಥಪೂರ್ಣ ಮಾತುಗಳಿಂದ ವರ್ಣನೆ ಮಾಡಿದ್ದಾರೆ. "ಭಟ್ಟಾರಕ ಎಂಬುದು ಇವರ ಪ್ರಶಸ್ತಿ. ಈ ಪ್ರಶಸ್ತಿ ಯುತವಾದ ವೀರಸೇನ ಎಂಬ ಹೆಸರಿನಿಂದ ಇವರು ಅಪಾರ ಪ್ರಸಿದ್ಧಿ ಪಡೆದರು, ಸಾಕ್ಷಾತ್ ಕೇವಲಿಯೋ ಎನ್ನುವಂತೆ ಸಮಸ್ತ ವಿಶ್ವಗಳ ಪಾರದರ್ಶಿಯಾಗಿದ್ದರು, ಜೀವಿಗಳ ಪ್ರೀತಿಯ ಸಂಪತ್ತಿ ಹೊಂದಿದ ಸಮಸ್ತವನ್ನೂ ಆಕ್ರಮಿಸಿದವಳಾಗಿ ಗೋಚರಿ ಸಿರುವ ಸರಸ್ವತಿಯ ಆಜ್ಞೆಯಂತೆ ಇವರ ವಾಣಿಯು

ಷಟಖಂಡ(ಆಗಮ)ದಲ್ಲಿ ಎಲ್ಲಿಯೂ ಕುಂಠಿತವಾಗಲಿಲ್ಲ. ಸರ್ವಾರ್ಥಗಾಮಿನಿಯಾದ ಇವರ ನೈಸರ್ಗಿಕವಾದ ಮನೀಷಿಗಳು ಸರಳಭಾವ ಹೊಂದಿದರು. ಅತಿಶಯವಾಗಿ ಹೊಳೆಯುವ ಜ್ಞಾನ ಕಿರಣಗಳ ಹರಡುವಿಕೆಯೊಡನೆ ಉದಯಗೊಂಡ ಇವರನ್ನು ಪ್ರಾಜ್ಞರು 'ಶ್ರುತಕೇವಲಿ' ಪ್ರಸಿದ್ಧವೂ ಸಿದ್ಧವೂ ಆದ ಸಿದ್ಧಾಂತ ಸಮುದ್ರದ ಜಲದಿಂದ ಸ್ವಚ್ಛಗೊಂಡು ಸಂಪನ್ನರೊಡನೆ ಸ್ಪರ್ಧೆ ನಡೆಸುತಿದ್ದರು. ಚಿರಂತನ ಪುಸ್ತಕಗಳ ಗುರುತ್ವ ಮಾಡಿದ ಇವರಿಂದ ಹಿಂದಿನ ಎಲ್ಲ ಪುಸ್ತಕ ರೂಪದ ಶಿಷ್ಯರು ಅತಿಶಯಿತರಾರಾದರು. ತಪ್ತವೂ ಉದ್ದೀಪ್ತವೂ ಆದ ಕಿರಣಗಳಿಂದ ಇವರು ಭವ್ಯರೆಂಬ ಕಮಲಗಳನ್ನು ಮುನಿಗಳನ್ನು ಕತ್ತಲೆಯಿಂದ ಎಚ್ಚರಗೊಳಿಸುವವರಾಗಿ ಪಂಚಸೂಪ್ತವೆಂಬ ಅಂಬರದಲ್ಲಿ ಪ್ರಕಾಶಿಸಿದರು. ಚಂದ್ರಸೇನರು ಪ್ರಶಿಷ್ಯನೂ ಆರ್ಯಾನಂದಿಟವರ ಶಿಷ್ಯನೂ ಆಗಿ ಕುಲವನ್ನು, ಗಣವನ್ನು ಮತ್ತು ಸಂತತಿಯನ್ನು ತನ್ನ ಗುಣಗಳಿಂದ ಉಜ್ವಲಗೊಳಿಸಿದರು. ಅವರಿಗೆ ಉಜ್ವಲವಾದ ಬುದ್ಧಿ ಹೊಂದಿದ ಶ್ರೀಮಾನ್ ಜಿನಸೇನರು ಶಿಷ್ಯರಾದರು.

ಮಹಾಪುರಾಣದ ಪ್ರಾರಂಬದ ಪೂರ್ವ ಕವಿ ಪ್ರಸ್ತುತಿಯಲ್ಲಿ ಜಿನಸೇನಸ್ವಾಮಿಯವರು ಮುಂದಿನಂತೆ ಸ್ತುತಿಸಿದ್ದಾರೆ :"

"ಶ್ರೀವೀರಸೇನ ಎಂಬ ಹೆಸರಿನೊಡನೆ ಭಟ್ಟಾರಕದೆಂದು ಅಪಾರ ಪ್ರಸಿದ್ದಿ ಹೊಂದಿದವರೂ, ಪವಿತ್ರಾತ್ಮರೂ, ಕವಿಶ್ರೇಷ್ಠರೂ ಆದ ಆ ಮುನಿವರ್ಯರು ನಮ್ಮನ್ನು ಪವಿತ್ರರನ್ನಾಗಿ ಮಾಡಲಿ. ಲೋಕಸ್ವರೂಪ ಜ್ಞಾನ ಮತ್ತು ಕವಿತ್ವ ಎರಡೂ ಈ ಭಟ್ಟಾರಕದಲ್ಲಿ ಇದ್ದುವು. ಇಂತಹ ಇವರ ವಚನದಿಂದ ಬೃಹಸ್ಪತಿಯ ವಾಗ್ಮಿತ್ವ (ವಾಚಾಳುತ್ವವು) ಅವಾಗ್ಮಿತ್ವ ಹೊಂದಿತು. ಸಿದ್ಧಾನ್ತ ವ್ಯಾಖ್ಯಾನಗಳ ರಚನೆ ಮಡಿದ ನನ್ನ ಗುರುವಿನ ಪಾದಕಮಲವು ಚಿರವಾಗಿ ನನ್ನ ಮನಸ್ಸೆಂಬ ಸರಸ್ಸಿನಲ್ಲಿ ಸ್ಥಿರವಾಗಿ ನಿಲ್ಲಲಿ. ಚಂದ್ರನಂತೆ ನಿರ್ಮಲವಾದ ಕೀಏತಿಯಾಗಿರುವ ಸಮಸ್ತಭುವನವನ್ನೂ ಶುಭ್ರ ವನ್ನಾಗಿ ಮಾಡಿರುವ ಆ ನನ್ನ ಗುರುವಿನ ಧವಲಾ(ಟೀಕಾ)ಭಾರತಿಯನ್ನು ಬಾಗಿ ನಮಸ್ಕರಿಸುವೆನು."[೩೭]

ಹರಿವಂಶಪುರಾಣಕರ್ತೃ ಪುನ್ನಾಟ ಜಿನಸೇನರು, ಇವರನ್ನು 'ತನ್ನ ಜನರನ್ನು ಮತ್ತು ಪರಜನರನ್ನು ಜಯಿಸಿದ, ಕವಿಗಳ ಚಕ್ರವರ್ತಿಯಾದ ವೀರಸೇನ ಗುರುವಿನ ಅಕಲಂಕ ವಾದ ಕೀರ್ತಿಯು ಪ್ರಕಾಶಿಸುತ್ತಿದೆ' ಎಂದು ಹೇಳಿದ್ದಾರೆ.

ಪ್ರಶಿಷ್ಯರಾದ ಗುಣಭದ್ರಸ್ವಾಮಿಯವರು ಇವರನ್ನು "ಮೂಲಸಂಘವೆಂಬ ಸಮುದ್ರದಲ್ಲಿ ಪ್ರಕಾಶಮಾನವಾದ ರತ್ನಗಳಿರುವಂತೆ ಮಹಾಪುರುಷಷರತ್ನಗಳಿಗೆ ಸ್ಥಾನವಾದ ಸೇನಾನ್ವಯವು ಮೂಡಿತು. ಅದರಲ್ಲಿ ಸಮಸ್ತ ಪ್ರವಾದಿಗಳೆಂಬ ಮದಗಜಗಳನ್ನು ಭಯಪಡಿಸಿದ, ಭಗವಾನ್ ವೀರಜಿನೇಂದ್ರನ ಧರ್ಮರಕ್ಷಕ ವೀರಸೇನೆಯ ಅಗ್ರಣಿಯಾದ ವೀರಸೇನ ಭಟ್ಟಾರಕನು ಪ್ರಕಾಶಮಾನನಾದನು. ಶಿಷ್ಯರನ್ನು ಅನುಗ್ರಹಿ ಸುವುದಕ್ಕಾಗಿ ಜ್ಞಾನವು ಚಾರಿತ್ರಸಾಮಗ್ರಿಯನ್ನು ಪಡೆದ ಮೂರ್ತಿಯಾಗಿದೆಯೋ ಎನ್ನುವಂತೆ ಶೋಭಿಸಿದನು. ಇವನ ಚರಣಗಳಲ್ಲಿ ಬಾಗಿ ನಮಸ್ಕರಿಸಿದ ರಾಜರ ಮುಖಗಳೆಂಬ ಕಮಲಗಳು ಉಗುರುಗಳ ಚಂದ್ರಕಿರಣಗಳಿಂದ ಅರಲಿ ಲಕ್ಷ್ಮಿಯ ಸೌಂದರ್ಯ ಶೋಭೆಯನ್ನು ಹೊಂದಿದುವು. ಆಶ್ಚರ್ಯವು, ಅನ್ಯರಿಗೆ ಪದಪದ ಗಳಲ್ಲಿಯೂ ವಿಷಮವಾದ, ಹೆಜ್ಜೆಹೆಜ್ಜೆಗೂ ತೊಡಕಾದ ಸಿದ್ಧಿಭೂಪದ್ಧತಿಗೆ ಇವರ ಟೀಕೆಯನ್ನು ನೋಡಿ ಭಿಕ್ಷುಗಳು ಲೀಲಾಜಾಲವಾಗಿ ಟೀಕೆ ರಚಿಸಿದರು. ಧವಲಕೀರ್ತಿ ಯಿಂದೆನ್ನುವಂತೆ, ಕೇಳಲು ಅತ್ಯಂತ ಯೋಗ್ಯವಾದ ಇವನ ಮುಖ ಕಮಲದಿಂದ ಮೂಡಿದ ವಚನಶ್ರೀಯು ಸಮಸ್ತ ಧೀಮಂತ ಸತ್ಪುರಷರಿಗೆ ಸತತವಾಗಿ ಅಪಾರ ಪ್ರೀತಿಯುಂಟುಮಾಡುವುದಾಗಿ, ಲೋಕದೆಲ್ಲೆಡೆಯಲ್ಲಿಯೂ ಹರಡಿಕೊಳ್ಳುವ ಕ್ರಿಯೆ ಯಿಂದುಂಟಾದ ಬಳಲಿಕೆಯಿಂದ ಲೋಕದಲ್ಲಿ ಚಿರಕಾಲ ಉಳಿದುಕೊಂಡದ್ದಾಗಿ ಅನಾದಿಕಾಲದಿಂದ ಸಂಗ್ರಹಿಸಲ್ಪಟ್ಟುದಾಗಿ ಬೆಳೆದು ಕಿವಿಗಳಿಗಂಟಿದ (ಕರ್ಮರೂಪದ) ಮಲವೂ ಸ್ವಲ್ಪವೂ ಇಲ್ಲದಾಯಿತು.

ವೀರಸೇನರನ್ನು ಕುರಿತಮೇಲಿನ ವಚನಗಳು ಕಾವ್ಯಾತ್ಮಕವಾಗಿ ಪ್ರಶಂಸಾತ್ಮಕವಾಗಿ ಕಂಡುಬಂದರೂ ವಾಸ್ತವಿಕವಾಗಿದೆ. ಅರ್ಥಪೂರ್ಣವಾಗಿವೆ. ಭಗವಾನ್ ಮಹಾವೀರನ ಪಾರಮಾರ್ಥಿಕ ದಿವ್ಯ ಉಪದೇಶದ ಅರ್ಥವನ್ನು ಪ್ರಾಮಾಣ್ಯ ಪೂರ್ವಕ, ವ್ಯಾಖ್ಯಾನಗಳ ಪೂರ್ವಕ ನಿರೂಪಿಸಲು ನಡೆದ ಯತ್ನಗಳ ಪರಂಪರೆಯಲ್ಲಿ ವೀರಸೇನರ ಯತ್ನವು ಸರ್ವಾಂಗೀಣವಾಗಿದ್ದು ಗಹನವಾಗಿದ್ದು ತಿಳಿಯಲಿಚ್ಛಿಸುವರಿಹೆ ಸುಗಮವಾಗಿದ್ದು. ಗುಣಭದ್ರಸ್ವಾಮಿಯವರು ಹೇಳುವಂತೆ ಚಿರಂತನತ್ವವನ್ನು ಹೊಂದಿ ನಮ್ಮವರೆವಿಗೂ ಮೂರ್ತಿಮತ್ತಾಗಿ ಉಳಿದು ಬಂದಿದೆ. ಆಗಿನ ಆ ದಿನಕ್ಕಾಗಲಿ, ಈಗಿನ ಇಂದಿಗಾಗಲಿ, ಬರಲಿರುವ ಮುಂದಿನ ದಿನಕ್ಕಾಗಲಿ 'ಜೀವ' ಸಿದ್ಧಾಂತವು ಎಂದಿಗೂ ನೂತನವಾಗಿರು ವುದು. ಹೀಗೇಯೇ ಈ ಪ್ರಾಪಂಚಿಕ ಬದುಕಿನ ಜಾಲಮೂಲಗಳ ಪಾರದರ್ಶಕವಾಗಿರುವ

ಕರ್ಮಸಿದ್ಧಾಂತವೂ ನಿತ್ಯ ನೂತನ, ಶತಶತಮಾನಗಳ ಕಾಲದಿಂದ ಹರಿದು ಬಂದ ಈ ಸಿದ್ಧಾಂತಗಳ್ ಅವೈಜ್ಞಾನಿಕ ಪ್ರಜ್ಞಾಪೂರ್ಣ ಚಿಂತನೆಯ ಮಹಾಪೂರ ವೀರಸೇನಾ ಚಾರ್ಯರ 'ಧವಲಾ' ಮತ್ತು 'ಜಯಧವಲಾ' ಗಳಲ್ಲಿ ತುಂಬಿ ಒರವಹಿಸಿದೆ. 'ಇದು ಭಾರತದೇಶದ ಉತ್ತುಂಗ ಆಧ್ಯಾತ್ಮಿಕ ಕೃತಿಯಾಗಿದೆ, ಕರ್ನಾಟಕದ ಸಾಹಿತ್ಯ ಶ್ರೀಯ ಕಿರೀಟದ ಅಮೂಲ್ಯ ರತ್ನವಾಗಿದೆ' ಎಂದಲ್ಲಿ ಅದು ಅತಿಶಯೋಕ್ತಿಯಾಗುವುದಿಲ್ಲ. ಮಹಾಭಾರತವು ಒಂದು ಲಕ್ಷ ಶ್ಲೋಕಗಳ ಮಹಾನ್ ಕೃತಿಯೆಂಬ ಪ್ರಶಸ್ತಿ ಗಳಿಸಿದೆ.ಆದರೆ ಇದು ಒಬ್ಬ ವ್ಯಕ್ತಿಯಿಂದ ಒಂದೆ ಕಾಲದಲ್ಲಿ ರಚಿತವಾದುದಲ್ಲ ಎಂಬುದೂ ಸತ್ಯವಿದೆ. ತೊಂಭತ್ತೆರೆಡು (ಅಥವಾ ತೊಂಭತ್ತೆಂಟುವರೆ) ಸಹಸ್ರ ಶ್ಲೋಕ ಪ್ರಮಾಣದ ಧವಲಾ ಮತ್ತು ಜಯಧವಲಾ ಟೀಕೆಗಳು, ಮಾತ್ರವಲ್ಲದೆ ಹದಿನೆಂಟು ಅನುಯೋಗಗಳ 'ಸಂತಪರೂವಣೆ'ಯೂಸೇರಿ ವೀರಸೇನರೊಬ್ಬರಿಂದಲೇ ಅವರ ಜೀವಿತಕಾಲದಲ್ಲಿ ರಚಿತವಾಗಿದೆ ಎಂಬುದರ ಮಹತ್ವವನ್ನು ಮನಸಾ ಕಾಣ್ಬೇಕಾಗಿದೆ. ಇಂತಹುದಾದ ಮಹಾನ್ ಸಾಹಿತ್ಯದ ರಚನೆಗೆ ತಮ್ಮ ಪೂರ್ಣ ಜೀವನವನ್ನೇ ಮುಡು ಪಾಗಿಟ್ಟ ವೀರಸೇನರನ್ನು ಕುರಿತ ಕೇವಲ ಹೊಗಳಿಕೆಯ ಉತ್ಪ್ರೇಕ್ಷೆಯ ಮಾತುಗಳಾಗಿರದೆ ಅರ್ಥಪೂರ್ಣ ಮಾತುಗಳಾಗಿವೆ.

ಸ್ವಾಮಿ ಜಿನಸೇನಾಚಾರ್ಯರು: ಜಿನಾಸೇನಾಚಾರ್ಯರು ಕಸಾಯಪಾಹುಡದ ಜಯ ಧವಲಾ ಟೀಕೆಯಲ್ಲಿ ನಲವತ್ತುಸಾವಿರ ಗ್ರಂಥ ಪ್ರಮಾಣದ ಅಂತಿಮ ಟೀಕಾ ಭಾಗ ವನ್ನು ರಚಿಸಿ ಅದನ್ನು ಪೂರ್ಣಗೊಳಿಸಿದರೆಂದು ಹಿಂದೆ ಹೇಳಿದೆ. ಈ ರೀತಿಯಿಂದ ಆಗಮ ವ್ಯಾಖ್ಯಾನ ಸಾಹಿತ್ಯದ ಇತಿಹಾಸವು ಸ್ವಾಮಿ ಜಿನಸೇನರ ಹೆಸರಿನೊಡನೆ ಕೊನೆ ಗೊಳ್ಳುತ್ತದೆ. ಸ್ವಯಂ ಜಿನಸೇನರೇ ಹೇಳಿರುವಂತೆ[೩೨]–" ಈ ಪ್ರಕಾರ ಸೂತ್ರಾರ್ಥ ದರ್ಶಿನಿಯಾದ ವೀರಸೇನೀಯ ಟೀಕೆಯು, ಶ್ರೀಮದ್ ಗುರ್ಜರಾರ್ಯಾನುಪಾಲಿತ ವಾಟಗ್ರಾಮಪುರದಲ್ಲಿ, ಫಾಲ್ಗುಣಮಾಸ,ಶುಕ್ಲಪಕ್ಷ ದಶಮಿಯ ಪೂರ್ವಾಹ್ಣ ಸಮ ಯದಲ್ಲಿ ಅಪಾರ ವೃದ್ಧಿಹೊಂದುತ್ತಿರುವುದಾದ ಪೂಜೆಯೊಡನೆ ಶ್ರೇಷ್ಠವಾದ ನಂದೀಶ್ವರ ಮಹೋತ್ಸ್ವ ನಡೆದಿರುವಲ್ಲಿ ಅಮೋಘ ವರ್ಷರಾಕೇಂದ್ರನ ರಾಜ್ಯದ ಶ್ರೇಷ್ಠ ಗುಣೋದಯವು ರಾಶಿಯಾಯಿತೆನಿಸಿದ್ದಾಗಿ ಅಪಾರವಾಗಿ ಕಲ್ಪಾಂತದವರೆಗೆ ಸ್ಥಾಯಿಯಾಗಿರಲಿ, ಶಕ ನರೇಂದ್ರನ ಏಳು

ನೂರ ಐವತ್ತೊಂಭತ್ತು ವರ್ಷಗಳು ಕಳೆದಿರಲು, (ಶಕ.ಸಂ. ೭೫೯– ೭೬೯ರಲ್ಲಿ ಕ್ರಿ.ಶ. ೮೧೭– ೮೧೮ರಲ್ಲಿ) ಜಯಧವಲಾ ಪ್ರಾಭೃತವ್ಯಾಖ್ಯೆಯು ಸಮಾಪ್ತವಾಯಿತು."

ಇಲ್ಲಿ ಹೇಳಲಾಗಿರುವಂತೆ ಜಯಧವಲಾ ಟೀಕಾರಚನೆಯುಶಕ. ಸಂ. ೭೬೦ರಲ್ಲಿ ಸಮಾಪ್ತವಾಗಿದೆ. ಇದು ಜಿನಸೇನಸ್ವಾಮಿಯವರ ಜೀವಿತಕಾಲದ ಬಗ್ಗೆ ಉಪಲಬ್ಧ ವಿರುವ ಕಾಲದ ಮಿತಿಯಾಗಿದೆ. ಪುನ್ನಾಟ ಜಿನಸೇನರು ತಮ್ಮಹರಿವಂಶ ಪುರಾಣದಲ್ಲಿ ಜಿನಸೇನ ಸ್ವಾಮಿಯವರಿಂದ ರಚಿತವಾಗಿರುವ 'ಪಾರ್ಶ್ವಾಭ್ಯುದಯ'ದ ಪ್ರಶಂಸೆ ಮಾಡಿದ್ದಾರೆ. ಹರಿವಂಶ ಪುರಾಣದ ರಚನೆಯು ಶಕ. ಸಂ. ೭೦೫ರಲ್ಲಿ ಸಮಾಪ್ತವಾಗಿದೆ.೩೩ ಆದ್ದ ರಿಂದ ಈ ಪುರಾಣದ ರಚನೆಯು ಸುಮಾರು ಐದಾರು ವರ್ಷಗಳ ಮುಂಚಿತವಾಗಿ ಪ್ರಾರಂಭವಾಗಿರಬಹುದೆಂದು ಗಣನೆ ಮಾಡಬಹುದು. ಇದರಂತೆ ಸ್ವಾಮಿ ಜಿನ ಸೇನರಿಂದ ಪಾರ್ಶ್ವಾಭ್ಯುದಯವು ಶಕ. ಸಂ. ೭೦೦ನೇ ವರ್ಷಕ್ಕೆ ಮುಂಚಿತವಾಗಿಯೆ ರಚಿತವಾಗಿದ್ದು ಪ್ರಸಿದ್ಧಿ ಪಡೆದಿದ್ದಿತೆಂದು ಹೇಳಬಹುದಾಗಿದೆ. ಪಾರ್ಶ್ವಾಭ್ಯುದಯದ ರಚನೆಯಾದ ಸಮಯದಿಂದ ಸುಮಾರು ೬೦ವರ್ಷಗಳ ಅನಂತರದ ಸಮಯದಲ್ಲಿ ಸ್ವಾಮಿ ಜಿನಸೇನರಿಂದ ಜಯಧವಲಾ ಟೀಕೆ ರಚನೆಯು ಸಮಾಪ್ತವಾಗಿದೆ. ಧವಲಾ ಟೀಕಾರಚನೆಯನ್ನು ವೀರಸೇನರು ಶಕ. ಸಂ. ೭೩೮ರಲ್ಲಿ ಸಮಾಪ್ತಗೊಳಿಸಿ ಆಬಳಿಕ ಜಯಧವಲಾಟೀಕೆಯ ರಚನೆಯನ್ನು ಆರಂಭಿಸಿದರೆಂದು ಮತ್ತು ಸುಮಾರು ಏಳು ವರ್ಷಗಳ ಸಮಯದಲ್ಲಿ ಇಪ್ಪತ್ತು ಸಹಸ್ರ ಗ್ರಂಥ ಪ್ರಮಾಣದ ಟೀಕೆಯನ್ನು ರಚಿಸಿ ಅದರಿಂದ ಮುಂದಿನ ಭಾಗವನ್ನು ರಚಸಲು ಜಿನಸೇನರಿಗೆ ಆದೇಶವಿದಿತ್ತು ದಿವಂಗತ ರಾಗಿರುವರೆಂದು ಗಣನೆ ಮಾಡಲಗಿದೆ.[೩೪] ಇದರ ಪ್ರಕಾರ ವೀರಸೇನರು ಶಕ. ಸಂ. ೭೩೩೮ರಿಂದ ೭೪೫ರ ಪರ್ಯಂತದ ೭ವರ್ಷಗಳ ಅವಧಿಯಲ್ಲಿ ಜಯಧವಲಾದ ೨೦ ಸಹಸ್ರ ಗ್ರಂಥ ಪ್ರಮಾಣದ ಟೀಕೆ ರಚಿಸಿರುವರೆಂದು ಪರಿಗಣನೆ ಮಾಡಲಾಗಿದೆ.  ಜಿನಸೇನರು ಇದೇ ಅವಧಿಯಲ್ಲಿ ಮಹಾಪುರಾಣದ ರಚನೆಯನ್ನಾರಂಭಿಸಿ ಅದರ ಮೊದಲ ಭಾಗ ಆದಿಪುರಾಣದ ೪೨ಪರ್ವ ಮತ್ತು ೪೨ನೇ ಪರ್ವದ ೩ಶ್ಲೋಕಗಳನ್ನು ಒಟ್ಟಿನಲ್ಲಿ ೧೦೩೮೦ ಶ್ಲೋಕಗಳನ್ನು ರಚನೆ ಮಾಡಿರುವರೆಂದು ಕ. ಪಾ. ಪ್ರಸ್ತಾವನಾ ಕಾರರು ಹೇಳಿದ್ದಾರೆ.[೩೫] ಆದರೆ ನಾಥೂರಾಂ ಪ್ರೇಮಿಯವರು, ಜಯಧವಲಾ ರಚನೆಯ ಅನಂತರದಲ್ಲಿಯೇ ಆದಿಪುರಾಣದ ರಚನೆ ಮಾಡಿರುವರೆಂದು ಸಂಭವನೀಯವೆನಿಸಿ ಹೇಳಿದ್ದಾರೆ.[೩೬] ಸ್ವಾಮಿ ಜಿನಸೇನರು

ತಮ್ಮ ಮಹಾಪುರಣ ಪ್ರಾರಂಭದ ಪೂರ್ವಕವಿ ಸಂಸ್ತುತಿಯಲ್ಲಿ ತಮ್ಮಗುರು ವೀರಸೇನರ ಗುಣ ಸಂಸ್ತುತಿಮಾಡುತ್ತಾ ಅವರಿಂದ ರಚಿತವಾಗಿರುವ ಧವಲಾ ಟೀಕೆಯ ಮಹತ್ವವನ್ನು ವರ್ಣಿಸಿದ್ದಾರೆ.[೩೭] ಇದರಿಂದ ಈ ಧವಲಾಟೀಕೆಯ ರಚನೆ ಸಮಾಪ್ತವಾದ ಶಕ. ಸಂ. ೭೩೮ರ ಅನಂತರದಲ್ಲಿಯೇ ಮಹಾಪುರಾಣದ ರಚನೆಯನ್ನು ಆರಂಭಿಸಿರಬೇಕೆಂದು ಗ್ರಹಿಸಬೇಕಾಗುತ್ತದೆ. ಆದರೆ ಇದರಿಂದ ಒಂದು ಪ್ರಶ್ನೆ ಮೂಡಿ ನಿಲ್ಲುತ್ತದೆ.

ಜಿನಸೇನರು ಶಕ. ಸಂ. ೭೦೦ಕ್ಕಿಂತ ಮುಂಚಿತವಾಗಿಯೇ ಪಾರ್ಶ್ವಾಭ್ಯುದಯದ ರಚನೆ ಮಾಡಿದ ಬಳಿಕ ಶಕ. ಸಂ. ೭೩೮ರವರೆಗೆ ಅಥವಾ ೭೫೯ರವರೆಗೆ ಎಂದರೆ ೩೮ವರ್ಷ ಕಾಲ ಅಥವಾ ೬೦ ವರ್ಷಗಳಷ್ಟು ದೀರ್ಘಕಾಲ ಮತ್ತಾವ ಸಾಹಿತ್ಯಕೃತಿ ಯನ್ನಾಗಲಿ ರಚನೆ ಮಾಡಲೇ ಇಲ್ಲವೆ ? ಎಂಬ ಪ್ರಶ್ನೆ ಮೂಡುವುದು. ಇದೂ ಅಲ್ಲದೆ ವೀರಸೇನರು ಧವಲಾರಚನೆಯನ್ನು ಸಮಾಪ್ತಿಮಾಡಿ ಅನಂತರದಲ್ಲಿ ಜಯಧವಲಾ ರಚನೆ ಮಾಡಿದ ಏಳೆಂಟು ವರ್ಷಗಳ ಅವಧಿಯಲ್ಲಿ ಜಿನಸೇನರು ಮಹಾಪುರಾಣ ರಚನೆಯ ಕಾರ್ಯವನ್ನು ಕೈಗೊಂಡಿದ್ದಾರೆನ್ನುವುದಾದಲ್ಲಿ ಇವರು ಕನಿಷ್ಠ ಮಿತಿಯಿಂದ ಆದಿಪುರಾಣದ ಭಾಗವಷ್ಟನ್ನಾದರೂ ಪೂರ್ಣಗೊಳಿಸದೆಯೆ ೪೩ನೇ ಪರ್ವದ ಮೂರು ಶ್ಲೋಕಗಳ ರಚನೆಯಷ್ಟಕ್ಕೇ ಕೈಬಿಟ್ಟು ಜಯಧವಲಾ ಟೀಕಾರಚನೆಯನ್ನು ಮುಂದು ವರಿಸಿದರೆ? ಎಂಬ ಪ್ರಶ್ನೆಯೂ ಎದುರಾಗುವುದು. ಪ್ರಾಯಶಃ ಇದಕ್ಕೆ ಉತ್ತರ ಚಾಮುಂಡರಾಯನ ಹಿಂದೆ ಉಲ್ಲೇಖಿಸಿರುವ ಹೇಳಿಕೆಯಲ್ಲಿ ದೊರೆಯುತ್ತದೆ. ಇದ ರಲ್ಲಿ ಹೇಳಿರುವಂತೆ, ಸಿದ್ಧಾಂತ, ಮಹಾಪುರಾಣ, ನಯಶಾಸ್ತ್ರ,ಕಾವ್ಯ ನಾಟಕಗಳ ತತಿಯು (ಸಮೂಹವು) ವೀರಸೇನ ಜೀನಸೇನರ ಯಶಸ್ಸನ್ನು ಧರೆಯಲ್ಲಿ ಹರಡಿದೆ. ಚಾವುಂಡರಾಯನು ಜಿನಸೇನರಿಂದ ಕೇವಲ ೧೫೦ವರ್ಷಗಳ ಅನಂತರದ ಸಮಯದಲ್ಲಿ ಜೀವಿಸಿದ್ದನು. ಆದ್ದರಿಂದ ಇವನ ಹೇಳಿಕೆಯನ್ನು ಕಡೆಗಣಿಸುವಂತಿಲ್ಲ.ಜಿನಸೇನರುಕಸಾಯಪಾಹುಡದ ಜಯಧವಲಾ ಟೀಕೆಯ ರಚನೆ ಮಾಡಿರುವುದರಿಂದ ಅವರಿಂದಾರುವ ಸಿದ್ಧಾಂತ ರಚನೆಯ ಬಗ್ಗೆ ಹೆಚ್ಚಿನ ವಿವರಣೆಯ ಅಗತ್ಯವಿಲ್ಲ. ಹೀಗೆಯೇ ಇವರಾ ಮಹಾಪುರಾಣವೂ ಅಪಾರ ಪ್ರಸಿದ್ಧಿ ಪಡೆದ ಕೃತಿಯಾಗಿದೆ. ಇದಲ್ಲದೆ ಇವರು ಪಾರ್ಶ್ವಾಭ್ಯುದಯ ಲಘು ಕಾವ್ಯವನ್ನು ರಚಿಸಿದ್ದ ಸಂಗತಿಯನ್ನು ಈ ಹಿಂದೆ ಹೇಳಿದೆ. ಇಷ್ಟಾದರೂ ಇವು ಶಕ. ಸಂವತ್ ೭೦೦ ಮತ್ತು ೭೩೮ರ ಮಧ್ಯಕಾಲದಲ್ಲಿ

ರಚಿತವಾದವುಗಳಾಗಿಲ್ಲ. ಆದ್ದರಿಂದ ಈ ಮಧ್ಯಕಾಲದಲ್ಲಿ ಚಾವುಂಡರಾಯನ ಹೇಳಿಕೆ ಯಿಂದ ಸೂಚಿತವಾಗುವಂತೆ ನಯಶಾಸ್ತ್ರ, ಕಾವ್ಯ ಮತ್ತು ನಾಟಕ್ಗಳ ರಚನೆ ಮಾಡಿರ ಬಹುದೆಂದು ಗ್ರಹಿಸಬಹುದಾಗಿದೆ. ಇದೂ ಅಲ್ಲದೆ ವೀರಸೇನರ ನೆಚ್ಚಿನ ಶಿಷ್ಯರಾಗಿದ್ದ ಇವರು ಧವಲಾಟೀಕೆಯ ರಚನೆಯಲ್ಲಿ ತಮ್ಮ ಗುರುವಿಗೆ ಅಗತ್ಯವಾದ ಎಲ್ಲ ರೀತಿಯ ಸಹಕಾರ ಕೊಟ್ಟಿರುವರೆಂದು ಮತ್ತು ಆ ಮೂಲಕ ಸಿದ್ಧಾಂತದಲ್ಲಿ ವಿಶೇಷ ಪರಿಣತಿ ಹೊಂದಿದ್ದರೆಂದು ಮತ್ತು ಇದರಿಂದಾಗಿಯೆ ವೀರಸೇನರು, ತಾವು ಪೂರ್ಣಗೊಳಿಸ ಲಾಗದಿದ್ದ ಜಯಧವಲಾ ಟೀಕೆಯನ್ನು ಪೂರ್ಣಗೊಳಿಸುವಂತೆ ಇವರಿಗೆ ಆದೇಶವಿತ್ತ ರೆಂದು ತಿಳಿಯಬಹುದಾಗಿದೆ.

ಜೀನಸೇನಾಚಾರ್ಯರ ಕೃತಿಗಳು : ಸ್ವಾಮಿ ಜಿನಸೇನರು ಜಯಧವಲಾ ಟೀಕೆಯ ಬಹುಭಾಗವನ್ನು ರಚಿಸಿದ ಸಂಗತಿ ಈಗ ತಿಳಿದ ಸಂಗತಿಯಾಗಿದೆ. ಸಿದ್ಧಾಂತದ ವ್ಯಾಖ್ಯಾನಕಾರರಾದ ಸೈದ್ಧಾಂತಿಕರಲ್ಲಿ ಇವರು ಕೊನೆಯವರಾಗಿದ್ದು ಷಟ್ ಖಂಡಾ ಗಮ ಮತ್ತು ಕಷಾಯ ಪ್ರಾಭೃತಗಳ ರಚನೆ, ಮತ್ತು ಅವುಗಳ ವ್ಯಾಖ್ಯಾನಗಳ ರಚನೆಯ ಇತಿಹಾಸದ ಅಧ್ಯಾಯ ಇವರ ಹೆಸರಿನೊಡನೆ ಕೊನೆಗೊಳ್ಳುತ್ತದೆ.

೧. ಪಾರ್ಶ್ವಾಭ್ಯುದಯ–ಈ ಕೃತಿಯ ರಚನೆ ಸಂಗತಿಯನ್ನು ಪುನ್ನಾಟ ಜಿನಸೇನಾ ಚಾರ್ಯರು ತಮ್ಮ ಹರಿವಂಶಪುರಾಣದಲ್ಲಿ ಉಲ್ಲೇಖಿಸಿರುವ ಸಮಗತಿಯನ್ನು ಹಿಂದೆ ಹೇಳಿದೆ : ಈ ಕೃತಿಯ ಬಗ್ಗೆ ಮಾನ್ಯ ನಾಥೂರಾಂ ಪ್ರೇಮಿಯವರ ವಿವರಣೆಯ ಸಾರಾಂಶವನ್ನು ಇಲ್ಲಿ ಕೊಡಲಾಗುವುದು. ಇದು ಮದಾಕ್ರಾಂತಾ ವೃತ್ತದ ೩೬೪ ಪದ್ಯಗಳ ಒಂದು ಖಂಡಕಾವ್ಯವಾಗಿದ್ದು ಸಂಸ್ಕೃತ ಸಾಹಿತ್ಯದಲ್ಲಿ ತನ್ನದೇ ಆದ ವೈಶಿಷ್ಟ್ಯವುಳ್ಳದ್ದಾಗಿದೆ. ಮಹಾಕವಿ ಕಾಳಿದಾಸನ ಸುಪ್ರಸಿದ್ಧ, ಖಂಡಕಾವ್ಯ–ಮೇಘ ದೂತವನ್ನು ಇದು ಪೂರ್ಣ ರೀತಿಯಿಂದ ತನ್ನಲ್ಲಿ ಅಂತರ್ಗತ ಮಾಡಿಕೊಂಡಿದೆ. ಮೇಘದೂತದ ಎಲ್ಲ ಪದ್ಯಗಳನ್ನು ಅವುಗಳ ಎಲ್ಲ ಪಾದಗಳನ್ನು ಒಂದೊಂದಾಗಿ ಈ ಪಾರ್ಶ್ವಾಭ್ಯುದಯದ ಪ್ರತಿ ಪದ್ಯಗಳಲ್ಲಿ ಸಮಾವೇಶ ಮಾಡಿಕೊಳ್ಳಲಾಗಿದೆ, ಮೇಗ ದೂತದ ಪ್ರತ್ಯೇಕ ಪಾದದ ಸಮಸ್ಯಾಪೂರ್ತಿ ರೂಪದಲ್ಲಿ ಕೌತುಕಾವಹ ಕಾವ್ಯವು ನಿರ್ಮಿತವಾಗಿದೆ. ಮೇಘದೂತದ ಪದ್ಯಗಳ ಕೊನೆಯ ಪಾದಗಳ ಉಪಯೋಗ ಮಾಡಿ ಕೊಂಡು ಅನೇಕ ಕಾವ್ಯಗಳ ರಚನೆಯಾಗಿದೆ. ಆದರೆ ಮೇಘದೂತದ ಎಲ್ಲ ಪದ್ಯಗಳ ಉಪಯೋಗ

ಮಾಡಿಕೊಂಡು ರಚನೆ ಹೊಂದಿರುವ ಕಾವ್ಯ ಇದು ಒಂದು ಮಾತ್ರ, ಇದಲ್ಲದೆ ಒಬ್ಬ ವಿರಹೀ ಯಕ್ಷನದಾದ ವಿರಹಶೃಂಗಾರ ಪ್ರಧಾನವಾಗಿರುವ  ಮೇಗ ದೂತದ ಪದ್ಯಗಳ ಆಲಂಬನದಿಂದ ವೈರಾಗ್ಯ ಪ್ರಧಾನವಾದ ಪಾರ್ಶ್ವನಾಥನ ಚರಿತೆ ಯನ್ನು ರಚಿಸಿರುವುದು ನಿಜ್ಜಕ್ಕೂ ಮಹತ್ವದ ಸಂಗತಿಯಾಗಿದೆ. ಈ ರೀತಿಯಾದ ವಿರೋಧ ಭಾವದ ಪರಾವಲಂಬನದ ಮೂಲಕ ಕಾವ್ಯ ರಚನೆ ಮಾಡುವುದು ಕ್ಲಿಷ್ಟಕರ ವಾದುದೆಂಬುದಂತೂ ನಿಜ. ಇಷ್ಟಾದರೂ ಈ ಕಾವ್ಯವು ಸರಸ ಮತ್ತು ಸುಂದರವಾದು ದಾಗಿದೆ. ಸ್ವಾಮಿ ಜಿನಸೇನರು ತಮ್ಮ ಸಧರ್ಮಿಯಾದ ವಿನಯಸೇನರ ಪ್ರೇರಣೆ ಯಿಂದಾಗಿ ಇದನ್ನು ರಚನೆ ಮಾಡಿದ್ದಾರೆ. ಮತ್ತು ಇದು ಇವರ ಮೊದಲ ರಚನೆ ಯಾಗಿದೆಯೆಂದು ಕಂಡುಬರುತ್ತದೆ. ಯೋಗಿರಾಟ್ ಪಂಡಿತಾಚಾರ್ಯರು (ವಿ. ಸಂ. ೧೫ನೇ ಶತಮಾನದಲ್ಲಿ) ಇದಕ್ಕೆ ಸಂಸ್ಕೃತದಲ್ಲಿ ಟೀಕೆ ಬರೆದಿದ್ದಾರೆ.

೨. ಮಹಾಪುರಾಣ–ಆದಿಪುರಾಣ–ಸ್ವಾಮಿಜಿನಸೇನರು 'ತ್ರಿಷಷ್ಟಿ(೬೩) ಪುರುಷಾ ಶ್ರಿತವಾದ ಪುರಾಣ್ವನ್ನು ಸಂಗ್ರಹಿಸುವೆನು, ಎಂದು ಹೇಳಿ, ಬಳಿಕ ತೀರ್ಥಂಕರರೇ ಮೊದಲಾದ ಮಹಾಪುರುಷರ ಸಮಬಂಧವುಳ್ಳದ್ದಾಗಿರುವುದರಿಂದ, ಶ್ರೇಯಸ್ಸನ್ನು ನಿರೂಪಣೆ ಮಾಡುವುದರಿಂದ ಇದನ್ನು ಮಹಾಪುರಾಣ ಎಂಬುದಾಗಿ ಮಹರ್ಷಿಗಳು ಹೇಳಿದ್ದಾರೆ' ಎಂದು ಹೇಳಿ ಇದರ 'ಮಹಾಪುರಾಣ' ಎಂಬ ಹೆಸರಿನ ಸಾರ್ಥಕತೆಯನ್ನು ವಿವರಿಸಿದ್ದಾರೆ. ಇದು 'ಆರ್ಷಧರ್ಮಶಾಸ್ತ್ರ,ಇತಿಹಾಸ,ಇತಿವೃತ್ತ ಐತಿಹ್ಯ, ಆಮ್ನಾಯ ಮತ್ತು ಇತಿಹಾಸವೆಂಬ ಖ್ಯಾತಿಯ ಪುರಾಣ, ಸುಭಾಷಿತಮಹಾರತ್ನಗಳಿಂದ ತುಂಬಿ ದುದು' ಎಂದು ಹೇಳಿ ಇದರ ಮಹತ್ವವನ್ನು ಸ್ಪಷ್ಟಪಡಿಸಿದ್ದಾರೆ. 'ಶಬ್ದಾಲಂಕಾರ ಮತ್ತು ಉಪಮಾದಿ ಅರ್ಥಾಲಂಕಾರಗಳಿಂದ ತುಂಬಿದುದು ಶೃಂಗಾರಾದಿ ರಸ ವಾಹಿನಿಯೂ, ಪ್ರಸನ್ನತಾಗುಣವುಳ್ಳದೂ ಅನ್ಯ ಕವಿಗಳ ರಚನೆಯ ಪ್ರಯೋಗಗಳ ಉಚ್ಛಿಷ್ಯವಿಲ್ಲದುದೂ  ಆದ ಸತ್ಪುರುಷರ ಕಾವ್ಯವು  ಸರಸ್ವತಿಯ ಮುಖದಂತಿರುವುದು' ಎಂದು ಶ್ರೇಷ್ಠಕಾವ್ಯದ ಲಕ್ಷಣವನ್ನು ಹೇಳಿದ್ದಾರೆ. 'ಮಹಾಪುರಾಣ ಸಂಬಂಧ ವುಳ್ಳದೂ, ಮಹಾನ್ ನಾಯಕರ ಜೀವನಚಿತ್ರವುಳ್ಳದೂ ಧರ್ಮ ಅರ್ಥ ಮತ್ತು ಕಾಮ ತ್ರಿವರ್ಗಗಳ ಹಾಗೂ ಇವುಗಳ ಫಲವಾದ ಐಹಿಕ ಸುಖ ಮತ್ತು (ಧರ್ಮ) ಪಾರಮಾರ್ಥಿಸುಖದ ವರ್ಣನೆಯುಳ್ಳದೂ ಆದಂತುಹುದು ಮಹಾಕಾವ್ಯವೆನಿಸುವುದು' ಎಂದು ಹೇಳಿದ್ದಾರೆ. ಈ ಪ್ರಕಾರವಾಗಿ

ಸ್ವಾಮಿ ಜಿನಸೇನರು ತಮ್ಮ ಈ ಕೃತಿಯು ಮಹಾಪುರಾಣವಾಗಿದ್ದು ಧರ್ಮ್ಯ–ಶಸ್ಯ–ಯಶಸ್ಯವಾದ ಮಹಾಕಾವ್ಯವೂ ಆಗಿದೆಯೆಂದು ಸ್ಪಷ್ಟಪಡಿಸಿದ್ದಾರೆ.

ಸ್ವಾಮಿ ಜಿನಸೇನರು ಅರವತ್ತುಮೂರು ಶಲಾಕಾಪುರುಷರೆಲ್ಲರ ಚರಿತ್ರೆಯನ್ನು ನಿರೂ ಪಿಸುವ ಉದ್ದೇಶದಿಂದ ಮಹಾಪುರಾಣದ ರಚನೆಯನ್ನು ಆರಂಭಿಸಿದ್ದಾರೆ. ಆದರೆ ಇದು ಪೂರ್ಣವಾಗುವ ಮುಂಚಿತವಾಗಿಯೇ ಅವರು ಮೃತ್ಯು ಹೊಂದಿರುವುದಾಗಿ ಅಪೂರ್ಣವಾಗಿ ಉಳಿಯಿತು. ಪ್ರಾರಂಭದ 'ಶ್ರೀಮತೇ ಸಕಲಜ್ಞಾನ . . .' ಮಂಗಲ ಶ್ಲೋಕದ ರಚನೆಯಲ್ಲಿ ಅಗ್ನಿಗಣ ಬಂದಿತಾಗಿ ಕೃತಿಯು ಪೂರ್ಣವಾಗುವ ಮುನ್ನವೇ ತಮ್ಮ ಅವಸಾನ ಪ್ರಾಪ್ತವಾವುದೆಂಬುದನ್ನು ಸ್ವಾಮಿ ಜಿನಸೇನರು ತಿಳಿದಿದ್ದರು. ಇದರಂತೆಯೇ ತಮ್ಮ ಅವಸಾನ ಸನ್ನಿಹಿತವಾದಾಗ ತಮ್ಮ ಅತ್ಯಂತ ಸಮರ್ಥ ಶಿಷ್ಯರಾದ ಗುಣಭದ್ರಸ್ವಾಮಿಯವರಿಗೆ ಕೃತಿಯನ್ನು ಪೂರ್ಣಗೊಳಿಸುವಂತೆ ಆದೇಶ ವಿತ್ತರೆಂಬ ಪರಂಪರಾಗತ ಕಥನವಿದೆ.

ಮಹಾಪುರಾಣವು, ಆದಿಪುರಾಣ ಮತ್ತು ಉತ್ತರ ಪುರಾಣಗಳೆಂಬ ಎರಡು ಭಾಗ ಗಳನ್ನೊಳಗೊಂಡಿದೆ. ಆದಿಪುರಾಣದಲ್ಲಿ ಪ್ರಥಮ ತೀರ್ಥಂಕರ ಆದೀಶ್ವರ ಋಷಭ ನಾಥನ ಮತ್ತು ಪ್ರಥಮ ಚಕ್ರವರ್ತಿ ಭರತ ಚಕ್ರವರ್ತಿಯ ಚರಿತ್ರೆಗಳಿವೆ. ಉತ್ತರ ಪುರಾಣದಲ್ಲಿ ಇನ್ನುಳಿದ ಇಪ್ಪತ್ತಮೂರು ತೀರ್ಥಂಕರರು ಹನ್ನೊಂದು ಚಕ್ರವರ್ತಿಗಳ, ಒಂಭತ್ತು ಅರ್ಧಚಕ್ರಿಗಳ (ವಾಸುದೇವರು)ಒಂಭತ್ತು ಬಲಭದ್ರರ ಮತ್ತು ಒಂಭತ್ತು ಪ್ರತಿವಾಸುದೇವರ ಚರಿತ್ರೆಗಳಿವೆ. ಆದಿಪುರಾಣದಲ್ಲಿ ೪೭ ಪರ್ವ(ಅಧ್ಯಾಯ)ಗಳಿದ್ದು ೧೨ ಸಾವಿರಶ್ಲೋಕಗಳಿವೆ. ಇದರಲ್ಲಿ ೪೨ ಪರ್ವ ಮತ್ತು ೪೩ನೇ ಪರ್ವದ ೩ನೇ ಶ್ಲೋಕದ ಪರ್ಯಂತದ್ದು ಸ್ವಾಮಿಜಿನಸೇನರ ರಚನೆಯಾಗಿದೆ. ಇಲ್ಲಿಂದ ಮುಂದೆ ೪೭ನೇ ಪರ್ವದ ಕೊನೆಯವರೆಗಿನ ೧೬೨೦ ಶ್ಲೋಕಗಳನ್ನು ಸ್ವಾಮಿಜಿನಸೇನರ ಶಿಷ್ಯ ಗುಣಭದ್ರಸ್ವಾಮಿಯವರು ರಚಿಸಿದ್ದಾರೆ.

ಈ ಪ್ರಕಾರವಾಗಿ ಆದಿಪುರಾಣದ ೧೦೩೮೦ ಶ್ಲೋಕಗಳ ರಚನೆ ಸ್ವಾಮಿ ಜಿನಸೇನ ರಿಂದಾಗಿದೆ. ಉತ್ತರ ಪುರಾಣವು ಪೂರ್ಣವಾಗಿ ಗುಣಭದ್ರರ ರಚನೆಯಾಗಿದೆ.

ಸ್ವಾಮಿ ಜಿನಸೇನರಚಿತ ಆದಿಪುರಾಣದ ಬಗ್ಗೆ ಗುಣಭದ್ರರು ಹೇಳಿರುವ ಮಾತು ಗಳನ್ನು ಪ್ರಸ್ತುತ ಪ್ರಸಂಗದಲ್ಲಿ ಹೇಳುವುದು ಉಚಿತವಿದೆ.[೩೮]

"ಎಲ್ಲ ಛಂಧಸ್ಸುಗಳಿಗೆ ಮತ್ತು ಅಲಂಕಾರಗಳಿಗೆ (ದೃಷ್ಟಾಂತ)ಲಕ್ಷ್ಯವಾಗಿರುವ ಸೂಕ್ಷ್ಮವಾದ ಅರ್ಥವುಳ್ಳ, ಗೂಢಪದಗಳ ರಚನೆಯುಳ್ಳ, ಉತ್ತಮ ವರ್ಣನೆಗಳ ಸಾರ ವಾಗಿರುವ, ಸರ್ವ(ವ್ಯಾಕರಣವೇ ಮೊದಲಾದ) ಶಾಸ್ತ್ರಗಳ ವಿಷಯಗಳನ್ನೊಳಗೊಂಡಿ ರುವ ಬೇರೆ ಕಾವ್ಯಗಳನ್ನು ಗಣನೆಗೆ ಬಾರದ್ಮತೆ ಮಾಡಿರುವ, (ಶ್ರವಣ) ಕೇಳಲು ಯೋಗ್ಯವಾದ, ವ್ಯುತ್ಪನ್ನಮತಿಗಳಿಂದ ಸ್ವೀಕರಿಸಬೇಕಾದ ಕವಿಗಳೆಂದು ಮಿಥ್ಯಾಭಿ ಮಾನ ಹೊಂದಿದವರ ದರ್ಪವನ್ನಡಗಿಸಿರುವ, ಅತಿಲಲಿತವಾದ, ಕವಿಪರಮೇಶ್ವರ ನಿಂದ ನಿರೂಪಿಸಲ್ಪಟ್ಟಿರುವ ಗದ್ಯಕಥೆಯನ್ನು ಮಾತೃಕೆಯಾಗಿ ಹೊಂದಿದ ಪುರುದೇವನ (ಋಷಭತೀರ್ಥಂಕರನ) ಚರಿತೆಯನ್ನು ಸಿದ್ದಾಂತದ ಉಪನಿಬಂಧನ (ವ್ಯಾಖ್ಯಾನ) ಕರ್ತೃವಾದ ಸ್ವಾಮಿ ಜಿನಸೇನರು ವಿನಯಪೂರ್ವಕ(ಅಚಿರಾತ್) ಸ್ವಲ್ಪಕಾಲದಲ್ಲಿಯೇ ಹೇಳಿದರು (ರಚಿಸಿದರು)"

ಈ ಆದಿಪುರಾಣದ ಬಗ್ಗೆ ಆಧುನಿಕ ವಿದ್ವಾಂಸರಾದ ಪ್ರೊ. ಕೆ. ಬಿ. ಪಾಠಕ್ ಅವರ ವಿಮರ್ಶಾಯುತ ಅಭಿಪ್ರಾಯವು ಪ್ರಸ್ತುತ ಪ್ರಸಂಗದಲ್ಲಿ ಉಲ್ಲೇಖಾರ್ಹವಾಗಿದೆ.[೩೯]

"ಮಾನ್ಯ ಪ್ರೊ.ಕೆ. ಬಿ.ಪಾಠಕ್ ಅವರು ಸಂಸ್ಕೃತ ಸಾಹಿತ್ಯವನ್ನಾಧರಿಸಿ ಪ್ರಬಂಧ ವೊಂದನ್ನು ಮಂಡನೆ ಮಾಡಿದ ಸಂದರ್ಭದಲ್ಲಿ ಹೀಗೆ ಹೇಳಿದ್ದಾರೆ: 'ಭಾರತ ದೇಶದ ಕವಿಗಳಲ್ಲಿ ಪ್ರಥಮ ಸ್ಥಾನವು ಏಕಮತರೀತಿಯದಾದ  ಎಲ್ಲರ ಅಭಿಮತದ್ಮತೆ ಕಾಲಿ ದಾಸನಿಗೆಸಂದಿದೆ. ಹೀಗಿದ್ದರೂ, ಮೇಘದೂತದ ಕರ್ತೃ ಕಾಳಿದಾಸನಿಗಿಂತ ಜಿನ ಸೇನನು ಅತಿಶಯಿತ ಮತಿಪ್ರಕರ್ಷವುಳ್ಳವನಾಗಿದ್ದನೆಂಬ ಪರಿಗಣನೆಗೆ ಅಧಿಕೃತ ನಾಗಿದ್ದಾನೆ. "ಡಾ. ಎಂ. ಕೃಷ್ಣಮಾಚಾರುಯರ್ ಅವರೂ ಕೂಡ–'ಜಿನಸೇನನ ಕವಿತೆಯು(ಕಾವ್ಯವು)ಉತ್ತಮದರ್ಜೆಯದ್ದಾಗಿದೆಮತ್ತು ಇದು ಬಃವಂಶ ಕಾಲಿದಾಸನ ನಿರೂಪಣೆಯ ಸೌಂದರ್ಯವನ್ನು ಮೀರಿಸುವುದೆಂದು ಒಂದು ಪಕ್ಷ ಹೇಳಲಾಗ ದಿದ್ದರೂ ಅದಕ್ಕೆ ಸಮಾನವಾದುದಾಗಿದೆ'–ಎಂದು ಬರೆದಿದ್ದಾರ.[೪೦]

ಸ್ವಾಮಿ ಜಿನಸೇನರ ಪ್ರಶಸ್ತಿ : ಸ್ವಾಮಿ ಜಿನಸೇನರ ಪಾರ್ಶ್ವಾಭ್ಯುಯ ಖಂಡ ಕಾವ್ಯದ ರಚನೆಯ ಬಗ್ಗೆ ಹಿಂದೆ ಹೇಳಿದೆ.ಪ್ರಾಯಿಕವಾಗಿ ಈ ಕೃತಿಯನ್ನು ರಚಿಸಿದ ಸಮಯದಲ್ಲಿ ಇವರು ಹೆಚ್ಚೆಂದ ಹೆಚ್ಚು ಇಪ್ಪತ್ತರಿಂದ ಇಪ್ಪತ್ತೈದು ವರ್ಷಗಳ ವಯೋಮಾನದವರಾಗಿದ್ದಿರಬೇಕು. ಈ ಕಿರಿಯ ವಯಸ್ಸಿನಲ್ಲಿಯೇ ಇವರು ಮುನಿ ಸಮಾಜದಲ್ಲಿ ವಿಶೇಷ ಖ್ಯಾತಿವಂತರಾಗಿದ್ದು ಸ್ವಾಮಿ ಎಂಬ ಗೌರವಭಾವದ ಅಭಿದಾನ ಹೊಂದಿದ್ದರೆಂದು ತಿಳಿದು ಬರುತ್ತದೆ." ಪುನ್ನಾಟ ಜಿನಸೇನರು ಇವರ ಪಾರ್ಶಾಭ್ಯು ದಯದ ಗುಣಪ್ರಶಂಸೆ ಮಾಡುವಲ್ಲಿ :

ಯಾಮಿತಾಭ್ಯುದಯೇ ಪಾರ್ಶ್ವೇ ಜಿನೇಂದಗುಣಸಂಸ್ತುತಿಃ ।

ಸ್ವಾಮಿನೋ ಜಿನಸೇನಸ್ಯ ಕೀರ್ತಿಂ ಸಂಕೀರ್ತಯತ್ಯಸೌ ॥ (ಪ್ರಥಮ ಸರ್ಗ)

'ಪಾರ್ಶ್ವಾಭ್ಯುದಯದಲ್ಲಿ ಮಾಡಲಾಗಿರುವ ಅಮಿತವಾದ ಜಿನೇಂದ್ರ ಗುಣಸಂ ಸ್ತುತಿಯು ಸ್ವಾಮಿ ಜಿನಸೇನನ ಕೀರ್ತಿಯನ್ನು ಅತಿಶಯವಾದುದನ್ನಾಗಿ ಮಾಡಿದೆ ಎಂದು ಹೇಳಿದ್ದಾರೆ'. ಇಲ್ಲಿ ಜಿನಸೇನರನ್ನು 'ಸ್ವಾಮಿ' ಎಂಬ ಗೌರವಾಭಿಧಾನದಿಂದ ನಿರ್ದೇಶಿಸಿರುವುದನ್ನು ಗಮನಿಸಬಹುದು.

ಜಯಧವಲಾದ ಅಂತಿಮ ಪ್ರಶಸ್ತಿಯಲ್ಲಿ ಸ್ವಾಮಿ ಜಿನಸೇನರು ತಮ್ಮ ಬಗ್ಗೆ ಪ್ರಸ್ತುತ ಪಡಿಸಿರುವ ಒಂದೆರಡು ಅಂಶಗಳಿಂದ ಅವರ ಜೀವನ ಸಂಗತಿಯ ಮೇಲೆ ಸ್ವಲ್ಪ ಮಾತ್ರದ ಬೆಳಕು ಬೀಳುತ್ತದೆ. ಇವರು ಶೈಶವದಲ್ಲಿ ಕಿವಿಚುಚ್ಚುವ ಮುನ್ನವೇ ಮುನಿಕುಲದಲ್ಲಿ ಪೋಷಣೆ ಪಡೆದಿದ್ದಾರೆ. ಬಾಲ್ಯದಿಂದಲೂ ಅಖಂಡಿತವಾಗಿ ಬ್ರಹ್ಮ ಚರ್ಯ ಪಾಲಿಸಿದ್ದಾರೆ. (ಆದಾಗ್ಯೂಸರಸ್ವತಿಯು ಅನನ್ಯ ಶರಣಳಾಗಿಉಚರಿಸಿದಳು) ಧೀಶಕ್ತಿ, ಶಮ ಮತ್ತು ವಿನಯಗಳು ಇವರ ಸ್ವಾಭಾವಿಕ ಗುಣಗಳಾಗಿದ್ದುವು. ದೈಹಿಕವಾಗಿ ಇವರು ಕೃಶರಾಗಿದ್ದರು. ಆದರೆ ತಪೋಗುಣದಿಂದ ಕೃಶರಾಗಿರಲಿಲ್ಲ. ನಿಜವೆಂದರೆ ಶಾರೀರಿಕ ಕೃಶತ್ವವು ಕೃಶತ್ವವವಲ್ಲ, ಗುಣಗಳಿಂದ ಕೃಶನಾದವನೇ ಕೃಶನು. ಹಲಗೆಯನ್ನು ಹಿಡಿದವನಲ್ಲ. ಅವಸರವಾಗಿ ಚಿಂತನೆ ಮಾಡಿದವನೂ ಅಲ್ಲ, ಹಾಗಾದಾಗ್ಯೂ ಅಧ್ಯಾತ್ಮವಿದ್ಯಾಬ್ಧಿಯ ಪಾರಂಗತನಾದನು. ಜ್ಞಾನಾರಾಧನೆಯಲ್ಲಿಯೇ ಕಾಲಕಳೆದ ಇವ ರನ್ನು ತತ್ತ್ವದರ್ಶಿಗಳು ಜ್ಞಾನಮಯ ಪಿಂಡವೆನ್ನುತ್ತಿದ್ದರು.[೪೧]

ವೀರಸೇನರಂತೆ ಜಿನಸೇನರು ತಮ್ಮ ಅಸೀಮವಾದ ಗುರುಭಕ್ತಿಯನ್ನು ವ್ಯಕ್ತಪಡಿಸಿ ದ್ದಾರೆ. ಪುನಃ ಇವರ ಬಗ್ಗೆ ಇವರ ಪ್ರಧಾನ ಶಿಷ್ಯರಾದ ಗುಣಭದ್ರರು ಅಸೀಮವಾದ ಗುರು ಭಕ್ತಿ ವ್ಯಕ್ತಪಡಿಸಿದ್ದಾರೆ.

ಈ ರೀತಿಯಾದ ಗುರುಭಕ್ತಿ ವ್ಯಕ್ತಪಡಿಸುವ ಪದ್ಧತಿಯು ವೀರಸೇನರಿಂದ ಪ್ರಾರಂಭವಾಗಿ ಮುಂದುವರಿದುಕೊಂಡು ಬಂದಿದೆ ಎಂದು ಹೇಳಬಹುದಾಗಿದೆ. ವೀರಸೇನ, ಜಿನಸೇನ ಗುಣಭದ್ರರ ಗುರುಶಿಷ್ಯಾನುಕ್ರಮವು ಒಂದು ದೃಷ್ಟಿಯಿಂದ ಅಪೂರ್ವರೀತಿಯದಾಗಿದೆ. ಈ ಮೂವರು ಅನುಬದ್ಧರೀತಿಯಿಂದ ಆಧ್ಯಾತ್ಮಿಕ ಸಾಹಿತ್ಯ ಹಾಗೂ ಪುರಾಣ ಕಾವ್ಯ ಸಾಹಿತ್ಯ ರಚನೆ ಮಾಡಿದ್ದಾರೆ. ಈ ಮೂವರನ್ನು 'ರತ್ನತ್ರಯ ಮಪಶ್ಚಿಮಂ' ಎಂದು ಹೇಳಿದಲ್ಲಿ ಅತಿಶಯೋಕ್ತಿಯಾಗುವುದಿಲ್ಲ.

ಸ್ವಾಮಿ ಜಿನಸೇನರು ತಮ್ಮ ಗುರು ವೀರಸೇನ ಸ್ವಾಮಿಯವರ ಬಗ್ಗೆ ಜಯಧವಲಾದ ಅಂತಿಮ ಪ್ರಶಸ್ತಿಯಲ್ಲಿ ಹಾಗೂ ಮಹಾಪುರಾಣದ ಆರಂಭದಲ್ಲಿ ಮಾಡಿರುವ ಗುಣ ಸಂಕೀರ್ತನದ ಸಂಗತಿಯನ್ನು ಹಿಂದೆ ಶ್ರುತಪಡಿಸಿದೆ. ವೀರಸೇನರನ್ನಲ್ಲದೆ ಮಹಾ ಪುರಾಣ ಪ್ರಾರಂಭದಲ್ಲಿ ಜಯಸೇನ ಎಂಬ ಹೆಸರಿನ ಮತ್ತೂ ಒಬ್ಬ ಗುರುವಿನ ಸಂಸ್ತುತಿ ಮಾಡಿದ್ದಾರೆ.

ಜನ್ಮಭೂಮಿಃ ತಪೋಲಕ್ಷ್ಮ್ಯಾಃ ಶ್ರುತ ಪ್ರಶಮಯೋರ್ನಿಧಿಃ ।
ಜಯಸೇನಗುರುಃ ಪಾತು ಬುಧವೃಂದಾಗ್ರಣೀಃ ಸನಃ ॥ ೫೯ ॥ (ಪರ್ವ ೧)

ತಪಸ್ಸೆಂಬ ಲಕ್ಷ್ಮೀಯ ಜನ್ಮಭೂಮಿಯೂ, ಶ್ರುತ (ಆಗಮ) ಮತ್ತು ಪ್ರಶಮ ಭಾವದ ನಿಧಿಯೂ ಬುಧ ವೃಂದದ ಅಗ್ರಣಿಯೂ ಆದ ಆ ಜಯಸೇನ ಗುರುವು ನಮ್ಮನ್ನು ರಕ್ಷಿಸಲಿ. ಇಲ್ಲಿ ಪ್ರಸ್ತುತರಾಗಿರುವ ಜಯಸೇನ ಗುರುವು ಜಿನಸೇನಸ್ವಾಮಿ ಯವರ ದೀಕ್ಷಾಗುರು ಇಲ್ಲವೆ ಪ್ರಾರಂಭಿಕ ವಿದ್ಯಾಗುರುವಾದರೂ ಆಗಿದ್ದಿರಬೇಕೆಂದು ಪ್ರಾಯಿಕವಾಗಿ ತಿಳಿಯಬಹುದಾಗಿದೆ.

ಪುನ್ನಾಟ ಜಿನಸೇನರು ಹರಿವಂಶ ಪುರಾಣದಲ್ಲಿ ತಮ್ಮ ಪೂರ್ವಾನ್ವಯದ ಗುರು ಸಂತತಿಯನ್ನು ನಿರೂಪಿಸುವಲ್ಲಿ ಈ ಮುಂದಿನಂತೆ ಹೇಳಿದ್ದಾರೆ.

ಅಖಂಡಷಟ್ ಖಂಡಮಖಂಡಿತಸ್ಥಿತಿಃ।
ಸಮಸ್ತಸಿದ್ಧಾಂತಮಧತ್ತ ಯೋರ್ಥತಃ ।
ದಧಾರ ಕರ್ಮಪ್ರಕೃತಿಂ ಶ್ರುತಿಂ ಚ ಯೋ ।

ಜಿತಾಕ್ಷವೃತ್ತಿರ್ಜಯಸೇನ ಸದ್ಗುರುಃ ॥

'ಇಂದ್ರಿಯಗಳನ್ನುಜಿಯಿಸಿದ ಜಯಸೇನ ವರಗುರುವು ಸ್ವಲ್ಪವೂ ಚ್ಯುತಿಯಿಲ್ಲ ದಂತೆ ಷಟ್ ಖಂಡ ಆಗಮವನ್ನು ಹಾಗೂ ಪರಿಪೂರ್ಣವಾಗಿ ಸಿದ್ಧಾಂತವನ್ನು ಅರ್ಥ ರೂಪದಿಂದ ಧಾರಣ ಮಾಡಿದ್ದನು ತಿಳಿಡಿದ್ದನು. ಕರ್ಮ ಪ್ರಕೃತಿ ಶ್ರುತವನ್ನೂ ಧಾರಣ ಮಾಡಿದ್ದನು.'

ಈ ಜಯಸೇನರ ಶಿಷ್ಯ ಮಿತಸೇನ ಗುರು, ಇವರ ಹಿರಿಯ ಧರ್ಮಭ್ರಾತೃಕೀರ್ತಿಷೇಣರು, ಇವರ ಶಿಷ್ಯ ಹರಿವಂಶ ರಚನನಾಕಾರ ಪುನ್ನಾಟ ಜಿನಸೇನರು. ಪುನ್ನಾಟ ಜಿನಸೆನರಿಂದ ಪ್ರಸ್ತುತರಾಗಿರುವ ಜಯಸೇನರು ಸ್ವಾಮಿ ಜಿನಸೇನರಿಂದ ಪ್ರಸ್ತುತ ರಾಗಿರುವ ಜಯಸೇನರಿಂದ ಅಭಿನ್ನರೆಂದು ತಿಳಿಯಬಹುದಾಗಿದೆ. ಪು. ಜಿನಸೇನರಿಂದ ಸ್ವಾಮಿ ಜಿನಸೇನರು ನಾಲ್ಕಾರು ವರ್ಷ ಕಿರಿಯರಿರಬಹುದು. ಆದ್ದರಿಂದ ಇವರು ತಮ್ಮ ಕಿರಿಯ ವಯಸ್ಸಿನಲ್ಲಿ ಜಯಸೇನ ಗುರುವಿನ ಬಳಿ ಅಧ್ಯಯನ ನಡೆಸಿರಬಹುದಾದ ಸಂಭವವಿದೆ. ಹಾಗಲ್ಲವಾದಲಿ ಈ ಗುರುವಿನಿಂದ ಮುನಿದೀಕ್ಷೆಯನ್ನಾದರೂ ಪಡೆದಿರ ಬಹುದಾಗಿದೆ. ಸ್ವಾಮಿ ಜಿನಸೇನರು ಮಹಾಪುರಾಣದ ರಚನೆಯನ್ನು ಪ್ರಾರಂಭ ಮಾಡುವ ಸಮಯಕ್ಕೆ ಈ ಜಯಸೇನ ಗುರುವು ಜೀವಿಸಿದ್ದಿರಲಿಲ್ಲವೆಂದು ಹೇಳ ಬಹುದಾಗಿದೆ. ಈ ಕಾರಣದುಂದಲೇ 'ಆ ಜಯಸೇನ ಗುರುವು ನಮ್ಮನ್ನು ರಕ್ಷಿಸಲಿ'ಎಂದು ಹೇಳಿದ್ದಾರೆಂದು ತಿಳಿಯಬೇಕಾಗಿದೆ. ಜಯಸೇನರು ೬೦೦೦ ಗ್ರಂಥ ಪ್ರಮಾಣದ 'ವಿಜಯಧವಲಾ' ಗ್ರಂಥ ರಚನೆ ಮಾಡಿದರೆಂಬ ಪೂಜ್ಯಪಾದ ಚರಿತೆಯ ಹೇಳಿಕೆ ಪ್ರಸಕ್ತ ಪ್ರಸಂಗದಲ್ಲಿ ಗಮನಾರ್ಹವಾದುದಾಗಿದೆ. ಸ್ವಾಮಿ ಜಿನಸೇನರಿಗೆ ದಶರಥ ಗುರು, ವಿನಯಸೇನ, ಶ್ರೀಪಾಲ, ಪದ್ಮಸೇನ ಮತ್ತು ದೇವಸೇನ ಎಂಬುವರು ಧರ್ಮಭ್ರಾತೃಗಳಾಗಿದ್ದರೆಂದು ಮಾನ್ಯ ನಾಥೂರಾಂ ಪ್ರೇಮಿಯವರು ಶೋಧನಾಪೂರ್ವಕ ನಿರ್ಣಯಿಸಿ ಹೇಳಿದ್ದಾರೆ.[೪೨] ಗುಣಭದ್ರಸ್ವಾಮಿಯವರು ಬಹು ಗೌರವಾದರ ದೊಡನೆ ತಮ್ಮಗುರು ಸ್ವಾಮಿ ಜಿನಸೇನರ ಕವಿತಾ ಶ್ರೇಷ್ಠ ವಿದ್ಯಾಸಂಪನ್ನತೆ ಮತ್ತು ಲೋಕಪೂಜ್ಯತೆಗಳ ವರ್ಣನೆಯೊಡನೆ ಗುಣಸಂಸ್ತುತಿ ಮಾಡಿದ್ದಾರೆ. '(ಜಿನಸೇನರಿಂದ ರಚಿತವಾಗಿರುವ) ಈ ಪೂರ್ವಾರ್ಧವೇ ಕಬ್ಬಿನಂತೆ ರಸಾವಹವಾಗಿದೆ. ನನ್ನ ಮಾತು ಸ್ವಾದುವಿದೆಯಲ್ಲಿ ಅದು ಗುರುಗಳ ಮಹಿಮೆಯೇ ಆಗಿದೆ. ಹೃದಯದಿಂದ ನನ್ನ ಮಾತುಗಳು ಹೊರಬೀಳುತ್ತವೆ. ಹೃದಯದಲ್ಲಿ ನನ್ನ

ಗುರುಗಳಾಗಿದ್ದಾರೆ. ಅಲ್ಲಿ ಅವು ಗಳನ್ನು ಸಂಸ್ಕರಿಸುತ್ತಾರೆ. ಆದ್ದರಿಂದ ನನಗೆ ಈ ಬಗ್ಗೆ ಬಳಲಿಕೆಯಿಲ್ಲ’[೪೩].

“ಹಿಮಪರ್ವತದಿಂದ ದೇವಗಂಗೆ ಪ್ರವಾಹ ಹರಿದಂತೆ, ಸರ್ವಜ್ಞ (ತೀರ್ಥಂಕರ) ನಿಂದ ಸರ್ವಶಾಸ್ತ್ರಗಳ ಮೂರ್ತ ಸ್ವರೂಪದ ದಿವ್ಯಧ್ವನಿ ಮೂಡಿದಂತೆ ಉದಯಗಿರಿಯ ತಪ್ಪಲಿನಿಂದ ಪ್ರಕಾಶಮಾನನಾದ ಸೂರ್ಯನು ಉದಯಿಸಿದಂತೆ ಈ ವೀರಸೇನರಿಂದ ಮುನಿಜಿನಸೇನನು ಉದಯಿಸಿದನು.

ಶೋಭಾಯಮಾನವಾದ ಉಗುರುಗಳ ಕಿರಣ ಸಮೂಹದಿಂದ ಪ್ರಸರಣಗೊಂಡ ಧಾರೆಯೊಳಗೆ ಮೂಡಿದ ಪಾದಗಳೆಂಬ ತಾವರೆಗಳ ಪರಾಗದಿಂದ ಹಳದಿ ಬಣ್ಣ ಹೊಂದಿ ನೂತನವಾದ ಕಾಂತಿಹೊಂದಿದ ರತ್ನಗಳುಳ್ಳ ಕಿರೀಟ ಧರಿಸಿದ ಅಮೋಘ ವರ್ಷನೃಪತಿಯು, ‘ಈಗ ನಾನು ಅನುಪಮವಾಗಿ ಪವಿತ್ರಗೊಂಡೆನು’ಎಂದು ನೆನಪಿಸಿ ಕೊಳ್ಳುತ್ತಿದ್ದನೋ ಆ ಶ್ರೀಮಂತ ಜಿನಸೇನ ಭಗವತ್ಪಾದನು ಜಗನ್ಮಂಗಲನು. (ಅಮೋಘವರ್ಷನು ಜಿನಸೇನರ ಪಾದಗಳಿಗೆ ನಮಸ್ಕರಿಸಿ ತಾನು ಪವಿತ್ರನಾದೆನೆಂದು ತಿಳಿಯುತ್ತಿದ್ದನು ಎಂದಭಿಪ್ರಾಯವು)

ದಿಗಂಬರ ಪಂಥದ ಜೈನರಲ್ಲಿ ಸ್ವಾಮಿ ಜಿನಸೇನರ ಪರಿಚಯವು ಇತರ ಎಲ್ಲ ಆಚಾರ್ಯರಿಗಿಂತ ಹೆಚ್ಚಿನದಾಗಿದೆಯೆಂದು ಹೇಳಿದಲ್ಲಿ ತಪ್ಪಾಗುವುದಿಲ್ಲ. ಸಿದ್ಧಾಂತ ಸಾಹಿತ್ಯ ರಚನೆಯಲ್ಲಿ ಯತಿವೃಷಭರು ಕುಂದಕುಂದರು, ವೀರಸೇನರು ಇಂತಹ ಮತ್ತಿತರ ಅನೇಕ ಆಚಾರ್ಯರು ಇವರಿಗಿಂತ ಔನ್ನತ್ಯ ಸ್ಥಾನ ಪಡೆದಿರುವರೆಂಬುದು ನಿಜ, ಆದರೆ ಸೈದ್ಧಾಂತಿಕ ಸಾಹಿತ್ಯ ರಚನಾಕಾರರಿಗಿಂತ ಪುರಾಣ,ಕಥೆ, ಕಾವ್ಯಗಳ ರಚನಾಕಾರರು ವಿದ್ವತ್ಸಮಾಜದಲ್ಲಿ ಮಾತ್ರವಲ್ಲದೆ ಸಾಧಾರಣ ಜನತೆಗೂ ಸಮೀಪ ವರ್ತಿಗಳಾಗಿ ಹೆಚ್ಚಿನದಾದ ಆಸ್ಥೆಪಡೆದು ವಿಶೇಷ ಕೀರ್ತಿಭಾಜನರಾಗಿರುವರು. ಇದ ರಂತೆ ಸ್ವಾಮಿ ಜಿನಸೇನರು ವಿಶೇಷ ಕೀರ್ತಿ ಸಂಪನ್ನರಾಗಿದ್ದಾರೆಂಬುದು ಸತ್ಯ ಸಂಗತಿ. ಇವರ ಆದಿಪುರಾಣದ ಕಾವ್ಯ ಗುಣದ ಬಗ್ಗೆ ಈ ಹಿಂದೆ ವಿವರಿಸಲಾಗಿದೆ. ಆಧುನಿಕ ವಿಮರ್ಶಕ ವಿದ್ವಾಂಸರೂ ಇದರ ಶ್ರೇಷ್ಠತೆಯನ್ನು ತೋರಿ ಶ್ಲಾಘಿಸಿದ್ದಾರೆ.ಜೈನ ಕನ್ನಡ ಕಾವ್ಯಗಳಲ್ಲಿ ಕೆಲವಕ್ಕೆ ಇದು ವಸ್ತುವನ್ನೊದಗಿಸಿದೆಯೆಂಬುದಲ್ಲದೆ

ಸಾಧಾರಣವಾಗಿ ಎಲ್ಲ ಕಾವ್ಯಗಳ  ರಚನೆಗೆ ಮಾರ್ಗದರ್ಶಿಯೂ ಆಗಿದೆ. ಇದಲ್ಲದೆ ಜೈನ ಧರ್ಮಿಯರು ಅಪಾರ ಶ್ರದ್ಧೆ ಮತ್ತು ಪೂಜ್ಯಭಾವದೊಡನೆ ನಿಮಿತ್ತ ಶಾಸ್ತ್ರರೂಪದಿಂದಲೂ ಇದರ ಉಪಯೋಗಪಡೆಯುವ ರೂಢಿ ಇದೆ. ವಿಶೇಷತಃ ವಧೂವರರ ಹೊಂದಾಣಿಕೆ ಬಗ್ಗೆ ಜಾತಕದಲ್ಲಿ ಸಂದಿಗ್ಧತೆ ಏರ್ಪಟ್ಟಲ್ಲಿ ಅಂತಿಮ ನಿರ್ಣಯಕ್ಕಾಗಿ ಈ ಪುರಾಣವನ್ನು ಪೂಜಿಸಿ ಎಳೆ ಹಾಕಿ ಶುಭಾಶುಭ ನಿರ್ಣಯ ಪಡೆಯುವ ಪದ್ಧತಿ ಇಂದಿಗೂ ಪ್ರಚಲಿತ ವಿದೆ. ಈ ಕಾರಣಗಳಿಂದ ಸ್ವಾಮಿ ಜಿನಸೇನರು ದಿಗಂಬರ ಪಂಥದ ಜೈನರ ವಿಶೇಷ ಪೂಜ್ಯಭಾವಪಡೆದು ಖ್ಯಾತಿಸಂಪನ್ನರಾಗಿದ್ದಾರೆ. ಮೇಲಾಗಿ ಭಗವಾನ್ ಮಹಾವೀರನ ದಿವ್ಯವಾಣಿಯ ವಿಶೇಷ ಭಕ್ತ್ಯಾದರವನ್ನು ಪಡೆದಿದ್ದಾರೆ.

ಕನ್ನಡಿಗರು ಕನ್ನಡ ಭಾಷೆ ಸಾಹಿತ್ಯ ಮಾತ್ರವಲ್ಲದೆ ಭಾರತ ಸಮಸ್ತದ ಭಾಷೆಗಳಾಗಿ ಪ್ರಚಲಿತವಿದ್ಧ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿಯೂ ಉತ್ತಮ ಸಾಹಿತ್ಯ ರಚನೆ ಮಾಡಿದ್ದಾರೆ. ಕನ್ನಡಿಗರ ಈ ಸಾಹಿತ್ಯದ ಯಶಸ್ಸು ಕನ್ನಡ ನೆಲಕ್ಕೆ ಮಾತ್ರ ಸೀಮಿತ ವಾಗಿರದೆ ಸಮಸ್ತ ಭಾರತದ ದಿಗ್ದೆಶೆಗಳಲ್ಲಿಯೂ ಪ್ರಸರಣಗೊಂಡಿದೆ. ಇಂತಹ ಸಾಹಿತಿ ಗಳಲ್ಲಿ ಜಿನಸೇನರು, ಈ ಮೇಲೆ ಉಲ್ಲೇಖಿಸಿರುವ ವಿಮರ್ಶಕರ ಅಭಿಮತದಂತೆ, ಭಾರತದ ಸರ್ವಶ್ರೇಷ್ಠ ಕವಿ ಕಾಳಿದಾಸನಿಗೆ ಸಮನಾದ ಕವಿವರೇಣ್ಯರಾಗಿದ್ದಾರೆಂಬ ಖ್ಯಾತಿ ಹೊಂದಿದ್ದಾರೆ. ಇವರ ಈ ಖ್ಯಾತಿ ವಿಶೇಷತಃ ಕನ್ನಡಿಗರ ಕರ್ನಾಟಕ್ಕೆ ಸಂದಿರುವ ಖ್ಯಾತಿಯಾಗಿದೆ.

## ಟಿಪ್ಪಣಿಗಳು

೧ ಈ ಪ್ರತಿಯು ಮೈಸುರು ಪ್ರಾಚ್ಯವಿದ್ಯಾ ಸಂಸ್ಥೆಯಲ್ಲಿರುವ ಕೈಬರಹದ ಕಾಗದ ಪ್ರತಿಯಿಂದ ನಕಲಾಗಿದೆ.

೨ ಪೂ. ಸೂ. ಧವಲಾ ಪ್ರಸ್ತಾವನಾ. ಪು. ೩೮.

೩ ಮೇಲಿನ ಗ್ರಂಥ ಪು. ೬೭.

೪ ಮಹಾಬಂಧ–ಪಢಮೋ ಪಯಡಿ ಬಂಧಾಹಿಯಾರೋ–ಸಂ. ಸುಮೇರುಚಂದ್ರ ದಿವಾಕರ ಶಾಸ್ತ್ರೀ ನ್ಯಾಯತೀರ್ಥ, ಬಿಎ., ಎಲ್.ಎಲ್.ಬಿ., ಸಿವನೀ. ಭಾ. ಜ್ಞಾ. ಪೀಠ ಪ್ರಕಾಶನ ೧೯೪೭ ಪ್ರಸ್ತಾವನಾ.

೫ ಮೇಲಿನ ಗ್ರಂಥ ಪ್ರಾಸ್ತಾವಿಕಂ ಕಿಂಚಿತ್ ಪು. ೧೦ ಮತ್ತು ಪ್ರಸ್ತಾವನಾ ಪು. ೧೩.

೬ ಪೂ. ಸೂ. ಧವಲಾ ಪ್ರಸ್ತಾವನಾ. ಪು. ೬೪.

೭ ಜೈ. ಸಾ. ಔರ್ ಇತಿಹಾಸ್ ಪು. ೨೩೪–೨೩೬

೮ ಇದೇ ಮೇಲಿನ ಗ್ರಂಥ ಪು. ೫೧೫, ೫೧೬.

೯ ಪೂ. ಸೂ. ಧವಲಾ ಪ್ರಸ್ತಾವನಾ. ಪು. ೩೫.

೯ಎ ಪೂ. ಸೂ. ಕ. ಪಾ. ಪ್ರಸ್ತಾವನಾ ಪು. ೧೬ ಅ.ಟಿ.೧.

೧೦ ಪೂ. ಸೂ. ಕ. ಪಾ. ಪ್ರಸ್ತಾವನಾ. ಪು. ೩೧.

೧೧ ಪೂ. ಸೂ. ಜೈ. ಸಾ. ಔರ್ ಇ. ಪು. ೪೧೫–೧೬ ಅ. ಟಿ ೫.

೧೨ ಮುಕ್ಕುಡೈ ಮಾಸಪತ್ರಿಕೆ, ಮಾರ್ಚ್ ೧೯೯೫ ಡಾ. ಏಕಾಂಬರನಾಥನ್ ಅವರ 'ರಿಸೆಂಟ್ ಲಿ ಡಿಸ್ಕವರ್ಡ್ ಜೈನ ಎಪಿಗ್ರಾಫ್ಸ ಫ್ರಂ ತೊಂಡಮಂಡಲಂ' ಪು. ೧೯–೨೦ ಇದೇ ವಿಷಯವಾಗಿ 'ಅನೇಕಾಂತ' ಪತ್ರಿಕೆಯಲ್ಲಿ (ವರ್ಷ ೨೪, ಕಿರಣ೪, ಅಕೋಬರ್ ೧೯೭೧, ಪು. ಸಂ. ೧೬೪ರಲ್ಲಿ) ಪ್ರಕಟವಾಗಿರುವ ಲೇಖನವು ಗಮನಾರ್ಹವಾಗಿದೆ.

ದ್ರಾವಿಡ ಗಣ ಮುಖ್ಯರಾದ ಹೇಲಾಚಾರ್ಯರು ತಮ್ಮ ಶಿಷ್ಯ ಕಮಲಶ್ರೀಯನ್ನು ಗ್ರಹಬಾಧಾ ಮುಕ್ತಳನ್ನಾಗಿ ಮಾಡಲು ಜ್ವಾಲಾಮಾಲಿನೀದೇವಿಯನ್ನು ಆಃವಾನಿಸಿದರು ಆಗ ದೇವಿಯು ಲೋಹಪತ್ರವೊಂದರ ಮೇಲೆ ಮಂತ್ರವೊಂದನ್ನು ಬರೆದು ಅದರ ಸಾಧನೆ ಮಾಡುವಂತೆ ಹೇಳಿದಳು. ಮತ್ತೆ ದೇವಿಯ ಆದೇಶದಂತೆ ಹೇಲಾಚಾರ್ಯರು, ಸಂಭವತಃ ಪ್ರಾಕೃತಭಾಷೆ ಯಲ್ಲಿ 'ಜ್ವಾಲಿನೀ ಮತ' ಎಂಬ ಗ್ರಂಥವನ್ನು ರಚಿಸಿದರು. ಹೇಲಾಚಾರ್ಯರಿಂದ ಆ (ಮಂತ್ರ) ಜ್ಞಾನವು ಅವರ ಶಿಷ್ಯಗಂಗ ಮುನಿ, ನೀಲಗ್ರೀವ, ಬೀಜಾವ, ಶಾಂತಿರ ಸಬ್ಬಾಆರ್ಯಿಕಾ ಮತ್ತು

ವಿರುವಟ್ಟಕ್ಷುಲ್ಲಕರಿಗೆ ಪ್ರಾಪ್ತವಾಯಿತು. ಹೀಗೆ ಕ್ರಮಾಗತ ಗುರುಪರಿಪಾಠಿ ಮತ್ತು ಅವಿಚ್ಛಿನ್ನ ಪರಂಪರೆಯಲ್ಲಿ ಬಂದ ಮಂತ್ರವಾದ ಗ್ರಂಥವನ್ನು ಕಂದರ್ಪನು ತಿಳಿದನು ಮತ್ತು ಅವನು ಗುಣನಂದಿಮಿನುಗೆ ಅದರ ವ್ಯಾಖ್ಯಾನ ಮಾಡಿದನು. ಇವರಿಬ್ಬರೂ ಗ್ರಂಥಮತ್ತು ಅರ್ಥರೂಪದಿಂದ ಇಂದ್ರನಂದಿಗೆ ವ್ಯಾಖ್ಯಾನ ಮಾಡಿದರು. ಆಗ ಇಂದ್ರ ನಂದಿಯು ಆ ಪ್ರಾಚೀನ ಕಠಿನ ಗ್ರಂಥವನ್ನು ಮನಸ್ಸಿನಲ್ಲಿ ಅವಧರಿಸಿ ಗ್ರಂಥ ಪರಿವರ್ತನದ (ಭಾಷಾ ಪರಿವರ್ತನದ ?) ಮೂಲಕ ಲಲಿತ ಆರ್ಯಾ ಮತ್ತು ಗೀತಾದಿ ಛಂದಸ್ಸುಗಳ ನಲ್ಕುವರೆ ನೂರು ಶ್ಲೋಕಗಳಲ್ಲಿ ಮಾನ್ಯ ಖೇಟ ಕಟಕದಲ್ಲಿ ರಾಷ್ಟ್ರಕೂಟ ನರೇಶ ಕೃಷ್ಣನ ರಾಜ್ಯಭಾರ ಕಾಲದಲ್ಲಿ ಶಕ. ಸಂ. ೮೬೧ರ (ಕ್ರಿ. ಶ. ೯೩೯ರ) ಅಕ್ಷಯ ತೃತೀಯಂದಂದು ರಚನೆ ಮಾಡಿ ಪೂರಯೀಸಿದರು.

ಪೊನ್ನೂರಿನ ಕನಕಗಿರಿ ಪರ್ವತದಲ್ಲಿರುವ ವಿಶಾಲ ಆದಿನಾಥ ಜಿನಾಲಯದಲ್ಲಿ ಜೈನತಿರ್ಥಂಕರರ ಮತ್ತು ಅನ್ಯ ದೇವತೆಗಳ ಮೂರ್ತಿಗಳಿವೆ. ಇವುಗಳಲ್ಲಿ ಜ್ವಾಲಾಮಾಲಿನಿಯದೂ ಒಂದು. ಇದಕ್ಕೆ ಎಂಟು ಹಸ್ತಗಳಿವೆ. ಬಲಭಾಗದ ಹಸ್ತಗಳಲ್ಲಿ ಮಂಡಲ, ಅಭಯ ಗದೆ ಮತ್ತು ತ್ರಿಶೂಲಗಳು ಹಾಗೂ ಎಡಭಾಗದ ಹಸ್ತಗಳಲ್ಲಿ ಶಂಖ,ಢಾಲ, ಕೃಪಾಣ ಮತ್ತು ಪುಸ್ತಕಗಳಿವೆ.

ಈ ಮೂರ್ತಿಯ ಆಕೃತಿಯು ಹಿಂದೂಗಳ ಮಹಾಕಾಲೀ ಮೂರ್ತಿಯೊಡನೆ ಹೋಲಿಕೆಯುಳ್ಳದ್ದಾಗಿದೆ. ಪೊನ್ನೂರಿನಿಂದ ಸುಮಾರು ಮೂರು ಮೈಲಿಗಳಷ್ಟು ದೂರದಲ್ಲಿರುವ ನೀಲಗಿರಿ ಬೆಟ್ಟದಲ್ಲಿ ಹೇಲಾಚಾರ್ಯರ ಮೂರ್ತಿ(?) ಅಂಕಿತವಿದೆ. (ನೋಡಿ ಡಾ.ಪಿ.ಬಿ.ದೇಸಾಯರ ಜೈನಿ ಜಂ. ಇನ್ ಸೌತ್ ಇಂಡಿಯಾ ಅಂಡ್ ಜೈನ ಇನ್ ಸ್ಕ್ರಿಷನ್ಸ್ ಪು. ೪೭)

ದ್ರಾವಿಡ ಗಣ ಸಮಯ ಮುಖ್ಯೋ ಜಿನಪತಿಮಾರ್ಗೋಪಚಿತ ಕ್ರಿಯಾಪೂರ್ಣಃ ।
ವ್ರತ ಸಮಿತಗುಪ್ತಿಗುಪ್ತೋ ಹೇಲಾಚಾರ್ಯೋ ಮುನಿರ್ಜಯತಿ ॥ ೧೯ ॥

ದಕ್ಷಿಣದೇಶೇ ಮಲಯೇ ಹೇಮಗ್ರಾಮೇ ಮುನಿರ್ಮಹಾನಾಸೀತ್ ।

ಹೇಲಾಚಾರ್ಯೋ ನಾಮ್ನಾ ದರ್ವಿಡಗಣಾಧೀಶ್ವರೋಧಿಮಾನ್ ॥

ತಚ್ಛಿಷ್ಯಾಕಮಲಶ್ರೀ ಶ್ರುತದೇವಿ ವಾ ಸಮಸ್ತ ಶಾಸ್ತ್ರಜ್ಞಾ।

ಸಾ ಬ್ರಹ್ಮ ರಾಕ್ಷಸೇನ ಗೃಹೀತಾ ರೌದ್ರೇಣ ಕರ್ಮವಶಾತ್ ॥

ಅಷ್ಟಶತ ಸ್ಯೈಕಷಷ್ಠಿ (೮೬೧) ಪ್ರಮಾಣ ಶಕ ಸಂವತ್ಸರೇಷ್ವತೀತೇಷು ।

ಶ್ರೀಮಾನ್ಯ ಖೇಟಕಟಕೇ ಪರ್ವಣ್ಯಕ್ಷಯ ತೃತೀಯಾಯಾಂ ।

ಶತದಲಸಹಿತ ಚತುಃ ಶತ ಪರಿಮಾಣಗ್ರಂಥ ರಚನಯಾ ಯುಕ್ತಂ ।

ಶ್ರೀಕೃಷ್ಣರಾಜರಾಜ್ಯೇ ಸಮಾಪ್ತಮೇತನ್ಮತಂ ದೇವ್ಯಾಃ ॥

ಜಯತಾದ್ದೇವೀ ಜ್ವಾಲಾಮಾಲಿನ್ಯುದ್ಯುತ್ರಿಶೂಲ–ಪಾಶ –ಝುಶ

ಕೋದಂಡ–ಕಾಂಡ–ಫಲ–ವರದ–ಚಕ್ರ ಚಿಃನೋಜ್ವಲಾಷ್ಟಭುಜಾ ॥

೧೩ ನೋಡಿ 'ಜೈನ ತೀರ್ಥದರ್ಶನ್' ಪು. ೮೨.

೧೪ ಪೂ. ಸೂ. ಧವಲಾ ಪ್ರಸ್ತಾವನೆ, ಪು. ೩೫–೩೬

೧೫ ಪೂ. ಸೂ. ದಿ. ಕ್ವಾ. ಜ. ಆಫ್. ದಿ. ಮಿಥಿಕ್ ಸೊಸ್ಯೆಟಿ ಜುಲೈ ಸೆಪ್ಟೆಂಬರ್ ೧೯೮೪ ಬೆಂಗಳೂರು ಪು. ೩೨೫–೩೩೭

೧೭ ಇಂಡಿಯನ್ ಆಂಟಿಕ್ವೆರಿ, ವಾಲ್ಯೂಂ ೨೧ ಫೆಬ್ರವರಿ ೧೮೯೨, ಪಟ್ಟಾವಲಿ 'ಸಿ' ಪು. ೬೭

೧೮ ಮಹಾಪುರಾಣ ಪರ್ವ, ೧–೫೫–೫೮.

೧೯ ಹರಿ ವಂಶ ಪುರಾಣ, ಸರ್ಗ ೧–೩೯.

೨೦ ಮಹಾಪುರಾಣ, ಪ್ರಶಸ್ತಿ ಶ್ಲೋ. ೨

೨೧ ಉದಾಹರಣೆಯಾಗಿ, ಭೂಯಸಾಮಾಚಾರ್ಯಣಾಮುಪದೇಶಾದ್ವಾ ತದವಗತೇಃ–ಅನೇಕ ಆಚಾರ್ಯರ ಉಪದೇಶದಿಂದ ಅದನ್ನು ತಿಳಿಯಬಹುದಾಗಿದೆಯಾದ್ದರಿಂದ (೧೯೭) ಪೂ. ಸೂ. ಸತ್ಪ್ರರೂಪಣಾ ಧವಲಾ ಪ್ರಸ್ತಾವನಾ ಪು. ೬೪, ಅ. ಟಿ. ೩

೨೨ ಉದಾಹರಣೆಯಾಗಿ 'ಋಜುಂ ಪ್ರಗುಣಂ ಸೂತ್ರಯತಿ ಸೂಚಯತೀತಿ ತತ್ಸಿದ್ಧೆ ಪೂ. ಸೂ. ಸತ್ಪ್ರರೂಪಣಾ ೧, ೧, ೧, ಪು. ೮೬)

ಋಜುಂ ಪ್ರಗುಣಂ ಸೂತ್ರಯತಿ ತಂತ್ರಯತಿ ಇತಿ ಋಜು ಸೂತ್ರಃ (ಸ. ಸಿ. ೧, ೩೩)

ನಾನಾರ್ಥಸಮಭಿರೋಹಣಾತ್ಸಮಭಿರೂಢಃ (ಮೇಲೆ ಹೇಳಿದ) ಸತ್ಪ್ರರೂಪಣಾ ಪು. ೮೯ ಮತ್ತು (-ಸ. ಸಿ. ೧, ೩೩)

೨೩ ಪೂ. ಸೂ. ಸತ್ ಪ್ರರೂಪಣಾ ಪು. ೧೦೭-೧೦೮.

೨೪ ನೋಡಿ ಅಕಲಂಕರ 'ತತ್ವಾರ್ಥವಾರ್ತಿಕ' ಭಾ ಜ್ಞಾ. ಪೀ. ಪ್ರಕಾಶನ ಭಾಗ ೧, ಪು. ೭೪.

೨೫ ಪೂ. ಸೂ. ಧವಲಾ ಪ್ರಸ್ತಾವನಾ ಪು.೫೩-೬೩ (೧) ಪು. ೧೦೩ ಉಕ್ತಂಚ ತತ್ವಾರ್ಥಭಾಷ್ಯೇ ಸಂಸಾರಸ್ಯ ಅಂತಃ ಕೃತೋ ಯೈಸ್ತೇಂತಕೃತಃ' (೨) ಉದಾ 'ಕೇಸು ವಿ ಸುತ್ಥಪೊತ್ಥಏಸು ಪುರಿಸವೇದಸ್ಸಂತರಂ ಛಮ್ಮಸಾ' ಧವಲಾ. ಅ. ೩೪೫

೨೬ ಆಕೂಪಾರಂ ಯಶೋಲೋಕೇ ಪ್ರಭಾಚಂದ್ರೋದಯೋಜ್ವಲಂ ।
ಗುರೋಃ ಕುಮಾರಸೇನಸ್ಯ ವಿಚರಿತ್ಯಜಿತಾತ್ಮಕಂ ॥

(ಪುನ್ನಾಟಜಿನಸೇನರ ಹರಿವಂಶ ಸರ್ಗ೧, ಶ್ಲೋ, ೩೮)

ಚಂದ್ರಾಂಶುಶುಭ್ರ ಯಶಸಂ ಪ್ರಭಾಚಂದ್ರಕವಿಂ ಸ್ತುವೇ ।
ಕೃತ್ವಾ ಚಂದ್ರೀದಯಂ ಯೇನ ಶಶ್ವದಾಹ್ಲಾದಿತಂ ಜಗತ್ ।
ಚಂದ್ರೋದಯಕೃತಸ್ತಸ್ಯ ಯಶಸ್ಕೇನ ನ ಶಸ್ಯತೇ ।
ಯದಾಕಲ್ಪಮನಾಮ್ಲಾನಿ ಸತಾಂ ಶೇಖರತಾಂ ಗತಂ ॥

(ಜಿನಸೇನರ ಆದಿಪುರಾಣ., ಪರ್ವ-೧)

೨೭ ಪ್ರಮಾಣಮಕಲಂಕಸ್ಯ ಪೂಜ್ಯಪಾದಸ್ಯ ಲಕ್ಷಣಂ,
ದ್ವಿಸಂಧಾನಕವೇ ಕಾವ್ಯಂ ರತ್ನತ್ರಯಮಪಶ್ಚಿಮಂ ॥

೨೮ ಸಾಧಾರಣವಾಗಿ ಕಾರ್ತಿಕ ಶುಲ್ಕ ಪಕ್ಷತ್ರಯೋದಸಿಯು ನವೆಂಬರ್ ಮಾಹೆಯಲ್ಲಿ ಕೂಡಿಂ ಬರುತ್ತದೆ. ಆದ್ದರಿಂದ ಮಾನ್ಯ ಪ್ರೊ. ಹೀರಾಲಾಲ್ ಜೈನ್ ಅವರು ಹೇಳಿರುವ ಕ್ರಿ. ಶ. ೮–೧೦–೮೧೬) ತಾರೀಖು ಪರಿಷ್ಕರಣಾರ್ಹವಾಗಿದೆ.

೨೯ ಪೂ. ಸೂ. ಕ. ಪಾ. ಪ್ರಸ್ತಾವನಾ ಪು. ೨೬.

೩೦ ಇದೇ ಮೇಲಿನ ಗ್ರಂಥ ಮತ್ತು ಧವಲಾ ಪ್ರಸ್ತಾವನಾ ಪು. ೪೫.

೩೧ ಪೂ. ಸೂ. ಜೈ. ಸಾ. ಔರ್ ಇ. 'ತೀನ್ ಮಹಾನ್ ಗ್ರಂಥಕರ್ತಾ' ಪು. ೪೯೭–೫೨೩.

೩೨ ಜಯಧವಲಾ ಅಂತಿಮ ಪ್ರಶಸ್ತಿ, ಶ್ಲೋ. ಸಂ. ೬ರಿಂದ ೧೧

೩೩ ಪ್ರಥಮ ಸರ್ಗ ಶ್ಲೋ. ೪೦

೩೪ ಪೂ. ಸೂ. ಕ. ಪಾ. ಪ್ರಸ್ತಾವನೆ, ಪು. ೭೫

೩೫ ಪೂ. ಸೂ. ಕ. ಪಾ. ಪ್ರಸ್ತಾವನೆ, ಪು. ೭೬–೭೭

೩೬ ಪೂ. ಸೂ. ಜೈ. ಸಾ. ಔರ್ ಇ. ಪು. ೫೦೮ ಮತ್ತು ೫೧೨.

೩೭ ಸಿದ್ಧಾಂತೋಪನಿಬಂಧಾನಾಂ ವಿಧಾತುರ್ಮದ್ಗುರೋಶ್ಚಿರಂ ।
ಮನ್ಮನಃ ಸರಸಿ ಸ್ಥೇಯಾನ್ಮೃದುಪಾದಕುಶೇಶಯಂ ।
ಧವಲಾ ಭಾರತೀಂ ತಸ್ಯ ಕೀರ್ತಿಂ ಚ ವಿಧುನಿರ್ಮಲಾಂ ।
ಧವಲೀಕೃತನಿಃಶೇಷಭುವನಾಂ ನನ್ನಮೀಃಯಂ ॥ (ಪ್ರಥಮ ಪರ್ವ)

೩೮ ಕವಿಪರಮೇಶ್ವರನಿಗದಿತ ಗದ್ಯಕಥಾಮೃತಕಂ ಪುರೋಶ್ಚರಿತಂ ।
ಸಕಲಚ್ಛಂದೋಲಂಕೃತಿಲಕ್ಷ್ಯಂ ಸೂಕ್ಷ್ಮಾರ್ಥಗೂಢಪದರಚನಂ ।
ವ್ಯಾವರ್ಣನೋರು–ಸಾರಂ ಸಾಕ್ಷಾತ್ಕೃತ ಸರ್ವ ಶಾಸ್ತ್ರಸದ್ಭಾವಂ ।
ಅಪಹಸ್ತಿತಾನ್ಯಕಾವ್ಯಂ ಶ್ರವ್ಯಂ ವ್ಯುತ್ಪನ್ನಮತಿಭಿರಾದೇಯಂ ।
ಜಿನಸೇನ ಭಗವತೋಕ್ತಂ ಮಿಥ್ಯಾಕವಿದರ್ಪದಲನಮತಿಲಲಿತಂ ।
ಸಿದ್ಧಾಂತೋಪನಿಬಂಧನ ಕರ್ತ್ರಾ ಭರ್ತ್ರಾ ಚಿರಾದ್ವಿನಯಾತ್ ।

(ಉತ್ತರಪುರಾಣ–ಪ್ರಸಸ್ತಿ)

೩೯ 'ವಾಯ್ಸ್ ಆಫ್ ಅಹಿಂಸಾ' ತೀರ್ಥಂಕರ ಋಷಭದೇವ ಸ್ಪೆಶಲ್–ವಾಲ್ಯೂಂ ಮಾರ್ಚ್ ಏಪ್ರಿಲ್ ೧೯೫೭ ಪು. 'ಜನರಲ್ ಸರ್ವೇ ಆಫ್ ದಿ ಲಿಟರೇಚರ್ ರಿಲೇಟಿಂಗ ಟು ಆದಿನಾಥ್' ಶ್ರೀ ಕಸ್ತೂರ್ ಚಂದ್ ಕಾಸ್ಲಿವಾಲ್, ಎಂ. ಎ. ಶಾಸ್ತ್ರಿ (ಪರಿಚ್ಛೇದ ೩)

೪೦ 'ಹಿಸ್ಟರಿ ಆಫ್ ಕ್ಲಾಸಿಕಲ್ ಲಿಟರೇಚರ್' ಪು. ೧೫೯.

೪೧ ತಸ್ಯ ಶಿಷ್ಯೋಭವಚ್ಛ್ರೀಮಾನ್ ಜಿನಸೇನಃ ಸಮಿದ್ಧಧೀಃ ।
ಅವಿದ್ಧಾವಪಿ ಯತ್ಕರ್ಣೌ ವಿದ್ಧೌ ಜ್ಞಾನಶಲಾಕಯಾ ।
ಯಸ್ಮಿ ನ್ನಾಸನ್ನಭವ್ಯತ್ವಾನ್ಮುಕ್ತಿಲಕ್ಷ್ಮೀ ಸಮುತ್ಸಕಾ ।
ಸ್ವಯಂ ವರೀತುಕಾಮೇವ ಶ್ರೌತೀಂ ಮಾಲಾಮುಪಾಯಜತ್ ॥
ಯೇನಾನುಚರಿತಾ (ತಂ?) ಬಾಲ್ಯಾದ್ ಬ್ರಹ್ಮ ವ್ರತಮಖಂಡಿತಂ ।
ಸ್ವಯಂವರವಿಧಾನೇನ ಚಿತ್ರಮೂಢಾ ಸರಸ್ವತೀ ।
ಯೋ ನಾತಿಸುಂದರಾಕಾರೋ ನ ಚಾತಿಚತುರೋ ಮೂನಿಃ
ತಥಾಪ್ಯನನ್ಯ ಶರಣಾ ಯಂ ಸರಸ್ವತ್ಯುಪಾಚರತ್ ।
ಧೀಃ ಶಮೋ ವಿನಯಶ್ಚೇತಿ ಯಸ್ಯ ನೈಸರ್ಗಿಕಾ ಗುಣಾಃ ।
ಸೂರೀ ನಾರಾಧಯಂತಿ ಸ್ಮ ಗುಣೈರಾರಾಧ್ಯತೇ ನ ಕಃ ॥

ಪುಟ–೩೨೧

ಯಃ ಕೃಶೋಪಿ ಶರೀರೇಣ ನ ಕೃಶೋಭೋತ್ತಪೋ ಗುಣೈ।
ನಕೃಶತ್ವಂ ಹಿ ಶಾರೀರಂ ಗುಣೈರೇವ ಕೃಶಃ ಕೃಶ॥
*ಯೇ(ಯೋ) ನಾಗ್ರಹೀತ್ಕಪಿಲಿಕಾ ನಾಪ್ಯಚಿಂತಯದಂಜಸಾ।
ತಥಾಪ್ಯಧ್ಯಾತ್ಮ ವಿದ್ಯಾಬ್ಧೇಃ ಪರಂಪಾಮಶಿಶ್ರೀಯತ್॥
ಜ್ಞಾನಾರಾಧನಯಾ ಯಸ್ಯ ಗತಃ ಕಾಲೋನಿರಂತರಂ।
ತತೋಜ್ಞಾನಮಯಂ ಪಿಂಡಂ ಯಮಾಹುಸ್ತತ್ವದರ್ಶಿನಃ।

* ಇದು ಸರಿಯಾದ ಪಾಠವಲ್ಲವೆಂದು ಕಂಡು ಬರುತ್ತದೆ. ಪ್ರಾಯಶಃ ಹೀಗಿರಬಹುದಾಗಿದೆ 'ಯೇನಾಗ್ರಹೀನ್ನಫಲಿಕಾ'

೪೨ ಪೂ. ಸೂ. ಜೈ ಔರ್. ಇ. ಪು. ೫೦೦–೫೦೧

೪೩ ಮಹಾಪುರಾಣ ಪರ್ವ, ೪೩, ಶ್ಲೋ. ೧೪, ೧೭, ೧೮,